ಮೇ 2016

ಸಂಚಿಕೆ – 10 ಸಂಪುಟ – 31

# ಯೋಜನಾ

ಮುಖ್ಯ ಸಂಪಾದಕಿ
**ದೀಪಿಕಾ ಕಚ್ಚಲ್**

ಹಿರಿಯ ಸಂಪಾದಕಿ
**ಪುನೀತಾ ಎಸ್.**

ಹಿರಿಯ ಸಂಪಾದಕಿ
**ಬಿ.ಕೆ. ಕಿರಣ್ಮಯಿ**

ವಿಳಾಸ
ಯೋಜನಾ – ಕನ್ನಡ,
ಪ್ರಕಾಶನ ವಿಭಾಗ,
ಸಮಾಚಾರ ಮತ್ತು ಪ್ರಸಾರ ಸಚಿವಾಲಯ,
ಭಾರತ ಸರ್ಕಾರ,
ಮೊದಲನೆಯ ಅಂತಸ್ತು, 'ಎಫ್'ವಿಂಗ್,
ಕೇಂದ್ರೀಯ ಸದನ, ಕೋರಮಂಗಲ,
ಬೆಂಗಳೂರು – 560 034.
ದೂರವಾಣಿ : 080 – 25537244.
E-mail : yojanakannada@yahoo.com

## ಈ ಸಂಚಿಕೆಯಲ್ಲಿ ..........

ಸಂಪಾದಕೀಯ .......... 2
ಮನದಾಳದ ಮಾತು .......... 3
* **ಕೃಪೆ : ಆಕಾಶವಾಣಿ, ಬೆಂಗಳೂರು**
ವಿಭಿನ್ನ ಸಾಮರ್ಥ್ಯ; ಶಿಕ್ಷಣದ ಹಕ್ಕು – ಅವಕಾಶ .......... 10
* **ಇಂದುಮತಿ ರಾವ್**
ವಿಶೇಷ ಚೇತನರಿಗೆ ಕೌಶಲ್ಯ ತರಬೇತಿ – ಉದ್ಯೋಗ .......... 14
* **ಶಾಂತಿ ರಾಘವನ್**
ದಿವ್ಯಾಂಗರು ಮತ್ತು ಆರ್ಥಿಕ ಒಳಗೊಳ್ಳುವಿಕೆ .......... 17
* **ಪಿ.ಸಿ.ದಾಸ್**
ವಿಶೇಷಚೇತನರ ಸಾಮಾಜಿಕ ಸೇರ್ಪಡೆ .......... 20
* **ಡಾ. ಸಂಧ್ಯಾ ಲಿಮಯೆ**
ಅಸಾಮರ್ಥ್ಯ ಮತ್ತು ವಿವಿಧ ಸಾಮರ್ಥ್ಯಗಳು .......... 23
* **ಅರ್ಚನಾ ಸಿಂಗ್**
ಲಭ್ಯತೆ – ನಾವು ಕಲ್ಪಿಸಬೇಕಾದ ದಾರಿ .......... 26
* **ಡಾ. ಗೌರವ್ ರಹೇಜಾ**
ವೈಕಲ್ಯ ಮೀರಬೇಕಾದ ಸೌಲಭ್ಯ .......... 29
* **ಶಿವಾನಿ ಗುಪ್ತಾ**
ವಿಶೇಷಚೇತನರಿಗೆ ಸಮಾನ ಅವಕಾಶ; ಹಕ್ಕುಗಳ ಸಂರಕ್ಷಣೆ .... 34
* **ಪದ್ಮನಾಭ ಶಿಖರನಹಳ್ಳಿ**
ಸಂವಹನ ಸಾಕ್ಷಾತ್ಕಾರ .......... 38
* **ಸಾವಿತ್ರಿ ಎಸ್. ಆರ್.**
ಕತ್ತಲಿನಿಂದ ಪ್ರಕಾಶಮಾನಕ್ಕೆ .......... 40
* **ಮೋಹನ್ ಕೆ.**
ಸಾಮಾನ್ಯರೊಡನೆ ವಿಶಿಷ್ಟರ ಕೆಲಸ – ಸಾಧ್ಯ .......... 43
* **ಅನುರಾಧ ಎನ್.**
ಶತಕೋಟಿ ದಾಟಿದ ಆಧಾರ್ .......... 45
ದಿವ್ಯಾಂಗನ ಜೀವನಾನುಭವಗಳು .......... 46
* **ಅನಿಲ್ ಕುಮಾರ್**
ನಿಮಗಿದು ತಿಳಿದಿದೆಯೇ? .......... 51
ವಾರ್ತಾ ವಿಶೇಷ .......... 52

ಮುಖಪುಟ ವಿನ್ಯಾಸ : ಗಜಾನನ ಪಿ. ದೋಪೆ

ಯೋಜನೆಯ ಸಂದೇಶವನ್ನು ಎಲ್ಲ ಜನಗಳಿಗೆ ಮುಟ್ಟಿಸಲು, ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಎಲ್ಲ ಸಮಸ್ಯೆಗಳ ಬಗ್ಗೆ ಪ್ರಾಮಾಣಿಕ ಚರ್ಚೆ ಕೈಗೊಳ್ಳುವುದನ್ನು ಯೋಜನಾ ಉತ್ತೇಜಿಸುತ್ತದೆ. ಭಾರತ ಸರ್ಕಾರದ ಸಮಾಚಾರ ಮತ್ತು ಪ್ರಸಾರ ಸಚಿವಾಲಯದಿಂದ ಪ್ರಕಟಿತವಾದರೂ, ಯೋಜನಾ ಕೇವಲ ಅಧಿಕೃತ ದೃಷ್ಟಿಕೋನವನ್ನು ಬಿಂಬಿಸುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಕನ್ನಡ, ಇಂಗ್ಲೀಷ್, ಹಿಂದಿ, ಅಸ್ಸಾಮಿ, ಗುಜರಾತಿ, ಬಂಗಾಲಿ, ಮಲಯಾಳಂ, ಮರಾಠಿ, ತಮಿಳು, ತೆಲುಗು, ಒರಿಯಾ, ಪಂಜಾಬಿ ಮತ್ತು ಉರ್ದು ಭಾಷೆಯಲ್ಲಿ ಯೋಜನಾ ಪ್ರಕಟವಾಗುತ್ತಿದೆ.

**ಚಂದಾ ವಿವರ**

| | |
|---|---|
| ಒಂದು ವರ್ಷಕ್ಕೆ | 230.00 |
| ಎರಡು ವರ್ಷಗಳಿಗೆ | 430.00 |
| ಮೂರು ವರ್ಷಗಳಿಗೆ | 610.00 |


**ಚಂದಾ ಹಣವನ್ನು ಮನಿಯಾರ್ಡರ್ ಮೂಲಕವೇ** ನಮ್ಮ ವಿಳಾಸಕ್ಕೆ ಕಳಿಸಿರಿ.

**ಒಂದು ಪಕ್ಷ ಡಿಮಾಂಡ್ ಡ್ರಾಫ್ಟ್ ಕಳಿಸುವುದಾದರೆ ಅದನ್ನು PUBLICATIONS DIVISION, MINISTRY OF I & B, GOVERNMENT OF INDIA ಹೆಸರಿನಲ್ಲಿ CHENNAI ನಲ್ಲಿ ಸಂದಾಯವಾಗುವಂತೆ ಪಡೆದು ಅದನ್ನು ನಮ್ಮ ವಿಳಾಸಕ್ಕೆ ಕಳುಹಿಸಬೇಕು.**

**ಲೇಖನಗಳಲ್ಲಿ ವ್ಯಕ್ತವಾದ ಅಭಿಪ್ರಾಯಗಳು ಲೇಖಕರವು. ಅವರು ಪ್ರತಿನಿಧಿಸುವ ಸಂಸ್ಥೆ ಅಥವಾ ಸರ್ಕಾರದ ಅಭಿಪ್ರಾಯವಲ್ಲ. ಯೋಜನಾ ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹಿರಾತುಗಳ ಯಥಾರ್ಥತೆ ಆಯಾ ಸಂಸ್ಥೆಗಳ ಹೊಣೆಗಾರಿಕೆಯಾಗಿರುತ್ತದೆ. ಚಿತ್ರಗಳು ಸಾಂದರ್ಭಿಕ.**

ಮುಖ್ಯ ಸಂಪಾದಕರ ಲೇಖನಿಯಿಂದ

## ಸಂಕೋಲೆಗಳನ್ನು ಕಳಚಿ




ಶಕ್ತಿಯ ಸೂತ್ರವನ್ನು ಬಿಡಿಸಿಟ್ಟ ಖ್ಯಾತ ವಿಜ್ಞಾನಿ ಅಲ್ಬರ್ಟ್ ಐನ್‌ಸ್ಟೈನ್ ಅವರಿಗೆ ಕಲಿಕಾ ಶಕ್ತಿಯ ಕೊರತೆಯಿತ್ತು. ಆದರೂ ಅವರು ಯುಗ ಕಂಡರಿಯದ, ಇಂದಿನ ವಿಶ್ವ ಪ್ರಬಲವಾಗಿ ಅವಲಂಬಿಸಿರುವ 'ಸಂಬಂಧ ತತ್ವ'ವನ್ನು ನಿರೂಪಿಸಿದರು. ಮತ್ತೊಬ್ಬ ವಿಜ್ಞಾನಿ ಥಾಮಸ್ ಆಲ್ವ ಎಡಿಸನ್‌ರ ಶ್ರಾವ್ಯ ಶಕ್ತಿ ಮಂದವಾಗಿತ್ತು. ಆದರೆ ಆಧುನಿಕ ಜೀವನದ ಜೀವಾಳ ಎನಿಸಿದ, ವಿದ್ಯುತ್ ಬಲ್ಬ್ ಆವಿಷ್ಕಾರ ಮಾಡಿ ಜಗತ್ತು ಬೆಳಗಿದರು.

ಲೂಯಿಸ್ ಬ್ರೈಲ್ ಸ್ವತಃ ದೃಷ್ಟಿ ಮಾಂದ್ಯರು. ಆದರೆ ಅವರು ಕಂಡು ಹಿಡಿದ 'ಲಿಪಿ' ಇಂದು ದೃಷ್ಟಿ ಮಾಂದ್ಯರಿಗೆ ವರವಾಗಿದೆ; ಅವರು ಓದು–ಬರಹ ಕಲಿತು ಸಶಕ್ತರಾಗಲು ದಾರಿ ತೋರಿದೆ.

ಇದನ್ನೆಲ್ಲಾ ಅವಲೋಕಿಸಿದಾಗ ಯಾವುದೇ ಸಾಧನೆಗೆ ಅಶಕ್ತತೆ ಅಡ್ಡಗಾಲಾಗುವುದಿಲ್ಲ; ಸಾಮರ್ಥ್ಯ ಕಾರಣವಾಗುತ್ತದೆ ಎಂಬ ಅಂಶ ಸ್ಪಷ್ಟವಾಗಿದೆ.

ದೈಹಿಕ ಅಥವಾ ಮಾನಸಿಕ ಅಶಕ್ತತೆ ಒಂದು ರೀತಿಯ ಶಾಪ ಎಂದು ಭಾವಿಸುವ ಕಾಲವೊಂದಿತ್ತು. ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕ್ಕೆ ದೇವರು ವಿಧಿಸಿದ ಶಿಕ್ಷೆ ಎನ್ನುವ ಕಲ್ಪನೆ ಇತ್ತು. ಆಧುನಿಕ ವಿಜ್ಞಾನ ಇಂತಹ ತಪ್ಪು ಕಲ್ಪನೆಗಳನ್ನು ಕೊನೆಗಾಣಿಸಿದೆ. ಅಶಕ್ತತೆ, ಗುಣಪಡಿಸಬಹುದಾದ ಸ್ಥಿತಿ ಎಂಬುದನ್ನು ಮನಗಾಣಲಾಗುತ್ತಿದೆ. ಅಶಕ್ತರನ್ನು ಸಮಾಜದಿಂದ ಹೊರಗಿಟ್ಟು ನೋಡುವ ದೃಷ್ಟಿ ಬದಲಾಗಿದೆ. ಬ್ರೈಲ್ ಲಿಪಿ, ಜೈಪುರ ಕಾಲುಗಳಂತಹ ಸಾಧನಗಳು ದೈಹಿಕ ಅಶಕ್ತತೆಯನ್ನು ಮೀರುವ ಊರುಗೋಲುಗಳಾಗಿವೆ. ಬುದ್ಧಿ ಮಾಂದ್ಯರು ಸಮಾಜದಲ್ಲಿ ಹೆಚ್ಚಿನ ರೀತಿಯಲ್ಲಿ ವ್ಯಾಪಕ ಸ್ವೀಕೃತಿ, ಮಾನ್ಯತೆಗೆ ಪಾತ್ರರಾಗುತ್ತಿದ್ದಾರೆ.

ಇವರೆಲ್ಲರ ವಿಶೇಷ ಶಿಕ್ಷಣದ ಅಗತ್ಯದ ಬಗ್ಗೆ ಜಾಗೃತಿ ಮೂಡುತ್ತಿದೆ. ಇವರಿಗೆ ಪ್ರತ್ಯೇಕ ಶಾಲೆ–ಕಲಿಕೆಗಿಂತ ಎಲ್ಲರನ್ನು ಒಳಗೊಂಡ, ವಾತಾವರಣದ ಎಲ್ಲರ ಶಾಲೆಯಲ್ಲಿ ಶಿಕ್ಷಣ ಒದಗಿಸುವ ವಿಚಾರವೂ ಪ್ರವರ್ಧಮಾನಕ್ಕೆ ಬರುತ್ತಿದೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸಮಗ್ರತೆಯೂ ಚಾಲನೆ ಪಡೆಯಲಿದೆ. ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಸಾಧನಗಳು ವಿಭಿನ್ನ ಸಾಮರ್ಥ್ಯವುಳ್ಳವರೂ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಕ್ರಿಯರಾಗಿ ಪಾಲ್ಗೊಳ್ಳುವಂತೆ ಅವರನ್ನು ಸಶಕ್ತರನ್ನಾಗಿಸಿವೆ. ಅವರು ಯಾರನ್ನೂ ಅವಲಂಬಿಸದೆ ಸ್ವತಂತ್ರರಾಗಿ ಕಾರ್ಯ ನಿರ್ವಹಿಸುವ ವಾತಾವರಣ ಕಲ್ಪಿಸುವ ಪ್ರಯತ್ನ ನಡೆದಿದೆ. ಅಶಕ್ತತೆಯಿಂದ ಬಳಲುತ್ತಿರುವವರಿಗೆ ಎಲ್ಲ ರೀತಿಯ ಸಮಾನ ಅವಕಾಶಗಳನ್ನು ಕಲ್ಪಿಸಿ, ಅವರು ಸುರಕ್ಷಿತ, ಉತ್ಪಾದನಾಯುಕ್ತ, ಸಮ್ಮಾನಯುತ ಜೀವನ ಸಾಗಿಸುವಂತೆ ಮಾಡಲು ಸರ್ಕಾರ, ಲಭ್ಯ ಭಾರತ ಆಂದೋಲನಕ್ಕೆ ಮುಂದಾಗಿದೆ.

ವಿವಿಧ ರೀತಿಯ ಅಶಕ್ತತೆಯನ್ನೂ ಮೀರಿ ಬರುತ್ತಿರುವವರಿಗೆ, ಉದ್ಯೋಗಾವಕಾಶಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚಾಗುತ್ತಿದೆ. ಆ ಮೂಲಕ ಆರ್ಥಿಕ ಒಳಗೊಳ್ಳುವಿಕೆ ಸಾಧ್ಯವಾಗುತ್ತಿದೆ. ಅವರಿಗೆ ಕೌಶಲ್ಯ ತರಬೇತಿ ಒದಗಿಸಲಾಗುತ್ತಿರುವುದರಿಂದ ಉದ್ಯೋಗದಾತರಲ್ಲೂ ವಿಶ್ವಾಸ, ನಂಬಿಕೆ ಮೂಡುತ್ತಿದೆ. ವಿಶೇಷ ಸಾಮರ್ಥ್ಯವುಳ್ಳವರು ಕೈಗೊಳ್ಳುವ ಆವಿಷ್ಕಾರಯುತ ಕಾರ್ಯಗಳಿಗೆ ಬೆಂಬಲ ನೀಡಿ, ಜೀವನ ನಿರ್ವಹಣೆಗೆ ಸಹಾಯ ಮಾಡಲು ಸರ್ಕಾರ ಶಿಷ್ಯ ವೇತನ ಹಾಗೂ ನೆರವು ಒದಗಿಸುತ್ತಿದೆ. ಹೀಗಾಗಿ ಸರ್ಕಾರಿ, ಸರ್ಕಾರೇತರ, ಮನೋರಂಜನೆ, ಕ್ರೀಡೆ ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಇವರು ಇಂದು ಕಾಣಸಿಗುತ್ತಿದ್ದಾರೆ.

ಪ್ರತಿಯೊಂದು ಜೀವಕ್ಕೂ ಒಂದು ಮೌಲ್ಯ ಇರುತ್ತದೆ. ಇದು ನೆಲೆ, ವಯಸ್ಸು, ಲಿಂಗ ಅಥವಾ ಅಶಕ್ತತೆಯನ್ನು ಮೀರಿದ್ದಾಗಿದೆ. ದೈಹಿಕ ಅಥವಾ ಮಾನಸಿಕ ಮಾಂದ್ಯತೆಗಳಿರುವ ವ್ಯಕ್ತಿಗಳು ಸ್ಫೂರ್ತಿ ಪ್ರೇರಕ ಶಕ್ತಿಗಳಾಗಿದ್ದಾರೆ ಎನ್ನುವುದನ್ನು ಅರಿತುಕೊಳ್ಳುವ ಕಾಲ ಸನ್ನಿಹಿತವಾಗಿದೆ. ಅವರಿಗೆ ಸಮಾನ ಅವಕಾಶ ನೀಡಿ; ಅವರು ತಾವು 'ಸಾಮಾನ್ಯ' ಜನರಿಗಿಂತ ವಿಶೇಷ ಸಾಮರ್ಥ್ಯವುಳ್ಳವರು ಎಂಬುದನ್ನು ಸಾಬೀತು ಮಾಡಬಲ್ಲರು.

❑

# ಮನದಾಳದ ಮಾತು




ಪ್ರಧಾನ ಮಂತ್ರಿ
ಶ್ರೀ ನರೇಂದ್ರ ಮೋದಿಯವರು
ದಿನಾಂಕ
24-04-2016ರಂದು
ಮಾಡಿದ
'ಮನ್ ಕಿ ಬಾತ್'
19ನೇ ಭಾಗದ
ಕನ್ನಡ ಅವತರಣಿಕೆ.

ನನ್ನ ಪ್ರೀತಿಯ ದೇಶಬಾಂಧವರೇ, ನಿಮಗೆಲ್ಲಾ ನಮಸ್ಕಾರ. ರಜಾದಿನಗಳಲ್ಲಿ ಒಬ್ಬೊಬ್ಬರು ಒಂದೊಂದು ಕಾರ್ಯಕ್ರಮ ಹಾಕಿಕೊಂಡಿರುತ್ತಾರೆ. ಈ ದಿನಗಳಲ್ಲಿ ಮಾವಿನ ಸೀಸನ್ ಇರುತ್ತದೆ, ಮಾವಿನ ಹಣ್ಣು ತಿನ್ನಬೇಕು ಎನ್ನುವ ಮನಸ್ಸಾಗುತ್ತದೆ; ಮಧ್ಯಾಹ್ನದ ಹೊತ್ತು ಸ್ವಲ್ಪ ಹೊತ್ತು ಮಲಗಬೇಕು, ಸಮಯ ಸಿಕ್ಕರೆ ಒಳ್ಳೆಯದು ಅನ್ನಿಸುತ್ತದೆ. ಆದರೆ, ಈ ಬಾರಿಯ ಭಯಂಕರ ಸೆಖೆ, ರಜಾದಿನಗಳ ಮಜಾವನ್ನೇ ಹಾಳು ಮಾಡಿದೆ ಅನ್ನಬಹುದು. ಈ ಕಾರಣಕ್ಕೆ ದೇಶ ಚಿಂತಿತವಾಗುವುದು ಸಹಜವೇ ಆಗಿದೆ. ಮತ್ತೆ ಮತ್ತೆ ಬರ ಬಂದರಂತೂ ನೀರಿನ ಆಕರಗಳು ಬತ್ತಿ ಹೋಗುತ್ತವೆ. ಕೆಲವೊಮ್ಮೆ ಎನ್ಕ್ರೋಚ್‌ಮೆಂಟ್ನಿಂದಾಗಿಯೊ, ಹೂಳು ಸೇರಿಕೊಂಡಿರುವುದರಿಂದಾಗಿಯೊ ಜಲಾಶಯಗಳಲ್ಲಿ ನೀರಿನ ಸಂಗ್ರಹಣೆಯೂ ಕಡಿಮೆ ಆಗುತ್ತದೆ. ಬರದ ಸಂಕಷ್ಟವನ್ನು ನೀಗುವುದಕ್ಕಾಗಿ ಸರ್ಕಾರಗಳು ಹಲವು ಬಗೆಯ ಪ್ರಯಾಸಗಳನ್ನು ಮಾಡಬೇಕು ಅನ್ನುವುದಂತೂ ನಿಜ, ಅದರ ಜೊತೆಯಲ್ಲಿ ನಾಗರಿಕರೂ ಕೂಡ ಅನೇಕ ಬಗೆಯಲ್ಲಿ ಪ್ರಯತ್ನಗಳನ್ನು ಮಾಡುತ್ತಾ ಇರುವುದನ್ನು ನಾನು ನೋಡುತ್ತಾ ಇದ್ದೇನೆ. ಹಲವು ಗ್ರಾಮಗಳಲ್ಲಿ ಈ ಕುರಿತು ಮುನ್ನೆಚ್ಚರಿಕೆ ವಹಿಸುತ್ತಾರೆ; ನೀರಿಗಾಗಿ ಪರಿತಪಿಸುವವರಿಗೆ ನೀರಿನ ಮೌಲ್ಯ ಏನು ಎಂದು ಗೊತ್ತಿರುತ್ತದೆ. ಆದ್ದರಿಂದ ಇಂಥ ಸ್ಥಳಗಳಲ್ಲಿ ನೀರಿನ ಕುರಿತು ಒಂದು ಬಗೆಯ ಸಂವೇದನಾಶೀಲತೆ ಬೆಳೆದಿರುತ್ತದೆ. ಏನಾದರೊಂದು ಮಾಡುವ ಸಕ್ರಿಯತೆಯೂ ಮೂಡಿರುತ್ತದೆ.

ಕೆಲವು ದಿನಗಳ ಹಿಂದೆ ನನಗೆ ಯಾರೋ ಹೇಳುತ್ತಾ ಇದ್ದರು, ಮಹಾರಾಷ್ಟ್ರದ ಅಹಮದನಗರ್ ಜಿಲ್ಲೆಯ ಹಿವರೇ ಬಾಜ಼ಾರ್ ಗ್ರಾಮದ ಗ್ರಾಮಪಂಚಾಯಿತಿ ಮತ್ತು ಅಲ್ಲಿನ ಗ್ರಾಮವಾಸಿಗಳು ನೀರಿನ ಸಮಸ್ಯೆಯನ್ನು ಬಹಳ ಸೂಕ್ಷ್ಮ ರೀತಿಯಲ್ಲಿ ನಿಭಾಯಿಸಿದ್ದಾರೆ ಎಂದು. ನೀರಿನ ಸಂಗ್ರಹ ಮಾಡುವವರು ಹಲವು ಗ್ರಾಮಗಳಲ್ಲಿ ಸಿಗುತ್ತಾರೆ; ಆದರೆ, ಇವರು ಊರಿನ ರೈತರ ಜೊತೆ ಸಮಾಲೋಚನೆ ಮಾಡಿ, ಅಲ್ಲಿನ ಬೆಳೆಯ ವಿಧಾನವನ್ನೇ ಬದಲಾಯಿಸಿ ಬಿಟ್ಟಿದ್ದಾರೆ. ಕಬ್ಬು, ಬಾಳೆ ಇಂಥ ಹೆಚ್ಚು ನೀರಿನ ಅಗತ್ಯ ಬೀಳುವಂತಹ ಬೆಳೆಯನ್ನು ಅವರು ಬೆಳೆಯಬಾರದು ಎಂದು ನಿರ್ಧಾರ ಮಾಡಿದ್ದಾರೆ. ಕೇಳುವುದಕ್ಕೇನೊ ಬಹಳ ಸರಳ ಅನಿಸುತ್ತದೆ. ಆದರೆ ಇದು ಅಷ್ಟು ಸರಳವಾದ ಮಾತಲ್ಲ. ಎಲ್ಲರೂ ಸೇರಿ ಇವರು ಎಂಥ ದೊಡ್ಡ ಸಂಕಲ್ಪವನ್ನು ಮಾಡಿದ್ದಾರೆ ನೋಡಿ. ಯಾರಾದರೂ ಕಾರ್ಖಾನೆಯವರು ನೀರನ್ನು ಬಳಸುತ್ತಾ ಇರುತ್ತಾರೆ; ಅವರಿಗೆ, ನೋಡಿ ನೀವು ಬಹಳಷ್ಟು ನೀರನ್ನು ಬಳಸುತ್ತಾ ಇದ್ದೀರಿ, ಅದರಿಂದ ಕಾರ್ಖಾನೆಯನ್ನು ಬಂದ್ ಮಾಡಿ – ಅಂತ ಹೇಳಿದರೆ ಪರಿಣಾಮ ಏನಾಗುತ್ತದೆ ಎಂದು ಗೊತ್ತಿದೆ ಅಲ್ಲವೆ?

ಆದರೆ ಈ ನನ್ನ ರೈತಬಾಂಧವರನ್ನು, ನೋಡಿ. ಅವರಿಗೆ ಅನ್ನಿಸಿತು, ಕಬ್ಬಿಗೆ ಬಹಳಷ್ಟು ನೀರು ಬೇಕಲ್ಲವೇ, ಅದನ್ನು ಬೆಳೆಯುವುದೇ ಬೇಡ ಎಂದು ಅದನ್ನು ಬಿಟ್ಟುಬಿಟ್ಟರು. ಅದರ ಬದಲು ಕಡಿಮೆ ನೀರಿನ ಅಗತ್ಯ ಇರುವಂಥ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುವುದಕ್ಕೆ ಶುರು ಮಾಡಿದರು. ಅವರು, ತುಂತುರು, ಹನಿನೀರಾವರಿ, ಮಳೆನೀರಿನ ಸಂಗ್ರಹಣೆ, ಅಂತರ್ಜಲದ ಮರುಪೂರಣ – ಇಂಥ ಎಷ್ಟೊಂದು ಕ್ರಮಗಳನ್ನು ಅನುಸರಿಸಿದ್ದಾರೆ ಎಂದರೆ, ನೀರಿನ ಸಂಕಷ್ಟವನ್ನು ತನ್ನದೇ ಆದ ರೀತಿಯಲ್ಲಿ ಎದುರಿಸುವ ಸಾಮರ್ಥ್ಯವನ್ನು ಇವತ್ತು ಈ ಗ್ರಾಮ ಪಡೆದಿದೆ. ಆದರೂ, ನಾನು ಹಿವರೇ ಬಾಜ಼ಾರ್ ಅನ್ನುವ ಒಂದು ಚಿಕ್ಕ ಗ್ರಾಮದ ವಿಚಾರ ಮಾತ್ರ ಮಾತನಾಡುತ್ತಾ ಇದ್ದೀನಾ? ಇಲ್ಲ. ಇಂಥ ಅನೇಕ ಗ್ರಾಮಗಳು ನಮ್ಮಲ್ಲಿ ಇವೆ. ಇಂಥ ಎಲ್ಲಾ ಗ್ರಾಮಗಳ

* ಕೃಪೆ : ಆಕಾಶವಾಣಿ, ಬೆಂಗಳೂರು.



ಗ್ರಾಮವಾಸಿಗಳ ಇಂಥ ಉತ್ತಮ ಕೆಲಸಕ್ಕಾಗಿ ಅವರಿಗೆ ನಾನು ಅಭಿನಂದನೆಯನ್ನು ಹೇಳುತ್ತಾ ಇದ್ದೇನೆ.

ಇನ್ನೊಂದು ವಿಷಯ ನನಗೆ ಗೊತ್ತಾಯಿತು. ಮಧ್ಯಪ್ರದೇಶದ ದೇವಾಸ್ ಜಿಲ್ಲೆಯ ಗೋರವಾ ಗ್ರಾಮದಲ್ಲಿ ಗ್ರಾಮಪಂಚಾಯಿತಿಯು ಕೃಷಿ ಹೊಂಡಗಳನ್ನು ತೋಡುವ ಕಾರ್ಯಯೋಜನೆಯನ್ನು ಹಾಕಿಕೊಂಡಿತು. ಸುಮಾರು 27 ಕೃಷಿ ಹೊಂಡಗಳನ್ನು ತೋಡಿತು, ಇದರಿಂದಾಗಿ ಊರಲ್ಲಿನ ಅಂತರ್ಜಲದ ಮಟ್ಟ ಸುಧಾರಿಸಿತು; ಬಾವಿಗಳಲ್ಲಿ ನೀರು ಮೇಲೆ ಬಂತು. ಬೆಳೆಗೆ ನೀರಿನ ಅಗತ್ಯ ಬಿದ್ದಾಗಲೆಲ್ಲಾ ನೀರು ಸಿಕ್ಕಿತು. ಅವರು ಒಂದು ಅಂದಾಜಿನಲ್ಲಿ ಹೇಳುತ್ತಾರೆ, ಅವರ ಕೃಷಿ ಉತ್ಪನ್ನದಲ್ಲಿ ಸುಮಾರು ಶೇಕಡಾ 20ರಷ್ಟು ವೃದ್ಧಿಯಾಗಿದೆ ಎಂದು. ನೀರಿನ ಉಳಿತಾಯವಂತೂ ಆಯಿತು; ಜೊತೆಗೆ ಅಂತರ್ಜಲದ ಮಟ್ಟ ಮೇಲೆ ಬಂದಾಗ, ನೀರಿನ ಗುಣಮಟ್ಟದಲ್ಲಿಯೂ ಸುಧಾರಣೆ ಆಗುತ್ತದೆ. ಜಗತ್ತಿನಲ್ಲಿ ಹೇಳುತ್ತಾರೆ, ಶುದ್ಧ ಕುಡಿಯುವ ನೀರು ದೇಶದ ಜಿಡಿಪಿಯ ವೃದ್ಧಿಗೆ ಕಾರಣವಾಗುತ್ತದೆ ಎಂದು. ಆರೋಗ್ಯದ ಸುಧಾರಣೆಯಂತೂ ಆಗೇ ಆಗುತ್ತದೆ. ಕೆಲವೊಮ್ಮೆ ಅನಿಸುತ್ತದೆ, ಭಾರತ ಸರ್ಕಾರ ರೈಲಿನ ಮುಖಾಂತರ ಲಾತೂರಿಗೆ ನೀರನ್ನು ತಲುಪಿಸಿದ್ದು ಜಗತ್ತಿನ ಮಟ್ಟಿಗೆ ಒಂದು ಸುದ್ದಿ ಆಗುತ್ತದೆ. ರೈಲ್ವೆ ಇಲಾಖೆ ಎಷ್ಟೊಂದು ಶೀಘ್ರಗತಿಯಲ್ಲಿ ಕಾರ್ಯಾಚರಣೆ ಮಾಡಿತು ಅನ್ನುವುದು ಪ್ರಶಂಸನೀಯವೇ ಸರಿ, ಅದಕ್ಕಿಂತ ಹೆಚ್ಚಿನ ಪ್ರಶಂಸೆಗೆ ಪಾತ್ರರು ಅಂದರೆ ಆ ಊರಿನ ನಾಗರಿಕರು. ಇಂಥ ಅನೇಕ ಜನೋಪಯೋಗಿ ಕಾರ್ಯಕ್ರಮಗಳು ಜನರ ಪ್ರಯತ್ನದಿಂದಲೇ ನಡೆಯುತ್ತವೆ. ಆದರೆ ಇವು ಬೆಳಕಿಗೆ ಬರುವುದಿಲ್ಲ. ಸರ್ಕಾರದ ಒಳ್ಳೆ ಕೆಲಸಗಳಂತೂ ಆಗೀಗ ಪ್ರಕಟ ಆಗುತ್ತವೆ. ಆದರೆ, ನಮ್ಮ ಸುತ್ತಮುತ್ತ ನೋಡುವುದಾದರೆ, ಬರದ ಸಮಸ್ಯೆಯನ್ನು ಬಗೆಹರಿಸುವುದಕ್ಕೋಸ್ಕರ ಜನರೇ ಹೊಸಹೊಸ ರೀತಿಯಲ್ಲಿ ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ ಎನ್ನುವುದು ನಮ್ಮ ಗಮನಕ್ಕೆ ಬರುತ್ತದೆ. ಎಷ್ಟೇ ಸಂಕಟದಲ್ಲಿದ್ದರೂ, ಎಲ್ಲಿಂದಾದರೂ ಒಂದು ಒಳ್ಳೆಯ ಸುದ್ದಿ ಕೇಳಿಬಂದರೆ, ಇಡೀ ಸಂಕಟ ದೂರ ಆಯಿತೇನೊ ಅನ್ನುವ ತರಹ ಭಾವನೆ ಬರುತ್ತದೆ. ಇದು ಒಂದು ರೀತಿಯ ಮನುಷ್ಯನ ಸ್ವಭಾವ. ಈ ವರ್ಷ ಮಳೆ ಶೇಕಡಾ 106 ರಿಂದ ಶೇ. 110 ರಷ್ಟು ಆಗುವ ಸಂಭವ ಇದೆ ಎನ್ನುವ ಸುದ್ದಿ ಕೇಳಿದಾಗ ಒಂದು ಬಹಳ ಮಹತ್ವದ ಶಾಂತಿಯ ಸಂದೇಶವನ್ನು ಕೇಳಿದ ಅನುಭವ ಆಗಿದೆ. ಮಳೆ ಬರುವುದಕ್ಕೆ ಇನ್ನೂ ಸಮಯ ಇದೆ. ಆದರೂ ಒಳ್ಳೆಯ ಮಳೆ ಆಗುತ್ತದೆ ಎನ್ನುವ ಸುದ್ದಿಯೇ ಒಂದು ರೀತಿಯ ಹೊಸ ಚೈತನ್ಯವನ್ನು ತಂದಿದೆ.


ಆದರೆ, ನನ್ನ ಪ್ರೀತಿಯ ದೇಶಬಾಂಧವರೇ, ಒಳ್ಳೆಯ ಮಳೆ ಆಗುತ್ತದೆ ಎನ್ನುವ ಸುದ್ದಿ ಆನಂದವನ್ನು ತರುತ್ತದೆ; ಜೊತೆಗೆ ಅದು ಎಲ್ಲರಿಗಾಗಿ ಹೊಸ ಅವಕಾಶಗಳನ್ನೂ ತರುತ್ತದೆ; ಹೊಸ ಸವಾಲುಗಳನ್ನು ಒಡ್ಡುತ್ತದೆ. ನಾವು ಪ್ರತಿ ಗ್ರಾಮದಲ್ಲಿಯೂ ನೀರಿನ ಸಂಗ್ರಹಣೆ, ನೀರಿನ ಉಳಿತಾಯವನ್ನು ಮಾಡುವ ಒಂದು ಅಭಿಯಾನವನ್ನು ಈಗಿನಿಂದಲೇ ಆರಂಭಿಸಬಹುದೇ? ರೈತರಿಗೆ ಫಲವತ್ತಾದ ಮಣ್ಣು ಬೇಕು; ಅದನ್ನು ಹೊಲಗಳಲ್ಲಿ ಹಾಕಿದರೆ ಒಳ್ಳೆಯ ಬೆಳೆ ಬರುತ್ತದೆ. ನಾವು ಯಾಕೆ ಈ ಬಾರಿ ಊರಿನ ಕೆರೆಗಳಲ್ಲಿ ತುಂಬಿಕೊಂಡಿರುವ ಹೂಳು ಮಣ್ಣನ್ನು ಎತ್ತಿಕೊಂಡು ಬಂದು ಹೊಲಗಳಲ್ಲಿ ಹಾಕಬಾರದು? ಇದರಿಂದ ಒಂದು ಹೊಲದ ಫಲವತ್ತತೆಯೂ ಹೆಚ್ಚಾಗುತ್ತದೆ, ಅದರ ನೀರು ಸಂಗ್ರಹಣೆಯ ಸಾಮರ್ಥ್ಯವೂ ಹೆಚ್ಚಾಗುತ್ತದೆ. ಸಿಮೆಂಟಿನ ಚೀಲ, ರಸಗೊಬ್ಬರದ ಚೀಲ ಇವುಗಳಲ್ಲಿ ಕಲ್ಲು ಮಣ್ಣು ತುಂಬಿ, ನೀವು ವ್ಯರ್ಥ ಹರಿದು ಹೋಗುವ ದಾರಿಗಳಿಗೆ ಅಡ್ಡ ಇಟ್ಟು ನೀರನ್ನು ತಡೆಗಟ್ಟಬಹುದಲ್ಲವೆ? ಐದು ದಿನ, ಏಳು ದಿನ ನೀರು ನಿಂತರೇ ಅದು ಭೂಮಿಯಲ್ಲಿ ಇಂಗುತ್ತದೆ. ಭೂಮಿಯಲ್ಲಿ ನೀರಿನ ಮಟ್ಟ ಮೇಲೆ ಬರುತ್ತದೆ. ನಮ್ಮ ಬಾವಿಗಳಲ್ಲೂ ನೀರು ತುಂಬುತ್ತದೆ. ಎಷ್ಟು ಸಾಧ್ಯವೋ ಅಷ್ಟು ನೀರನ್ನು ತಡೆಯಬೇಕು. ಗ್ರಾಮದಲ್ಲಿ ಬೀಳುವ ಮಳೆಯ ನೀರು ಆ ಗ್ರಾಮದ ನೀರು. ಅದು ಅಲ್ಲೇ ಇರಬೇಕು, ಅಲ್ಲೇ ಬಳಕೆ ಆಗಬೇಕು ಎನ್ನುವ ಸಂಕಲ್ಪವನ್ನು ನಾವು ಮಾಡಬೇಕು; ಮತ್ತು ಇದನ್ನು ಸಾಧ್ಯ ಮಾಡುವುದಕ್ಕಾಗಿ ತಕ್ಕ ಕಾರ್ಯಯೋಜನೆಯನ್ನು ಹಾಕಿಕೊಳ್ಳಬೇಕು; ಇದು ಸಾಮೂಹಿಕ ಪ್ರಯತ್ನದಿಂದ ಸಾಧ್ಯವಾಗುತ್ತದೆ.

ಇವತ್ತು ನೀರಿನ ಸಂಕಷ್ಟ ಇರಬಹುದು, ಬರದ ಪರಿಸ್ಥಿತಿ ಇರಬಹುದು, ಆದರೆ, ಈಗ ನಮ್ಮ ಮುಂದೆ ಒಂದು ಒಂದೂವರೆ ತಿಂಗಳ ಸಮಯ ಇದೆ. ನಾನು ಯಾವಾಗಲೂ ಹೇಳುತ್ತಿರುತ್ತೇನೆ, ಮಹಾತ್ಮ ಗಾಂಧಿಯವರ ಜನ್ಮ ಸ್ಥಳವಾದ ಪೋರ್‌ಬಂದರಿಗೆ ಹೋದರೆ, ಅಲ್ಲಿ ಬೇರೆ ಬೇರೆ ಸ್ಥಳಗಳನ್ನು ನಾವು ನೋಡುತ್ತೇವೆ. ಅಲ್ಲಿ ನೋಡಲೇ ಬೇಕಾದ ಇನ್ನೊಂದು ಸ್ಥಳವೂ ಇದೆ. ಅಲ್ಲಿನ ಮನೆಗಳ ಅಡಿಯಲ್ಲಿ ಮಳೆ ನೀರಿನ ಸಂಗ್ರಹ ಮಾಡುವುದಕ್ಕಾಗಿ ದೊಡ್ಡ ದೊಡ್ಡ ಟ್ಯಾಂಕುಗಳನ್ನು ಕಟ್ಟಿದ್ದಾರೆ; ಅವುಗಳಲ್ಲಿ ಸಂಗ್ರಹವಾಗಿರುವ ನೀರು ಅದೆಷ್ಟು ಶುದ್ಧವಾಗಿರುತ್ತದೆ; ಇದು ನೂರು ಇನ್ನೂರು ವರ್ಷಗಳಿಂದ ನಡೆದುಕೊಂಡು ಬಂದಿರುವ ಸಂಪ್ರದಾಯ. ಇದನ್ನೂ ಅಲ್ಲಿ ನೋಡಬಹುದು.



ಒಬ್ಬರು, ಕುಮಾರ್ ಕೃಷ್ಣ ಅನ್ನುವವರು, mygovನಲ್ಲಿ ಬರೆದಿದ್ದಾರೆ, ಒಂದು ರೀತಿ ಜಿಜ್ಞಾಸೆಯನ್ನೂ ಮಾಡಿದ್ದಾರೆ, ಅವರು ಅನ್ನುತ್ತಾರೆ, ನಾವು ಇರುವವರೆಗೆ ಗಂಗೆಯ ಶುದ್ಧೀಕರಣ ಅಭಿಯಾನ ಸಾಧ್ಯವಾಗುತ್ತದೆಯೇ? ಅವರ ಆತಂಕ ಬಹಳ ಸ್ವಾಭಾವಿಕವಾಗಿದೆ. ಏಕೆಂದರೆ, ಈ ಕಾರ್ಯ ಸುಮಾರು 30 ವರ್ಷಗಳಿಂದ ನಡೆಯುತ್ತಾ ಇದೆ. ಹಲವು ಸರ್ಕಾರಗಳು ಬಂದವು, ಹಲವು ಯೋಜನೆಗಳು ಆದವು, ಬೃಹತ್ ಪ್ರಮಾಣದಲ್ಲಿ ವೆಚ್ಚವೂ ಆಯಿತು. ಹೀಗಾಗಿ, ಕುಮಾರ್‌ಕೃಷ್ಣರಂತಹ ಕೋಟ್ಯಾಂತರ ದೇಶವಾಸಿಗಳ ಮನಸ್ಸಿನಲ್ಲಿ ಈ ರೀತಿಯ ಪ್ರಶ್ನೆ ಏಳುವುದು ಸ್ವಾಭಾವಿಕವೇ ಆಗಿದೆ.

ಧಾರ್ಮಿಕ ಮನೋಭಾವದವರಿಗೆ ಗಂಗೆ ಮೋಕ್ಷದಾಯಿನಿ ಆಗಿದ್ದಾಳೆ. ನಾನು



ಆ ಉದಾತ್ತತೆಯನ್ನು ಸ್ವೀಕರಿಸುತ್ತೇನೆ. ಆದರೆ ಅದಕ್ಕಿಂತ ಮಹತ್ವದ ವಿಚಾರ ಅಂದರೆ ಗಂಗೆಯು ಜೀವನದಾಯಿನಿ ಆಗಿದ್ದಾಳೆ. ಗಂಗೆಯಿಂದಾಗಿ ನಮಗೆ ತಿನ್ನಲು ಅನ್ನ ಸಿಗುತ್ತದೆ. ಗಂಗೆಯಿಂದಾಗಿ ನಮಗೆ ಹೊಟ್ಟೆಹೊರೆಯುವ ಮಾರ್ಗ ಸಿಗುತ್ತದೆ. ಗಂಗೆಯಿಂದಾಗಿ ನಮಗೆ ಬದುಕುವ ಒಂದು ಹೊಸ ಚೈತನ್ಯ ಸಿಗುತ್ತದೆ. ಗಂಗಾ ನದಿ ತಾನು ಹರಿದ ಕಡೆಯೆಲ್ಲಾ, ದೇಶದ ಆರ್ಥಿಕ ಚಟುವಟಿಕೆಗಳಿಗೆ ಒಂದು ಹೊಸ ಆವೇಗವನ್ನು ನೀಡುತ್ತದೆ. ಒಬ್ಬ ಭಗೀರಥ ನಮಗೆ ಗಂಗೆಯನ್ನು ತಂದೇನೋ ಕೊಟ್ಟಿದ್ದಾನೆ, ಆದರೆ, ಇದನ್ನು ಉಳಿಸಿಕೊಳ್ಳಲು ಕೋಟ್ಯಂತರ ಭಗೀರಥರ ಪರಿಶ್ರಮದ ಅಗತ್ಯವಿದೆ. ಜನರ ಸಹಭಾಗಿತ್ವದ ಹೊರತಾಗಿ ಈ ಕೆಲಸ ಆಗುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಶುದ್ಧೀಕರಣಕ್ಕಾಗಿ, ಸ್ವಚ್ಛತೆಗಾಗಿ ನಾವು ಒಂದು ಚೇಂಜ್ ಏಜೆಂಟ್ ಆಗಬೇಕಾಗಿದೆ. ಮತ್ತೆ ಮತ್ತೆ ಈ ಮಾತನ್ನು ಹೇಳಬೇಕಾಗುತ್ತದೆ. ಸರ್ಕಾರದ ಕಡೆಯಿಂದ ಅನೇಕ ಪ್ರಯತ್ನಗಳು ನಡೆಯುತ್ತಾ ಇವೆ. ಗಂಗಾ ನದಿಯ ದಡದಲ್ಲಿರುವ ರಾಜ್ಯಗಳ ಸಹಯೋಗವನ್ನೂ ಪಡೆಯುವ ಪ್ರಯತ್ನಗಳೂ ನಡೆದಿವೆ. ಸಮತಲದ ಸ್ವಚ್ಛತೆ, ಕೈಗಾರಿಕಾ ಮಾಲಿನ್ಯವನ್ನು ತಡೆಗಟ್ಟುವುದು ಇವುಗಳ ಕುರಿತು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ. ಪ್ರತಿದಿನ ನಾಲೆಗಳ ಮುಖಾಂತರ ಬಹಳ ದೊಡ್ಡ ಪ್ರಮಾಣದಲ್ಲಿ ತ್ಯಾಜ್ಯ, ಗಂಗೆಯಲ್ಲಿ ಸೇರಿಕೊಳ್ಳುತ್ತದೆ. ಇಂಥ ಕಸವನ್ನು ಸ್ವಚ್ಛಗೊಳಿಸುವ ಸಲುವಾಗಿ ವಾರಣಾಸಿ, ಅಲಹಾಬಾದ್, ಕಾನ್ಪುರ್, ಪಾಟ್ನಾ ಇಂಥ ಜಾಗಗಳಲ್ಲಿ ಟ್ರ್ಯಾಷ್ ಸ್ಕಿಮ್ಮರುಗಳು ನೀರಿನಲ್ಲಿ ತೇಲುವ ಕಸವನ್ನು ಬೇರ್ಪಡಿಸುವ ಕೆಲಸವನ್ನು ಮಾಡುತ್ತಿವೆ. ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ಈ ಎಚ್ಚರಿಕೆಯನ್ನು ನೀಡಲಾಗಿದೆ, ಇದನ್ನು ನಿರಂತರವಾಗಿ ನಡೆಸಿ ಅಲ್ಲಲ್ಲಿಯೇ ತ್ಯಾಜ್ಯವನ್ನು ಸ್ವಚ್ಛಗೊಳಿಸಬೇಕು ಎಂಬ ಸೂಚನೆಯನ್ನು ನೀಡಲಾಗಿದೆ. ನನಗೆ ತಿಳಿದುಬಂದಿರುವ ಪ್ರಕಾರ, ಈ ಕಾರ್ಯ ಚೆನ್ನಾಗಿ ನಡೆಯುತ್ತಿರುವ ಕಡೆ ದಿನವೊಂದಕ್ಕೆ ಮೂರರಿಂದ ಹನ್ನೊಂದು ಟನ್ನುಗಳಷ್ಟು ತ್ಯಾಜ್ಯವನ್ನು ತೆಗೆಯಲಾಗುತ್ತಿದೆ.

ಇದರರ್ಥ, ಅಷ್ಟೊಂದು ಪ್ರಮಾಣದಲ್ಲಿ ಹೊಲಸು ನದಿಯಲ್ಲಿ ಸೇರಿಕೊಳ್ಳುವುದನ್ನು ತಡೆದಂತಾಯಿತು. ಮುಂಬರುವ ದಿನಗಳಲ್ಲಿ ಇನ್ನಷ್ಟು ಸ್ಥಾನಗಳಲ್ಲಿ ಟ್ರ್ಯಾಷ್ ಸ್ಕಿಮ್ಮರ್ ಗಳನ್ನು ಸ್ಥಾಪಿಸುವ ಯೋಜನೆ ಇದೆ; ಬಹಳ ಬೇಗನೇ ಇವುಗಳ ಲಾಭದ ಅನುಭವ ಗಂಗೆ ಮತ್ತು ಯಮುನೆಯ ದಡದಲ್ಲಿ ವಾಸಿಸುವ ಜನರಿಗೆ ಆಗುತ್ತದೆ. ಕೈಗಾರಿಕಾ ಮಾಲಿನ್ಯವನ್ನು ತಡೆಗಟ್ಟುವ ಸಲುವಾಗಿ, ಪಲ್ಪ್ ಮತ್ತು ಪೇಪರ್, ಡಿಸ್ಟಿಲರಿ ಮತ್ತು ಸಕ್ಕರೆ ಕಾರ್ಖಾನೆಗಳ ಜೊತೆಯಲ್ಲಿ ಒಂದು ಕ್ರಿಯಾಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಸ್ವಲ್ಪ ಮಟ್ಟಿಗೆ ಇದರ ಅನುಷ್ಠಾನ ಆಗುತ್ತಿದೆ. ಈ ಯೋಜನೆಯೂ ಉತ್ತಮ ಪರಿಣಾಮಗಳನ್ನು ನೀಡಬಲ್ಲದು ಎಂದು ನನಗೆ ಈಗಲೇ ಅನಿಸುತ್ತಿದೆ.



ನನಗೆ ತಿಳಿದುಬಂದ ಪ್ರಕಾರ, ಉತ್ತರಾಖಂಡ್ ಮತ್ತು ಉತ್ತರ ಪ್ರದೇಶದಲ್ಲಿ ಇರುವ ಡಿಸ್ಟಿಲರಿಗಳ ಡಿಸ್ಚಾರ್ಜ್ ಇರುತ್ತದೆಯಲ್ಲ, ಕೆಲವು ಅಧಿಕಾರಿಗಳು ನನಗೆ ಹೇಳಿದ ಪ್ರಕಾರ ಅವು ಜೀರೋ ಲಿಕ್ವಿಡ್ ಡಿಸ್ಚಾರ್ಜ್ ಸ್ಥಿತಿಯನ್ನು ಸಾಧಿಸಿವೆ. ಪಲ್ಪ್ ಮತ್ತು ಪೇಪರ್ ಉದ್ಯಮ ಅಥವಾ ಬ್ಲ್ಯಾಕ್ ಲಿಕ್ಕರ್ ಇವುಗಳ ವಿಸರ್ಜನೆ ಪೂರ್ತಿಯಾಗಿ ನಿಲ್ಲುತ್ತಾ ಇದೆ. ನಾವು ಸರಿಯಾದ ದಿಕ್ಕಿನಲ್ಲಿ ಸಾಗುತ್ತಿದ್ದೇವೆ; ಜನರಲ್ಲಿ ಜಾಗೃತಿಯೂ ಹೆಚ್ಚಾಗಿದೆ ಎನ್ನುವುದಕ್ಕೆ ಇವು ಸಾಕ್ಷಿಯಾಗಿವೆ.

ನಾನು ನೋಡಿರುವ ಹಾಗೆ, ಗಂಗೆಯ ದಡದಲ್ಲಿ ವಾಸಿಸುವ ಜನ ಅಷ್ಟೇ ಅಲ್ಲ, ದೂರದ ದಕ್ಷಿಣದ ವ್ಯಕ್ತಿಗಳು ಸಿಕ್ಕಾಗಲೂ ಖಂಡಿತ ಕೇಳುತ್ತಾರೆ. ಸ್ವಾಮೀ, ಗಂಗೆಯ ಶುದ್ಧೀಕರಣ ಆಗುತ್ತದೆ ಅಲ್ಲವೇ? ಜನರಲ್ಲಿ ಇರುವ ಈ ಶ್ರದ್ಧೆಯೇ ಖಂಡಿತವಾಗಿ ನಮಗೆ ಗಂಗೆಯ ಶುದ್ಧೀಕರಣದ ಕಾರ್ಯದಲ್ಲಿ ಸಫಲತೆಯನ್ನು ತಂದುಕೊಡುತ್ತದೆ. ಗಂಗೆಯ ಶುದ್ಧೀಕರಣ ಕಾರ್ಯಕ್ಕಾಗಿ ಜನ ದೇಣಿಗೆಯನ್ನೂ ನೀಡುವುದಕ್ಕೆ ಶುರು ಮಾಡಿದ್ದಾರೆ. ಬಹಳ ಉತ್ತಮವಾದ ರೀತಿಯಲ್ಲಿ ಈ ಯೋಜನೆಯನ್ನು ನಡೆಸಲಾಗುತ್ತಾ ಇದೆ.

ನನ್ನ ಪ್ರೀತಿಯ ದೇಶಬಾಂಧವರೇ, ಇಂದು ಏಪ್ರಿಲ್ 24. ಭಾರತದಲ್ಲಿ ಇದನ್ನು ಪಂಚಾಯತ್‌ರಾಜ್ ದಿನದ ರೂಪದಲ್ಲಿ ಆಚರಿಸಲಾಗುತ್ತದೆ. ಇಂದಿನ ದಿನವೇ ನಮ್ಮ ದೇಶದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯ ಆರಂಭ ಆಗಿತ್ತು. ಕ್ರಮೇಣ ಇಡೀ ದೇಶದಲ್ಲಿ ಇವತ್ತು ಪಂಚಾಯತ್ ರಾಜ್ ವ್ಯವಸ್ಥೆ ನಮ್ಮ ಜನತಂತ್ರದ ಮಹತ್ವಪೂರ್ಣ ಘಟಕದ ರೂಪದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಾ ಇದೆ.

ಏಪ್ರಿಲ್ 14ರಂದು ಬಾಬಾ ಸಾಹೇಬ್ ಅಂಬೇಡ್ಕರ್‌ರ 125ನೇ ಜಯಂತಿಯನ್ನು ನಾವು ಆಚರಿಸಿದೆವು, ಇವತ್ತು ಏಪ್ರಿಲ್ 24ರಂದು ನಾವು ಪಂಚಾಯತ್‌ರಾಜ್ ದಿನವನ್ನು ಆಚರಣೆ ಮಾಡುತ್ತಿದ್ದೇವೆ. ಒಂದು ಸುಯೋಗದ ಸಂಗತಿ ಎಂದರೆ, ನಮಗೆ ಭಾರತ ಸಂವಿಧಾನವನ್ನು ನೀಡಿದ ಮಹಾಪುರುಷರ ಜನ್ಮ ದಿನ ಏಪ್ರಿಲ್ 14, ಹಾಗೆಯೆ, ಸಂವಿಧಾನದ ಅತ್ಯಂತ ಶಕ್ತಿಶಾಲಿ ಕೊಂಡಿಯಾದ ಪಂಚಾಯತ್ ರಾಜ್ ದಿನ ಏಪ್ರಿಲ್ 24. ಆದ್ದರಿಂದ ಭಾರತ ಸರಕಾರ, ರಾಜ್ಯಸರ್ಕಾರಗಳ ಸಹಯೋಗದೊಂದಿಗೆ, ಏಪ್ರಿಲ್ 14ರಿಂದ ಏಪ್ರಿಲ್ 24ರ ವರೆಗೆ ಹತ್ತುದಿನಗಳ ಕಾಲ, ಗ್ರಾಮೋದಯದಿಂದ ಭಾರತೋದಯ ಎಂಬ ಅಭಿಯಾನವನ್ನು ನಡೆಸಿತು.

ಏಪ್ರಿಲ್ 14ರಂದು ಬಾಬಾ ಸಾಹೇಬ್ ಅಂಬೇಡ್ಕರ್ ಜನ್ಮದಿನದಂದು ನನಗೆ ಅವರ ಜನ್ಮ ಸ್ಥಳವಾದ ಮಹೂವಾಗೆ ಹೋಗುವ ಅವಕಾಶ ಸಿಕ್ಕಿದ್ದು, ಆ ಪವಿತ್ರ ಭೂಮಿಗೆ ನಮಿಸುವ ಅವಕಾಶ ಸಿಕ್ಕಿದ್ದು ನನ್ನ ಸೌಭಾಗ್ಯವೇ ಸರಿ. ಏಪ್ರಿಲ್ 24, ಅಂದರೆ ಇವತ್ತು ಹೆಚ್ಚಿನ ಸಂಖ್ಯೆಯಲ್ಲಿ ಮೂಲವಾಸಿ ಬಾಂಧವರು ವಾಸಿಸುವಂಥ ಜಾರ್ಖಂಡ್‌ಗೆ ಹೋಗಿ ಅಲ್ಲಿ ಪಂಚಾಯತ್ ರಾಜ್ ದಿನದ ಆಚರಣೆಯಲ್ಲಿ ಭಾಗವಹಿಸಿದ್ದೇನೆ. ಈ ಅಭಿಯಾನವು ಬಹುದೊಡ್ಡ ಜಾಗೃತಿಯನ್ನು ತರುವ ಕೆಲಸವನ್ನು ಮಾಡಿದೆ. ಭಾರತದ ಮೂಲೆಮೂಲೆಗಳಲ್ಲಿರುವ ಗ್ರಾಮಗಳ ಮಟ್ಟದಲ್ಲಿ ಜನತಂತ್ರ ಸಂಸ್ಥೆಗಳು ಹೇಗೆ ಶಕ್ತಿಶಾಲಿಯಾಗಿ ಬೆಳೆಯಬೇಕು? ಗ್ರಾಮಗಳು



ಹೇಗೆ ಸ್ವಾವಲಂಬಿಗಳಾಗಬೇಕು? ಗ್ರಾಮವು ತನ್ನ ವಿಕಾಸದ ಯೋಜನೆಯನ್ನು ತಾನೇ ಹಾಕಿಕೊಳ್ಳುವುದು ಹೇಗೆ? ಇನ್‌ಫ್ರಾಸ್ಟ್ರಕ್ಚರ್‌ಗೂ ಮಹತ್ವ ಇರಬೇಕು; ಸೋಷಿಯಲ್ ಇನ್ಫ್ರಾಸ್ಟ್ರಕ್ಚರ್ ಗೂ ಮಹತ್ವ ಇರಬೇಕು. ಗ್ರಾಮದಲ್ಲಿ ಶಾಲೆ ಬಿಟ್ಟ ಮಕ್ಕಳು ಇರಬಾರದು. 'ಮಗಳನ್ನು ಉಳಿಸಿ, ಮಗಳನ್ನು ಓದಿಸಿ' ಅಭಿಯಾನವು ಪರಿಣಾಮಕಾರಿಯಾಗಿ ನಡೆಯಬೇಕು. ಮಗಳು ಹುಟ್ಟಿದ ದಿನದಂದು ಗ್ರಾಮದಲ್ಲಿ ಉತ್ಸವವನ್ನು ಆಚರಿಸಬೇಕು; ಇಂಥ ಹಲವು ಯೋಜನೆಗಳು ಇವೆ. ಕೆಲವು ಗ್ರಾಮಗಳಲ್ಲಂತೂ ಫುಡ್ ಡೊನೇಷನ್ ಕಾರ್ಯಕ್ರಮಗಳು ಜರುಗಿದವು. ಭಾರತದ ಇಷ್ಟೊಂದು ಗ್ರಾಮಗಳಲ್ಲಿ ಒಂದೇ ಬಾರಿಗೆ ಇಷ್ಟೊಂದು ಕಾರ್ಯಕ್ರಮಗಳು ಹತ್ತು ದಿನಗಳಲ್ಲಿ ನಡೆದಿದ್ದು ಬಹುಶಃ ಬಹಳ ಅಪರೂಪ.

ಗ್ರಾಮದ ಒಳ್ಳೆಯದಕ್ಕಾಗಿ, ವಿಕಾಸಕ್ಕಾಗಿ, ಲೋಕತಂತ್ರವನ್ನು ಗಟ್ಟಿಗೊಳಿಸುವುದಕ್ಕಾಗಿ ಈ ಒಂದು ಮಹತ್ವದ ಅವಕಾಶವನ್ನು ಬಳಸಿಕೊಂಡು, ಬಹಳ ಮೌಲಿಕವಾಗಿ, ನವೀನತಮವಾಗಿ ಕಾರ್ಯಚಟುವಟಿಕೆಗಳನ್ನು ನಡೆಸಿದ್ದಕ್ಕಾಗಿ ನಾನು ಎಲ್ಲಾ ರಾಜ್ಯಸರ್ಕಾರಗಳು, ಗ್ರಾಮಪ್ರಧಾನರಿಗೆ ಮತ್ತು ಎಲ್ಲರಿಗೂ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಗ್ರಾಮಗಳಲ್ಲಿ ಆಗಿರುವ ಜಾಗೃತಿಯೇ ಭಾರತೋದಯಕ್ಕೆ ಸಾಕ್ಷಿಯಾಗಿದೆ. ಗ್ರಾಮೋದಯವೇ ಭಾರತೋದಯದ ಆಧಾರವಾಗಿದೆ. ಆದ್ದರಿಂದ, ನಾವೆಲ್ಲರೂ ಗ್ರಾಮೋದಯದ ಮೇಲೆ ಒತ್ತು ಕೊಡುತ್ತಲೇ ಇದ್ದರೆ ನಾವು ಅಪೇಕ್ಷಿಸಿದ ಫಲಿತಾಂಶವನ್ನು ಪಡೆಯಬಹುದಾಗಿದೆ.

ಮುಂಬಯಿಯಿಂದ ಶರ್ಮಿಳಾ ಧಾರ್ಪುರೇ ಅವರು ನನ್ನೊಂದಿಗೆ ಫೋನ್ ನಲ್ಲಿ ಮಾತಾಡಿ ತಮ್ಮ ಚಿಂತೆಯನ್ನು ವ್ಯಕ್ತ ಪಡಿಸಿದ್ದಾರೆ:

"ಮಾನ್ಯ ಪ್ರಧಾನ ಮಂತ್ರಿಯವರೇ, ಮುಂಬಯಿಯಿಂದ ನಾನು, ಶರ್ಮಿಳಾ ಧಾರ್ಪುರೇ ಮಾತನಾಡುತ್ತಾ ಇದ್ದೇನೆ, ಶಾಲೆ ಮತ್ತು ಕಾಲೇಜು ಶಿಕ್ಷಣದ ಬಗ್ಗೆ ನನ್ನದೊಂದು ಪ್ರಶ್ನೆ ಇದೆ. ಶೈಕ್ಷಣಿಕ ಕ್ಷೇತ್ರದಲ್ಲಿ ಬಹಳ ದಿನಗಳಿಂದ ಸುಧಾರಣೆಯ ಅಗತ್ಯ ಕಂಡುಬಂದಿದೆ. ಸಾಕಷ್ಟು ಶಾಲಾ ಕಾಲೇಜುಗಳಿಲ್ಲ. ಶಿಕ್ಷಣದ ಗುಣಮಟ್ಟವೂ ಸರಿಯಾಗಿಲ್ಲ. ಮಕ್ಕಳು ಶಿಕ್ಷಣವನ್ನು ಮುಗಿಸಿದ ನಂತರವೂ ಅವರಿಗೆ ಮೂಲಭೂತವಾದ ವಿಚಾರಗಳೂ ಗೊತ್ತಿಲ್ಲದೇ ಇರುವ ಪರಿಸ್ಥಿತಿ ಇದೆ. ಇದರಿಂದಾಗಿ ನಮ್ಮ ಮಕ್ಕಳು ಜಗತ್ತಿನ ಸ್ಪರ್ಧೆಯಲ್ಲಿ ಹಿಂದೆ ಉಳಿಯುತ್ತಾರೆ. ಈ ಕುರಿತು ನಿಮ್ಮ ವಿಚಾರಗಳೇನು; ಈ ಕ್ಷೇತ್ರದಲ್ಲಿ ಯಾವ ಬಗೆಯ ಸುಧಾರಣೆಯನ್ನು ತಾವು ತರಬಯಸುತ್ತೀರಿ? ಈ ಕುರಿತು ದಯವಿಟ್ಟು ನಮಗೆ ತಿಳಿಸಿಕೊಡಿ, ಧನ್ಯವಾದ."

ಇವರ ಆತಂಕ ಬಹಳ ಸ್ವಾಭಾವಿಕವಾಗಿದೆ. ಇವತ್ತು ಯಾವುದೇ ಕುಟುಂಬ ಒಂದು ಕನಸನ್ನು ಕಾಣುತ್ತಾ ಇದೆ ಅಂದರೆ, ಅದು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ಕೊಡಿಸುವ ಕನಸಾಗಿರುತ್ತದೆ. ನಾಗರಿಕರ ಇಂಥ ಭಾವನೆಗಳೇ ದೇಶದ ಬಹುದೊಡ್ಡ ಶಕ್ತಿಯಾಗಿದೆ. ಮಕ್ಕಳನ್ನು ಓದಿಸಬೇಕು; ಒಳ್ಳೆಯ ಶಿಕ್ಷಣವನ್ನು ಕೊಡಿಸಬೇಕು ಅನ್ನುವುದು. ಒಳ್ಳೆಯ ಶಿಕ್ಷಣ ಸಿಗಬೇಕು ಎನ್ನುವ ಜನರ ಆಸೆಗೆ ಇಂಬು ಕೊಡಬೇಕು; ಈ ಕುರಿತು ಹೆಚ್ಚು ಜಾಗೃತಿಯನ್ನು ಮೂಡಿಸಬೇಕು. ನನಗೆ ಗೊತ್ತಿದೆ, ಕುಟುಂಬಗಳಲ್ಲಿ ಈ ಕುರಿತು ಜಾಗೃತಿ ಇದ್ದಷ್ಟೂ ಅದು ಶಾಲೆಗಳ ಮೇಲೆ ಪರಿಣಾಮ ಬೀರುತ್ತದೆ. ಶಿಕ್ಷಕರ ಮೇಲೆ ಪರಿಣಾಮ ಬೀರುತ್ತದೆ. ತಾವು ಯಾವ ಉದ್ದೇಶಕ್ಕಾಗಿ ಶಾಲೆಗೆ ಹೋಗುತ್ತಾ ಇದ್ದೇವೆ ಎನ್ನುವ ಕುರಿತು ಮಕ್ಕಳೂ ಜಾಗರೂಕರಾಗುತ್ತಾರೆ. ಆದ್ದರಿಂದ, ನಾವು ಸಂಬಂಧ ಪಟ್ಟ ಎಲ್ಲ ಬಾಧ್ಯಸ್ಥರಲ್ಲಿ, ಮುಖ್ಯವಾಗಿ ಪೋಷಕರಲ್ಲಿ ಕೇಳುವುದೇನೆಂದರೆ, ಶಾಲೆಯಲ್ಲಿ ನಡೆಯುವ ಆಗುಹೋಗುಗಳ ಬಗ್ಗೆ ಮಕ್ಕಳೊಂದಿಗೆ ಹೆಚ್ಚು ವಿವರವಾಗಿ ಮಾತಾಡಿ. ಅದರಿಂದ ಏನಾದರೂ ಮಹತ್ವದ ವಿಚಾರ ಗೊತ್ತಾದರೆ, ನೀವೇ ಖುದ್ದಾಗಿ ಶಾಲೆಗೆ ಹೋಗಿ ಶಿಕ್ಷಕರ ಜೊತೆ ಮಾತನಾಡಿ. ಇಂಥ ವಿಜಿಲೆನ್ಸ್ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿರುವ ಅನೇಕ ಕೊರತೆಗಳನ್ನು ಕಡಿಮೆ ಮಾಡುತ್ತದೆ; ಜನರ ಸಹಭಾಗಿತ್ವದಿಂದ ಇದು ಖಂಡಿತ ಆಗುತ್ತದೆ.

ನಮ್ಮ ದೇಶದಲ್ಲಿ ಎಲ್ಲಾ ಸರ್ಕಾರಗಳು ಶಿಕ್ಷಣದ ಮೇಲೆ ಹೆಚ್ಚು ಒತ್ತು ಕೊಟ್ಟಿವೆ. ಈ ಕುರಿತು ಎಲ್ಲಾ ಸರ್ಕಾರಗಳು ತಮ್ಮದೇ ಆದ ರೀತಿಯಲ್ಲಿ ಪ್ರಯತ್ನಗಳು ಮಾಡಿವೆ.

ಶೈಕ್ಷಣಿಕ ಸಂಸ್ಥೆಗಳು ಸ್ಥಾಪನೆಯಾಗಬೇಕು; ಶೈಕ್ಷಣಿಕ ವ್ಯವಸ್ಥೆ ವಿಸ್ತಾರಗೊಳ್ಳಬೇಕು. ಶಾಲೆ, ಕಾಲೇಜುಗಳನ್ನು ತೆರೆಯಬೇಕು. ಶಿಕ್ಷಕರ ನೇಮಕಾತಿ ಆಗಬೇಕು. ಅಧಿಕ ಸಂಖ್ಯೆಯಲ್ಲಿ ಮಕ್ಕಳು ಶಾಲೆಗಳನ್ನು ಸೇರಬೇಕು – ಅನೇಕ ವರ್ಷಗಳಿಂದ ನಮ್ಮ ಲಕ್ಷ್ಯ ಈ ವಿಚಾರಗಳ ಕುರಿತು ಇದೆಯೆನ್ನುವ ಮಾತು ಸತ್ಯ. ಅಂದರೆ ಒಂದು ರೀತಿಯಲ್ಲಿ ಶಿಕ್ಷಣವನ್ನು ನಾಲ್ಕೂ ದಿಕ್ಕುಗಳಿಗೆ ಹರಡುವ ಒಂದು ಪ್ರಯತ್ನ ಪ್ರಾಥಮಿಕ ಮಹತ್ವವನ್ನು ಪಡೆದಿದೆ; ಮತ್ತು ಇದು ಅತ್ಯಾವಶ್ಯಕವಾಗಿದೆ. ಶೈಕ್ಷಣಿಕ ವ್ಯವಸ್ಥೆಯನ್ನು ವಿಸ್ತಾರಗೊಳಿಸುವುದಕ್ಕೆ ನಾವು ನೀಡುವ ಮಹತ್ವಕ್ಕಿಂತ ಇಂದು ಅದರ ಗುಣಮಟ್ಟವನ್ನು ಸುಧಾರಣೆ ಮಾಡುವ ಕಡೆಗೆ ನೀಡಬೇಕಾಗಿದೆ. ವಿಸ್ತರಣೆಯ ಕೆಲಸವನ್ನು ನಾವು ಸಾಕಷ್ಟು ಮಾಡಿದ್ದೇವೆ. ಈಗ ನಾವು ಶಿಕ್ಷಣದ ಗುಣಮಟ್ಟದ ಮೇಲೆ ಫೋಕಸ್ ಮಾಡುವ ಅಗತ್ಯವಿದೆ. ಸಾಕ್ಷರತಾ ಅಭಿಯಾನದಿಂದ ಮುಂದುವರಿದು ಈಗ ಒಳ್ಳೆಯ ಶಿಕ್ಷಣ, ಇದು ನಮ್ಮ ಪ್ರಾಥಮಿಕತೆ ಆಗಬೇಕಾಗಿದೆ. ಈವರೆಗೆ ಔಟ್ ಲೇ ಯ ಲೆಕ್ಕಾಚಾರ ನಡೆಯುತ್ತಾ ಇತ್ತು; ಇವತ್ತು ಔಟ್ ಕಮ್ ಮೇಲೆ ಫೋಕಸ್ ಮಾಡಬೇಕಾಗಿದೆ.

ಈವರೆಗೆ, ಶಾಲೆಗೆ ಎಷ್ಟು ಜನ ಮಕ್ಕಳು ಹಾಜರಾದರು ಅನ್ನುವುದರ ಕಡೆ ಲಕ್ಷ್ಯ ಇರುತ್ತಿತ್ತು; ಇಂದು ಹಾಜರಿಗಿಂತ ಹೆಚ್ಚಾಗಿ ಕಲಿಕೆಯ ಮೇಲೆ ಹೆಚ್ಚು ಒತ್ತು ಕೊಡಬೇಕಾಗಿದೆ. ಎನ್ರೋಲ್ಮೆಂಟ್, ಎನ್ರೋಲ್ಮೆಂಟ್, ಎನ್ರೋಲ್ಮೆಂಟ್? ಯಾವಾಗಲೂ ಈ ಮಂತ್ರ ಮೊಳಗುತ್ತಾ ಇತ್ತು. ಆದರೆ ಈಗ, ಶಾಲೆಯನ್ನು ತಲುಪಿರುವ ಮಕ್ಕಳಿಗೆ ಒಳ್ಳೆಯ ಶಿಕ್ಷಣ, ಯೋಗ್ಯ ಶಿಕ್ಷಣ ನೀಡುವ ಕಡೆಗೆ ನಾವು ಗಮನ ಹರಿಸಬೇಕಾಗಿದೆ. ಈಗಿನ ಸರ್ಕಾರದ ಬಜೆಟನ್ನು ನೀವು ಗಮನಿಸಿರಬಹುದು. ಗುಣಮಟ್ಟದ ಶಿಕ್ಷಣದ ಮೇಲೆ ಒತ್ತುಕೊಡುವ ಪ್ರಯತ್ನವನ್ನು ಇಲ್ಲಿ ನೀವು ಕಾಣಬಹುದು. ಕ್ರಮಿಸಬೇಕಾದ ಹಾದಿ ತುಂಬಾ ದೀರ್ಘವಾಗಿದೆ, ನಿಜ. ಆದರೆ, ನಾವು ಈ ದೇಶದ 125 ಕೋಟಿ ಜನ ನಿರ್ಧಾರ ಮಾಡಿದರೆ, ದೀರ್ಘ ಪಯಣವೂ ಸಾಧ್ಯವಾಗುತ್ತದೆ. ಶರ್ಮಿಳಾ ಅವರು ಹೇಳುವ ಮಾತು ನಿಜ; ನಮ್ಮಲ್ಲಿ ಆಮೂಲಾಗ್ರ ಸುಧಾರಣೆ ಆಗಬೇಕಾಗಿದೆ.

ನೀವು ಈ ಬಾರಿಯ ಬಜೆಟ್‌ನಲ್ಲಿ ನೋಡಿರಬಹುದು; ಸ್ವಲ್ಪ ವಿಭಿನ್ನವಾಗಿ ಕೆಲಸ ಮಾಡುವ ಪ್ರಯತ್ನ ಮಾಡಿದ್ದೇವೆ. ಹತ್ತು ಸರ್ಕಾರಿ ವಿಶ್ವವಿದ್ಯಾಲಯಗಳು ಮತ್ತು ಹತ್ತು ಖಾಸಗಿ ವಿಶ್ವವಿದ್ಯಾಲಯಗಳು – ಇವುಗಳಿಗೆ ಸರ್ಕಾರದ ಬಂಧನದಿಂದ ಮುಕ್ತಿ ನೀಡಿ, ಚಾಲೆಂಜ್ ರೂಟ್ನಲ್ಲಿ ಬರುವ ಕುರಿತು ಪ್ರಸ್ತಾವ ನೀಡಲಾಗಿದೆ, ಅವರಿಗೆ, 'ನಿಮ್ಮದು ಟಾಪ್ ಮೋಸ್ಟ್ ಯುನಿವರ್ಸಿಟಿ ಆಗುವುದಕ್ಕೆ ನೀವು ಏನು ಮಾಡಬೇಕು ಅಂದುಕೊಂಡಿದ್ದೀರಿ, ಹೇಳಿ, ಎಂದು ಅವರಿಗೆ ಕೇಳಿದ್ದೇವೆ. ಅವರಿಗೆ ಮುಕ್ತವಾದ ಅವಕಾಶವನ್ನು ನೀಡುವುದಕ್ಕಾಗಿ ಈ ಯೋಜನೆಯನ್ನು ಮುಂದಿಡಲಾಗಿದೆ.

ಭಾರತದ ವಿಶ್ವವಿದ್ಯಾಲಯಗಳೂ ಕೂಡ ಜಾಗತಿಕ ಸ್ಪರ್ಧೆಯಲ್ಲಿ ಇಳಿಯುವ ವಿಶ್ವವಿದ್ಯಾಲಯಗಳಾಗಬಹುದು. ಆಗಲೂ ಬೇಕು. ಇದರ ಜೊತೆಯಲ್ಲಿ ಈಗ ಶಿಕ್ಷಣಕ್ಕೆ ಎಷ್ಟು ಮಹತ್ವ ಸಿಗುತ್ತಿದೆಯೋ ಅಷ್ಟೇ ಮಹತ್ವ ಕೌಶಲ್ಯಕ್ಕೂ ಸಿಗಬೇಕು. ಇದೇ ರೀತಿ, ಶಿಕ್ಷಣದಲ್ಲಿ ತಂತ್ರಜ್ಞಾನವೂ ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ದೂರಶಿಕ್ಷಣ, ತಂತ್ರಜ್ಞಾನ, ಇವು ನಮ್ಮ ಶಿಕ್ಷಣವನ್ನು ಸರಳಗೊಳಿಸುತ್ತವೆ; ಮತ್ತು ಬಹಳ ಬೇಗನೆ ಇದರ ಪರಿಣಾಮಗಳೂ ಗೋಚರಿಸುತ್ತವೆ ಎನ್ನುವ ವಿಶ್ವಾಸ ನನಗಿದೆ.

ಬಹಳ ಸಮಯದಿಂದ ಜನ ನನಗೊಂದು ಪ್ರಶ್ನೆಯನ್ನು ಕೇಳುತ್ತಿರುತ್ತಾರೆ; ಕೆಲವರು mygov ವೆಬ್ ಪೋರ್ಟಲ್ನಲ್ಲಿ ಬರೆಯುತ್ತಿರುತ್ತಾರೆ. ಇನ್ನು ಕೆಲವರು ನನಗೆ ನರೇಂದ್ರಮೋದಿ ಆಪ್ ನಲ್ಲಿ ಬರೆಯುತ್ತಲೂ ಇರುತ್ತಾರೆ, ಈ ಯುವಜನ ಹೆಚ್ಚಾಗಿ ಬರೆಯುವುದು ಏನೆಂದರೆ :

"ಪ್ರಧಾನ ಮಂತ್ರಿಯವರೇ, ನಮಸ್ಕಾರ, ನಾನು ಮೋನಾ ಕರ್ಣವಾಲ್ ಮಾತನಾಡುತ್ತಾ ಇದ್ದೀನಿ. ಇವತ್ತಿನ ದಿನ ಯುವಜನರು ಓದಿನ ಜೊತೆಗೆ ಸ್ಪೋರ್ಟ್ಸ್ ಗೂ ಮಹತ್ವ ನೀಡಬೇಕಾಗಿದೆ. ಅವರಲ್ಲಿ ಟೀಮ್ ಸ್ಪಿರಿಟ್ ಭಾವನೆಯೂ ಬೆಳೆಯುವುದು ಬಹಳ ಮಹತ್ವದ್ದಾಗಿದೆ; ಒಳ್ಳೆಯ ನಾಯಕರಾಗುವ ಗುಣವೂ ಅವರಲ್ಲಿ ಬೆಳೆಯಬೇಕಾಗಿದೆ. ಇದರಿಂದ ಅವರ ಸಮಗ್ರ ಬೆಳವಣಿಗೆ ಸಾಧ್ಯವಾಗುತ್ತದೆ. ಇದನ್ನು ನಾನು ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಏಕೆಂದರೆ, ನಾನು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ನಲ್ಲಿದ್ದೆ, ಅದು ನನ್ನ ಜೀವನದ ಮೇಲೆ



ಮಹತ್ವದ ಪರಿಣಾಮವನ್ನು ಬೀರಿದೆ. ಹೆಚ್ಚು ಹೆಚ್ಚು ಯುವಜನರಿಗೆ ನೀವು ಪ್ರೇರಣೆಯನ್ನು ನೀಡಿ, ಸರ್ಕಾರವೂ ಹೆಚ್ಚಿನ ಸಂಖ್ಯೆಯಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್ ಮತ್ತು ಸ್ಕೌಟ್ಸ್ ಮತ್ತು ಗೈಡ್ಸ್ ಇವುಗಳನ್ನು ಉತ್ತೇಜಿಸಬೇಕು ಅನ್ನುವುದು ನನ್ನ ಆಶಯವಾಗಿದೆ."

ನೀವು ಇಷ್ಟೊಂದು ಸಲಹೆಗಳನ್ನು ನೀಡುತ್ತಿರುವುದನ್ನು ನೋಡಿ ನನಗೆ ಒಂದು ದಿನ ಅನ್ನಿಸಿತು, ನಿಮ್ಮ ಜೊತೆ ಮಾತಾಡಬೇಕು ಎಂದು. ಅದಕ್ಕೂ ಮುಂಚೆ ಇವರೆಲ್ಲರ ಜೊತೆ ಮಾತಾಡಬೇಕು ಅಂದುಕೊಂಡೆ. ನಿಮ್ಮಿಂದಲೇ ಒತ್ತಾಯ ಇತ್ತು; ನಿಮ್ಮಿಂದಲೇ ಸಲಹೆ ಬಂದವು. ಇದರ ಪರಿಣಾಮದಿಂದಾಗಿ ನಾನು ಒಂದು ಸಭೆಯನ್ನು ಕರೆದಿದ್ದೆ. ಇದರಲ್ಲಿ, ಎನ್‌ಸಿಸಿಯ ಮುಖ್ಯಸ್ಥರಿದ್ದರು, ಎನ್‌ಎಸ್‌ಎಸ್ ಮುಖ್ಯಸ್ಥರಿದ್ದರು, ಸ್ಕೌಟ್ಸ್ ಅಂಡ್ ಗೈಡ್ಸ್, ರೆಡ್‌ಕ್ರಾಸ್, ನೆಹರು ಯುವ ಕೇಂದ್ರ, ಈ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿದ್ದರು. ನಾನು ಅವರಿಗೆ ಕೇಳಿದೆ, ಈ ಮುಂಚೆ ಇಂಥ ಒಂದು ಸಭೆ ಯಾವಾಗ ನಡೆದಿತ್ತು ಎಂದು. ಅದಕ್ಕೆ ಅವರೆಂದರು, ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದಿಂದ ನಾವು ಹೀಗೆ ಪರಸ್ಪರ ಭೇಟಿಯಾಗುತ್ತಿರುವುದು ಇದೇ ಮೊದಲನೇ ಸಲ ಎಂದು. ನಾನು ಮೊಟ್ಟಮೊದಲು, ಈ ಬಗೆಯ ಕಾರ್ಯಕ್ಕಾಗಿ ನನ್ನ ಮೇಲೆ ಒತ್ತಾಯ ಹೇರಿದ ಎಲ್ಲಾ ಯುವಮಿತ್ರರಿಗೆ ಅಭಿನಂದನೆಯನ್ನು ಸಲ್ಲಿಸಬೇಕು. ಇದರಿಂದಾಗಿಯೇ ನಾನು ಸಭೆಯನ್ನು ಕರೆದೆ, ಇಂಥ ಸಭೆಯನ್ನು ಕರೆದದ್ದು ಒಳ್ಳೆಯದೇ ಆಯಿತು ಎಂದು ನನಗನಿಸಿತು. ಬಹಳಷ್ಟು ಸಮನ್ವಯದ ಅಗತ್ಯ ಇದೆ ಎನಿಸಿತು ನನಗೆ. ಪ್ರತ್ಯೇಕ ಸಂಘಟನೆ ತನ್ನದೇ ಆದ ರೀತಿಯಲ್ಲಿ ಬಹಳಷ್ಟು ಮಾಡುತ್ತಾ ಇದೆ; ಆದರೆ, ನಮ್ಮ ಈ ಎಲ್ಲ ಸಂಘಟನೆಗಳು ಸಂಯೋಜಿತ ರೂಪದಲ್ಲಿ ಕೆಲಸ ಮಾಡಿದರೆ ಎಂಥ ಅದ್ಭುತ ಪರಿಣಾಮಗಳು ಆಗುತ್ತವೆ, ಎಷ್ಟೊಂದು ವಿಸ್ತಾರವಾಗಿ, ಅಷ್ಟೊಂದು ಕುಟುಂಬಗಳನ್ನು ಇದು ತಲುಪಬಲ್ಲುದು ಎಂದು ಮನವರಿಕೆ ಆಯಿತು. ಇದರ ವ್ಯಾಪ್ತಿಯನ್ನು ಕಂಡು ನನಗೆ ಬಹಳ ಸಮಾಧಾನವಾಯಿತು. ಅವರಲ್ಲಿ ಉತ್ಸಾಹ ಇತ್ತು; ಏನನ್ನಾದರೂ ಮಾಡುವ ಪ್ರೇರಣೆ ಇತ್ತು. ನಾನೂ ಎನ್‌ಸಿಸಿ ಕೇಡಟ್ ಆಗಿದ್ದೆ. ಆದ್ದರಿಂದ ನನಗೆ ಗೊತ್ತು, ಇಂಥ ಸಂಘಟನೆಗಳಿಂದ ಒಂದು ಹೊಸ ದೃಷ್ಟಿಕೋನ ಸಿಗುತ್ತದೆ, ಪ್ರೇರಣೆ ಲಭಿಸುತ್ತದೆ, ಒಂದು ರಾಷ್ಟ್ರೀಯ ದೃಷ್ಟಿಕೋನದ ವಿಕಾಸ ಆಗುತ್ತದೆ. ನನಗೆ ನನ್ನ ಬಾಲ್ಯದಲ್ಲಿ ಇದರ ಲಾಭವಂತೂ ಸಿಕ್ಕಿತ್ತು. ನನಗೆ ಅನಿಸಿತು, ಇಂಥ ಸಂಘಟನೆಗಳಿಗೆ ಹೊಸ ಚೈತನ್ಯ ಸಿಗಬೇಕು, ಹೊಸ ಶಕ್ತಿ ತುಂಬಬೇಕು ಎಂದು. ನಾನು ಈ ಬಾರಿ ಅವರ ಮುಂದೆ ಕೆಲವು ವಿಚಾರಗಳನ್ನು ಇಟ್ಟಿದ್ದೇನೆ. ಈ ಸೀಸನ್ನಲ್ಲಿ ನಮ್ಮ ಯುವಜನ ಜಲಸಂಗ್ರಹಣೆಯ ಮಹತ್ವದ ಕಾರ್ಯದಲ್ಲಿ ದೊಡ್ಡ ಸಂಘಟನೆಯೊಂದಿಗೆ ಏಕೆ ಕೈ ಜೋಡಿಸಬಾರದು? ನಮ್ಮ ಪ್ರಯತ್ನದಿಂದ ಎಷ್ಟು ಬ್ಲಾಕುಗಳಲ್ಲಿ, ಎಷ್ಟು ಜಿಲ್ಲೆಗಳಲ್ಲಿ ಶೌಚಕ್ಕಾಗಿ ಬಯಲಿಗೆ ಹೋಗುವುದನ್ನು ನಿಲ್ಲಿಸಬಹುದು? ಗ್ರಾಮವನ್ನು ಬಯಲು ಶೌಚಾಲಯ ಮುಕ್ತ ಹೇಗೆ ಮಾಡಬಹುದು? ದೇಶವನ್ನು ಒಂದುಗೂಡಿಸಲು ಇಂಥ ಯಾವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬಹುದು? ನಮ್ಮ ಈ ಎಲ್ಲ ಸಂಘಟನೆಗಳ ಸಾಮಾನ್ಯ ಯುವಗೀತೆ ಏನಾಗಬೇಕು? ಇವೆಲ್ಲವುಗಳ ಕುರಿತು ಅವರ ಜೊತೆ ಮಾತಾಡಿದ್ದೇನೆ.



ಇವತ್ತು ನಾನು ನಿಮಗೂ ಹೇಳುತ್ತಿದ್ದೇನೆ, ಉತ್ತಮ ಸಲಹೆಗಳನ್ನು ನೀಡಿ. ಅನೇಕ ಯುವಸಂಘಟನೆಗಳು ಇವೆ. ಅವುಗಳ ಚಟುವಟಿಕೆಗಳಿಗೆ ಯಾವ ಹೊಸ ಗುರಿಗಳನ್ನು ಸೇರಿಸಬಹುದು? ನೀವು ನನ್ನ ನರೇಂದ್ರಮೋದಿ ಆಪ್ ನಲ್ಲಿ ಬರೆದರೆ, ನಾನು ನಿಮ್ಮ ಸಲಹೆಗಳನ್ನು ಸೂಕ್ತವಾದ ವ್ಯಕ್ತಿಗಳಿಗೆ ತಲುಪಿಸುತ್ತೇನೆ. ನಾವು ನಡೆಸಿದ ಮೀಟಿಂಗ್ ನಂತರ ಅವರೆಲ್ಲರ ಕಾರ್ಯಗಳು ಚುರುಕುಗೊಳ್ಳುತ್ತವೆ ಎಂದು ನನಗಂತೂ ಅನಿಸುತ್ತದೆ. ನಿಮಗೂ ಇದರಲ್ಲಿ ಕೈಜೋಡಿಸುವ ಅವಕಾಶ ಸಿಗುತ್ತದೆ.

ನನ್ನ ಪ್ರೀತಿಯ ದೇಶಬಾಂಧವರೇ, ನಾವು ಇಂದು ಒಂದು ಮಾತನ್ನು ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಇದು ನಮ್ಮನ್ನು ಜರ್ಜರಿತಗೊಳಿಸುವ ಮಾತು ಅಂತ ನನಗನಿಸುತ್ತದೆ. ನೀವು ನೋಡಿರಬಹುದು, ನಮ್ಮ ದೇಶದ ರಾಜಕೀಯ ಪರಿಸ್ಥಿತಿ ಹೇಗಿದೆ ಎಂದರೆ, ಕಳೆದ ಕೆಲವು ಚುನಾವಣೆಗಳಲ್ಲಿ ಈ ಕುರಿತು ಚರ್ಚೆ ನಡೆಯುತ್ತಲೇ ಇತ್ತು. ಯಾವ ಪಕ್ಷ ಎಷ್ಟು ಸಿಲಿಂಡರುಗಳನ್ನು ನೀಡುತ್ತದೆ, ಎಂದು. 12 ಸಿಲಿಂಡರಾ 9 ಸಿಲೆಂಡರಾ? ಇದು ಚುನಾವಣೆಗಳಲ್ಲಿ ಬಹುದೊಡ್ಡ ವಿಷಯವಾಗಿರುತ್ತಾ ಇತ್ತು. ಪ್ರತಿಯೊಂದು ರಾಜಕೀಯ ಪಕ್ಷಕ್ಕೂ ಚುನಾವಣೆಯ ದೃಷ್ಟಿಯಿಂದ ಮಧ್ಯಮವರ್ಗದವರನ್ನು ತಲುಪುವುದು ಅನಿವಾರ್ಯವಾಗಿತ್ತು. ಹೀಗಾಗಿ ಗ್ಯಾಸ್ ಸಿಲಿಂಡರ್ ಬಹುದೊಡ್ಡ ಇಷ್ಯೂ ಆಗಿತ್ತು.

ಇನ್ನೊಂದು ಕಡೆ, ಅರ್ಥಶಾಸ್ತ್ರಜ್ಞರಿಂದ ಸಬ್ಸಿಡಿಯನ್ನು ಕಡಿಮೆ ಮಾಡಬೇಕು ಎನ್ನುವ ಒತ್ತಡವೂ ಇತ್ತು ಮತ್ತು ಇದಕ್ಕಾಗಿ ಹಲವಾರು ಸಮಿತಿಗಳು ಸೇರುತ್ತಾ ಇದ್ದವು. ಇವುಗಳಲ್ಲಿ ಗ್ಯಾಸ್ ಸಬ್ಸಿಡಿಯನ್ನು ಕಡಿಮೆ ಮಾಡುವುದರ ಕುರಿತು ದೊಡ್ಡ ದೊಡ್ಡ ಪ್ರಸ್ತಾವಗಳು ಬರುತ್ತಿದ್ದವು. ಸಲಹೆಗಳೂ ಬರುತ್ತಿದ್ದವು. ಈ ಸಮಿತಿಗಳಿಗಾಗಿಯೇ ಕೋಟಿಗಟ್ಟಲೆ ಖರ್ಚು ಆಗುತ್ತಾ ಇತ್ತು. ಆದರೆ ಸ್ಥಿತಿ ಮಾತ್ರ ಹೇಗಿತ್ತೋ ಹಾಗೆ ಇರುತ್ತಿತ್ತು. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ, ನಾವು ಈ ಚೌಕಟ್ಟಿನಿಂದ ಹೊರಗೆ ಯಾವತ್ತೂ ಯೋಚನೆ ಮಾಡಲಿಲ್ಲ. ಇವತ್ತು, ನನ್ನ ದೇಶಬಾಂಧವರೇ, ನನ್ನ ಲೆಕ್ಕಾಚಾರವನ್ನು ನಿಮ್ಮೆದುರಿಗೆ ಒಪ್ಪಿಸುವುದಕ್ಕೆ ನನಗೆ ಸಂತೋಷವಾಗುತ್ತಾ ಇದೆ, ನಾನು ಮೂರನೇ ಮಾರ್ಗವನ್ನು ಆಯ್ಕೆ ಮಾಡಿಕೊಂಡಿದ್ದೇನೆ. ಜನತಾಜನಾರ್ಧನರ ಮೇಲೆ ಭರವಸೆಯನ್ನು ಇಡುವ ಮಾರ್ಗ. ರಾಜಕಾರಣಿಗಳು ತಮಗಿಂತ ಹೆಚ್ಚಾಗಿ ತಮ್ಮವರ ಮೇಲೆ ವಿಶ್ವಾಸವನ್ನು ತಾಳುವುದು ಒಳ್ಳೆಯದು. ನಾನು ಜನತಾಜನಾರ್ಧನರ ಮೇಲೆ ವಿಶ್ವಾಸವಿಟ್ಟು, ಹೀಗೇ ಒಮ್ಮೆ ಮಾತುಮಾತಿನಲ್ಲಿ ಅಂದಿದ್ದೆ, ನೀವು ಒಂದು ವರ್ಷದಲ್ಲಿ ಹದಿನೈದು ನೂರು, ಅಥವಾ ಎರಡು ಸಾವಿರ ರೂಪಾಯಿ ವೆಚ್ಚವನ್ನು ಸಹಿಸುತ್ತೀರಿ ಎಂದಾದರೆ, ನೀವು ಗ್ಯಾಸ್ ಸಬ್ಸಿಡಿಯನ್ನು ಏಕೆ ಬಿಟ್ಟುಕೊಡಬಾರದು? ಇದರಿಂದ ಬಡವರಿಗೆ ಪ್ರಯೋಜನ ಆಗುತ್ತದೆ.



ನಾನು ಹೀಗೇ ಒಂದು ಮಾತು ಹೇಳಿದ್ದೆ, ಆದರೆ ಇವತ್ತು ಎದೆತುಂಬಿ ಹೇಳುತ್ತಿದ್ದೇನೆ, ನನಗೆ ನನ್ನ ದೇಶಬಾಂಧವರ ಬಗ್ಗೆ ತುಂಬಾ ಹೆಮ್ಮೆ ಇದೆ.

ಒಂದು ಕೋಟಿ ಕುಟುಂಬದವರು ಸ್ವಇಚ್ಛೆಯಿಂದ ತಮ್ಮ ಗ್ಯಾಸ್ ಸಬ್ಸಿಡಿಯನ್ನು ಸರಂಡರ್ ಮಾಡಿದ್ದಾರೆ. ಹಾಗೆ ನೋಡಿದರೆ, ಈ ಒಂದು ಕೋಟಿ ಕುಟುಂಬದವರು ಬಹಳ ದೊಡ್ಡ ಶ್ರೀಮಂತರಲ್ಲ, ನನಗೆ ಗೊತ್ತು, ನಿವೃತ್ತ ಶಿಕ್ಷಕರು, ನಿವೃತ್ತ ಕಾರಕೂನರು, ರೈತರು, ಚಿಕ್ಕ ಅಂಗಡಿ ಮಾಲಿಕರು ಹೀಗೆ ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಜನ– ಇವರು ತಮ್ಮ ಸಬ್ಸಿಡಿಯನ್ನು ಬಿಟ್ಟುಕೊಟ್ಟಿದ್ದಾರೆ.

ಇನ್ನೊಂದು ವಿಶೇಷತೆ ಎಂದರೆ, ಸಬ್ಸಿಡಿಯನ್ನು ಬಿಟ್ಟುಕೊಡುವುದರ ಬಗ್ಗೆ ಮೊಬೈಲ್ ಫೋನ್ ಬಳಸಿ ತಿಳಿಸಬಹುದಾಗಿತ್ತು. ಆನ್ ಲೈನ್ ಮಾಡಬಹುದಾಗಿತ್ತು. ಟೆಲಿಫೋನ್‌ನಲ್ಲಿ ಮಿಸ್ಡ್ ಕಾಲ್ ಕೊಡಬಹುದಾಗಿತ್ತು; ಅನೇಕ ವಿಧಾನಗಳಿದ್ದವು. ಆದರೆ, ಲೆಕ್ಕಾಚಾರಗಳಿಂದ ಆಮೇಲೆ ಗೊತ್ತಾಗಿದ್ದು ಅಂದ್ರೆ, ಹೀಗೆ ಸಬ್ಸಿಡಿಯನ್ನು ಬಿಟ್ಟುಕೊಟ್ಟವರಲ್ಲಿ ನೂರಕ್ಕೆ ಎಂಭತ್ತು ಜನ ತಾವೇ ಖುದ್ದಾಗಿ ಗ್ಯಾಸ್ ವಿತರಕರ ಬಳಿ ಹೋಗಿ, ಕ್ಯೂನಲ್ಲಿ ನಿಂತು, ಲಿಖಿತವಾಗಿ ತಮ್ಮ ಸಬ್ಸಿಡಿಯನ್ನು ಸರಂಡರ್ ಮಾಡಿದ್ದಾರೆ.

ನನ್ನ ಪ್ರೀತಿಯ ದೇಶಬಾಂಧವರೇ, ಇದು ಸಣ್ಣ ವಿಚಾರವಲ್ಲ, ಸರ್ಕಾರವು ಯಾವುದೇ ಒಂದು ತೆರಿಗೆಯಲ್ಲಿ ಚಿಕ್ಕದೊಂದು ರಿಯಾಯತಿ ಕೊಟ್ಟರೂ, ವಿನಾಯಿತಿ ಕೊಟ್ಟರೂ ಸಾಕು ಟಿವಿಯಲ್ಲಿ ಮತ್ತು ಪತ್ರಿಕೆಗಳಲ್ಲಿ ಅಂಥ ಸರ್ಕಾರದ ಕುರಿತು ಹೊಗಳಿಕೆಗಳ ಹೊಳೆಯೇ ವಾರವಿಡೀ ಹರಿಯುತ್ತದೆ. ಆದರೆ, ನಮ್ಮ ದೇಶದಲ್ಲಿ ಸಬ್ಸಿಡಿ ಅನ್ನುವುದು ಒಂದು ಬಗೆಯ ಹಕ್ಕು ಅನ್ನುವಂಥ ಪರಿಸ್ಥಿತಿಯಲ್ಲಿ, ಒಂದು ಕೋಟಿ ಕುಟುಂಬಗಳು ಸಬ್ಸಿಡಿಯನ್ನು ಬಿಟ್ಟುಕೊಟ್ಟವು. ನಾನು ಮೊಟ್ಟಮೊದಲು ಈ ಒಂದು ಕೋಟಿ ಕುಟುಂಬಗಳಿಗೆ ಶತಶತ ನಮನಗಳನ್ನು ಸಲ್ಲಿಸುತ್ತೇನೆ. ಅಭಿನಂದಿಸುತ್ತೇನೆ. ಏಕೆಂದರೆ, ಇವರು, ರಾಜಕಾರಣಿಗಳಿಗೆ ಹೊಸ ರೀತಿಯಲ್ಲಿ ಆಲೋಚನೆ ಮಾಡುವುದನ್ನು ಕಲಿಸಿದ್ದಾರೆ. ಈ ಒಂದು ಘಟನೆ, ಅರ್ಥಶಾಸ್ತ್ರಜ್ಞರಿಗೂ ಹೊಸ ರೀತಿಯಲ್ಲಿ ಯೋಚನೆ ಮಾಡುವುದನ್ನು ಅನಿವಾರ್ಯಗೊಳಿಸಿದೆ. ಜಾಗತಿಕ ಮಟ್ಟದ ಅರ್ಥ ಶಾಸ್ತ್ರಜ್ಞರು ರೂಪಿಸುವ ಸಮೀಕರಣಗಳ ಹೊರತಾಗಿ ಇದೆ ಈ ಘಟನೆ. ಈ ಕುರಿತು ಒಂದಿಲ್ಲೊಂದು ದಿನ ಯೋಚಿಸಬೇಕು. ಒಂದು ಕೋಟಿ ಕುಟುಂಬಗಳು ಸಬ್ಸಿಡಿಯನ್ನು ಬಿಟ್ಟುಕೊಡುವುದು; ಅದರ ಬದಲಿಗೆ, ಕೋಟಿಗಟ್ಟಲೆ ಬಡ ಕುಟುಂಬಗಳಿಗೆ ಅಡುಗೆ ಅನಿಲ ಸಿಗುವುದು–ಹೊರಗಡೆಯಿಂದ ನೋಡುವುದಕ್ಕೆ ಇದು ಸಾಮಾನ್ಯವಾದ ಮಾತಾಗಿದೆ. ಅಸಾಮಾನ್ಯವಾದ ಮಾತು ಎಂದರೆ, ಜನತೆಯ ಮೇಲೆ ವಿಶ್ವಾಸವಿಟ್ಟು ಈ ಕೆಲಸವನ್ನು ಮಾಡಿದರೆ ಎಷ್ಟೊಂದು ದೊಡ್ಡ ಸಾಧನೆ ಮಾಡಬಹುದು ಎನ್ನುವುದು. ನಾನು ಮುಖ್ಯವಾಗಿ ಎಲ್ಲಾ ರಾಜಕೀಯ ವರ್ಗಕ್ಕೆ ಇವತ್ತು ಆಗ್ರಹದಿಂದ ಹೇಳಬಯಸುತ್ತೇನೆ, ಜನರ ಮೇಲೆ ವಿಶ್ವಾಸವನ್ನು ಇಡುವ ಒಂದು ವಿಚಾರವನ್ನು ಯಾವಾಗಲೂ ಮಾಡಬೇಕು. ನೀವು ಊಹೆಯನ್ನೇ ಮಾಡಿರದಂಥ ಪರಿಣಾಮ ಇದರಿಂದ ಸಿಗಬಹುದು. ನಾನು ಈ ದಿಕ್ಕಿನಲ್ಲಿ ಮುನ್ನಡೆಯಬೇಕು.

ನನಗೆ ಯಾವಾಗಲೂ ಅನಿಸುತ್ತಾ ಇತ್ತು, ಮೂರನೇ ಮತ್ತು ನಾಲ್ಕನೇ ವರ್ಗದ ಹುದ್ದೆಗಳಿಗಾಗಿ ಸಂದರ್ಶನವನ್ನು ಏಕೆ ಮಾಡಬೇಕು ಎಂದು ಪರೀಕ್ಷೆಯನ್ನು ಬರೆದು ಅಂಕಗಳನ್ನು ಗಳಿಸುತ್ತಾರಲ್ಲ, ಅದರ ಮೇಲೆ ವಿಶ್ವಾಸ ಇಡಿ. ನನಗೆ ಇನ್ನೊಂದು ಅನಿಸುತ್ತಿರುತ್ತದೆ, ನಮ್ಮ ರೈಲು ಮಾರ್ಗಗಳು ಇವೆಯಲ್ಲ, ಯಾವುದಾದರೂ ಒಂದು ರೂಟಿನಲ್ಲಿ ಟಿಕೆಟ್ ಚೆಕ್ಕರ್ ಇರಲ್ಲ ಅಂತ ಘೋಷಣೆ ಮಾಡಿ. ನಾವು ದೇಶದ ಜನರ ಮೇಲೆ ವಿಶ್ವಾಸವನ್ನು ಇಡಬೇಕು. ಬೇಕಾದಷ್ಟು ಇಂಥ ಪ್ರಯೋಗಗಳನ್ನು ಮಾಡಬಹುದು. ಒಂದು ಸಲ ನಾವು ದೇಶದ ಜನರನ್ನು ನಂಬಿದರೆ, ಅಪ್ರತಿಮ ಪರಿಣಾಮಗಳೂ ಲಭಿಸುತ್ತವೆ. ಇರಲಿ, ಇವು ನನ್ನ ಮನಸ್ಸಿನ ವಿಚಾರಗಳು. ಇದರಿಂದ ಯಾವುದೇ ಸರ್ಕಾರದ ನಿಯಮಗಳು ಆಗುವುದಿಲ್ಲ. ಆದರೆ, ಒಂದು ವಾತಾವರಣವಂತೂ

ಸೃಷ್ಟಿಯಾಗುತ್ತದೆ, ಎನ್ನುವ ಮಾತು ನಿಜ. ಈ ವಾತಾವರಣವನ್ನು ಯಾವುದೇ ರಾಜಕಾರಣಿ ಸೃಷ್ಟಿ ಮಾಡಿಲ್ಲ. ಈ ದೇಶದ ಒಂದು ಕೋಟಿ ಕುಟುಂಬಗಳು ಸೃಷ್ಟಿ ಮಾಡಿವೆ.

ರವಿ ಅಂತ ಒಬ್ಬ ಮಹನೀಯರು ನನಗೆ ಪತ್ರ ಬರೆದಿದ್ದಾರೆ, "ಗುಡ್ ನ್ಯೂಸ್ ಎವ್ರಿ ಡೆ" ಅವರು ಬರೆದಿದ್ದಾರೆ: ದಯವಿಟ್ಟು ನಿಮ್ಮ ಅಧಿಕಾರಿಗಳಿಗೆ ಹೇಳಿ, ಪ್ರತಿ ದಿನ ಯಾವುದಾದರೂ ಒಂದು ಒಳ್ಳೆಯ ಘಟನೆಯ ಬಗ್ಗೆ ಪೋಸ್ಟ್ ಮಾಡಿ ಅಂತ. ಯಾವುದೇ ಪತ್ರಿಕೆ, ನ್ಯೂಸ್ ಚಾನಲ್ ನೋಡಿ, ಪ್ರತಿಯೊಂದು ಬ್ರೇಕಿಂಗ್ ನ್ಯೂಸ್ ಅಂದರೆ ಒಂದು ಕೆಟ್ಟ ಸುದ್ದಿಯೇ ಆಗಿರುತ್ತದೆ. 125 ಕೋಟಿ ಜನಸಂಖ್ಯೆ ಇರುವ ನಮ್ಮ ದೇಶದಲ್ಲಿ ನಮ್ಮ ಸುತ್ತಮುತ್ತ ಏನೂ ಒಳ್ಳೆಯದು ನಡೆಯುವುದಿಲ್ಲವೇ? ದಯವಿಟ್ಟು ಈ ಪರಿಸ್ಥಿತಿಯನ್ನು ಬದಲಾಯಿಸಿ.

ರವಿಯವರು ಬಹಳ ಕೋಪವನ್ನು ವ್ಯಕ್ತ ಪಡಿಸಿದ್ದಾರೆ. ಆದರೆ, ಅದು ನನ್ನ ಮೇಲೆ ಅಲ್ಲ, ಪರಿಸ್ಥಿತಿಯ ಕುರಿತು ಕೋಪ ತೋರಿಸುತ್ತಾ ಇದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ. ನಿಮಗೆ ನೆನಪಿರಬಹುದು, ಭಾರತದ ರಾಷ್ಟ್ರಪತಿಗಳಾಗಿದ್ದ ಡಾ. ಎ.ಪಿ.ಜೆ. ಅಬ್ದುಲ್ ಕಲಾಮ್ ಅವರು ಯಾವಾಗಲೂ ಇದನ್ನು ಹೇಳುತ್ತಾ ಇದ್ದರು – ಪತ್ರಿಕೆಯ ಮೊದಲ ಪುಟದಲ್ಲಿ ಯಾವಾಗಲೂ ಸಕಾರಾತ್ಮಕವಾದ ಸುದ್ದಿಗಳನ್ನು ಪ್ರಕಟಿಸಿ ಅಂತ. ಅವರು ನಿರಂತರವಾಗಿ ಈ ಮಾತನ್ನು ಹೇಳುತ್ತಲೇ ಇದ್ದರು.

ಕೆಲವು ದಿನಗಳ ಹಿಂದೆ ಒಂದು ಪತ್ರಿಕೆಯವರು ನನಗೆ ಬರೆದಿದ್ದರು, ಸೋಮವಾರದ ದಿನ ನಾವು ಒಂದೂ ನಕಾರಾತ್ಮಕ ಸುದ್ದಿಯನ್ನು ಪ್ರಕಟಿಸುವುದಿಲ್ಲವೆಂದು ನಿರ್ಧಾರ ಮಾಡಿದ್ದೇವೆ ಎಂದು. ಕೇವಲ ಸಕಾರಾತ್ಮಕ ಸುದ್ದಿ ಮಾತ್ರ ಇರುತ್ತದೆ, ಅಂದು. ನಾವು ನೋಡಿರುವ ಹಾಗೆ ಕೆಲವು ಟಿವಿ ಚಾನಲಿನವರು ಸಕಾರಾತ್ಮಕ ಸುದ್ದಿಗಳನ್ನು ವಿಶೇಷ ಸಮಯದಲ್ಲಿ ಪ್ರಸಾರ ಮಾಡುತ್ತಾ ಇದ್ದಾರೆ. ಇದರಿಂದಾಗಿ ಇತ್ತೀಚೆಗೆ ಸಕಾರಾತ್ಮಕ ಸುದ್ದಿಗಳ ವಾತಾವರಣ ಮೂಡುತ್ತಾ ಇದೆ ಅನ್ನುವ ಮಾತು ನಿಜ. ಒಳ್ಳೆಯ ಸುದ್ದಿಗಳು, ಸರಿಯಾದ ಸುದ್ದಿಗಳು ಜನರನ್ನು ತಲುಪುತ್ತಾ ಇರಲಿ ಎಂದು ಎಲ್ಲರಿಗೂ ಅನಿಸುತ್ತಿದೆ. ದೊಡ್ಡದೊಡ್ಡ ವ್ಯಕ್ತಿಗಳೂ ಕೂಡ ಉತ್ತಮೋತ್ತಮವಾದ ವಿಚಾರವನ್ನೇ ಹೇಳಲಿ. ಒಳ್ಳೊಳ್ಳೆ ಶಬ್ದಗಳನ್ನು ಬಳಸಿ, ಉತ್ತಮವಾದ ವಿಧಾನಗಳಲ್ಲಿ ಹೇಳಲಿ. ಒಂದು ಒಳ್ಳೆಯ ಸುದ್ದಿಯ ಪ್ರಭಾವ ಅಷ್ಟೊಂದು ಉತ್ತಮವಾಗಿರುತ್ತದೆ. ಒಳ್ಳೆಯ ಸುದ್ದಿ ಒಳ್ಳೆಯದನ್ನು ಮಾಡುವ ಪ್ರೇರಣೆಯನ್ನು ನೀಡುತ್ತದೆ. ನಾವು ಎಷ್ಟೊಂದು ಒಳ್ಳೆಯದಕ್ಕೆ ಬೆಂಬಲ ನೀಡುತ್ತೇವೆಯೊ ಅಷ್ಟೊಂದು ಪ್ರಮಾಣದಲ್ಲಿ ಕೆಟ್ಟವುಗಳಿಗೆ ಕಡಿಮೆ ಅವಕಾಶ ಸಿಗುತ್ತದೆ. ದೀಪವನ್ನು ಬೆಳಗಿಸಿದರೆ ಅಂಧಕಾರವು ಅಳಿಯಲೇ ಬೇಕು. ಅನುಮಾನವೇ ಇಲ್ಲ. ಆದ್ದರಿಂದ, ನಿಮಗೆ ಗೊತ್ತಿರಬಹುದು, ಸರ್ಕಾರದ ವತಿಯಿಂದ, 'ಟ್ರಾನ್ಸ್‌ಫಾರ್ಮಿಂಗ್ ಇಂಡಿಯಾ' ಎನ್ನುವ ವೆಬ್‌ಸೈಟ್‌ನ್ನು ಚಲಾವಣೆಗೆ ತರಲಾಗಿದೆ. ಇದರಲ್ಲಿ ಸಕಾರಾತ್ಮಕ ಸುದ್ದಿಗಳು ಇರುತ್ತವೆ. ಸರ್ಕಾರದ ಸುದ್ದಿಗಳಷ್ಟೇ ಅಲ್ಲ. ಜನತೆಯ ಸುದ್ದಿಗಳೂ ಇರುತ್ತವೆ. ನಿಮ್ಮ ಬಳಿ ಏನಾದರೂ ಒಳ್ಳೆಯ ಸುದ್ದಿಯಿದ್ದರೆ ನೀವು ಅದನ್ನು ಈ ಪೋರ್ಟಲ್‌ಗೆ ಕಳಿಸಬಹುದು. ರವಿಯವರೇ, ನೀವು ಒಳ್ಳೆಯ ಸಲಹೆಯನ್ನು ನೀಡಿದ್ದೀರಿ. ಆದರೆ, ದಯವಿಟ್ಟು ನನ್ನ ಮೇಲೆ ಕೋಪ ಮಾಡಿಕೊಳ್ಳಬೇಡಿ. ನಾವೆಲ್ಲರೂ ಸೇರಿ ಸಕಾರಾತ್ಮಕವಾದುದ್ದನ್ನು ಮಾಡುವ, ಸಕಾರಾತ್ಮಕವಾದ ಮಾತನ್ನು ಆಡುವ, ಸಕಾರಾತ್ಮಕವಾದದ್ದನ್ನು ಜನರಿಗೆ ತಲುಪಿಸುವ ಪ್ರಯತ್ನವನ್ನು ಮಾಡೋಣ.

ನಮ್ಮ ದೇಶದ ಒಂದು ವಿಶೇಷತೆ ಎಂದರೆ, ಕುಂಭ ಮೇಳ. ಇದು ಪ್ರವಾಸಿಗರ ಆಕರ್ಷಣೆಯ ಕೇಂದ್ರವೂ ಹೌದು. ಇಷ್ಟು ದೀರ್ಘ ಸಮಯದವರೆಗೆ ನದಿಯ ದಡದಲ್ಲಿ ಕೋಟಿಗಟ್ಟಲೆ ಜನ ಸಮಾವೇಶಗೊಳ್ಳುತ್ತಾರೆ ಎನ್ನುವುದು ಜಗತ್ತಿನ ಬಹಳ ಕಡಿಮೆ ಜನರಿಗೆ ಗೊತ್ತು. ಶಾಂತ ಚಿತ್ತದಿಂದ, ಶಾಂತಿಪೂರ್ಣವಾಗಿ ಈ ಒಂದು ಮಹೋತ್ಸವ ಸಂಪನ್ನವಾಗಬೇಕು.

ಸಂಘಟನೆ ಅಥವಾ ಇವೆಂಟ್ ಮ್ಯಾನೇಜ್‌ಮೆಂಟ್ ದೃಷ್ಟಿಯಿಂದ, ಜನರ ಸಹಭಾಗಿತ್ವದ ದೃಷ್ಟಿಯಿಂದ, ಬಹುದೊಡ್ಡ ಮತ್ತು ಹೊಸ ಮಾನಕಗಳನ್ನು ಸೃಷ್ಟಿ ಮಾಡುವ ಮೇಳ ಇದಾಗಿರುತ್ತದೆ.

ಕೆಲವು ದಿನಗಳಿಂದ ನಾನು ನೋಡುತ್ತಾ ಇದ್ದೇನೆ, ಹಲವರು ಸಿಂಹಸ್ಥ ಕುಂಭದ ಚಿತ್ರಗಳನ್ನು ಅಪ್ಲೋಡ್ ಮಾಡುತ್ತಾ ಇದ್ದಾರೆ. ಭಾರತ ಸರ್ಕಾರ, ರಾಜ್ಯಸರ್ಕಾರಗಳು



ಪ್ರವಾಸೋದ್ಯಮ ಇಲಾಖೆಗಳು ಈ ಕುರಿತು ಒಂದು ಫೋಟೊ ಸ್ಪರ್ಧೆಯನ್ನು ಏರ್ಪಡಿಸಬೇಕು. ಅತ್ಯುತ್ತಮವಾದ ಫೋಟೊಗಳನ್ನು ತೆಗೆದು ಅಪ್ಲೋಡ್ ಮಾಡಿ ಅಂತ ಜನರಿಗೆ ಆಹ್ವಾನ ನೀಡಬೇಕು. ಕುಂಭಮೇಳಕ್ಕೊಂದು ವಾತಾವರಣ ನಿರ್ಮಾಣ ಆಗುತ್ತದೆ; ಕುಂಭಮೇಳದ ಮೂಲೆ ಮೂಲೆಗಳು ಎಷ್ಟೊಂದು ವೈವಿಧ್ಯದಿಂದ ಕೂಡಿರುತ್ತವೆ ಎನ್ನುವುದು ಜನರಿಗೆ ಗೊತ್ತಾಗುತ್ತದೆ. ಈ ನಡುವೆ ಮಧ್ಯಪ್ರದೇಶದ ಮುಖ್ಯಮಂತ್ರಿಯವರು ನನ್ನನ್ನು ಭೇಟಿ ಮಾಡಿದ್ದರು. ಸ್ವಚ್ಛತೆಯ ಬಗ್ಗೆ ನಾವು ಒತ್ತು ಕೊಡುತ್ತೇವೆ; ಅದರೆ ಸ್ವಚ್ಛತೆ ಆಗುವುದೇ ಇಲ್ಲ. ಹೀಗೆ ಆಗಬಾರದು. ಅಲ್ಲಿಂದ ಜನ ಸ್ವಚ್ಛತೆಯ ಸಂದೇಶವನ್ನೂ ತಮ್ಮೊಂದಿಗೆ ಒಯ್ಯಬೇಕು, ಹಾಗೇ ಆಗಬೇಕು. ನನಗನಿಸುತ್ತದೆ, ಕುಂಭಮೇಳ ಧಾರ್ಮಿಕ, ಆಧ್ಯಾತ್ಮಿಕ ಮೇಳ, ಹೌದು. ಆದರೆ, ಇದರಲ್ಲಿಯೇ ನಾವು ಒಂದು ಸಾಮಾಜಿಕವಾದ ಅವಕಾಶವನ್ನು, ಸಂಸ್ಕಾರದ ಅವಕಾಶವನ್ನು ಕಂಡುಕೊಳ್ಳಬಹುದು. ಅಲ್ಲಿಂದ ಒಳ್ಳೆಯ ಸಂಕಲ್ಪಗಳನ್ನು, ಒಳ್ಳೆಯ ವರ್ತನೆಗಳನ್ನು ಪಡೆದುಕೊಂಡು ತಮ್ಮ ತಮ್ಮ ಊರಿಗೆ ಹಿಂದಿರುಗುವ ಅವಕಾಶವನ್ನು ಕಲ್ಪಿಸಬಹುದು. ನೀರಿನ ಕುರಿತು ಪ್ರೀತಿ, ಶ್ರದ್ಧೆಯನ್ನು ಬೆಳೆಸಿಕೊಳ್ಳುವುದು ಹೇಗೆ? ನೀರಿನ ಸ್ವಯಂಸಂಗ್ರಹಣೆ ಮಾಡುವುದು ಹೇಗೆ? ಎನ್ನುವ ಕುರಿತು ಜಾಗೃತಿಯನ್ನು ಮೂಡಿಸಲು ಈ ಕುಂಭಮೇಳವನ್ನು ನಾವು ಒಂದು ವೇದಿಕೆಯನ್ನಾಗಿ ಬಳಸಿಕೊಳ್ಳಬೇಕಾಗಿದೆ.

ನನ್ನ ಪ್ರೀತಿಯ ದೇಶಬಾಂಧವರೇ, ಪಂಚಾಯತ್ ರಾಜ್ ದಿನದ ಮಹತ್ವದ ಸಂದರ್ಭದಲ್ಲಿ, ನಿಮ್ಮೆಲ್ಲರಿಗೂ ಅನಂತ ಧನ್ಯವಾದ, ಮತ್ತು ಪ್ರತಿಸಲದ ಹಾಗೆ ನಿಮ್ಮ ಮನದ ಮಾತು ನನ್ನ ಮನದಾಳದ ಮಾತಿನೊಂದಿಗೆ ಅನನ್ಯ ಸಂಬಂಧವನ್ನು ಕಲ್ಪಿಸಿಕೊಂಡಿದೆ. ಇದು ನನಗೆ ಬಹಳ ಸಂತೋಷವನ್ನು ನೀಡುವ ಸಂಗತಿಯಾಗಿದೆ. ಇನ್ನೊಮ್ಮೆ ನಿಮಗೆಲ್ಲಾ ಅನಂತ ಧನ್ಯವಾದಗಳು. ❑

# ವಿಭಿನ್ನ ಸಾಮರ್ಥ್ಯ; ಶಿಕ್ಷಣದ ಹಕ್ಕು – ಅವಕಾಶ

* ಇಂದುಮತಿ ರಾವ್



**ವಿಶೇಷಚೇತನ ಮಕ್ಕಳಿಗೆ, ಅವರಲ್ಲೂ ಬಾಲಕಿಯರಿಗೆ ಉತ್ತಮ ಕಲಿಕಾ ವಾತಾವರಣದಲ್ಲಿ ಸೂಕ್ತ ಹಾಗೂ ಅಡೆತಡೆ ರಹಿತವಾದ ಶಿಕ್ಷಣವನ್ನು ನೀಡಲು ಕೇವಲ ಬದ್ಧತೆ ಹೊಂದಿದ್ದರೆ ಸಾಲದು. ಅಂತರ್ಗತವಾದ ಶಿಕ್ಷಣದ ಬಗ್ಗೆ ಪರಿಕಲ್ಪನಾ ಸ್ಪಷ್ಟತೆ ಕೂಡ ಇರಬೇಕು. ಈ ಸ್ಪಷ್ಟತೆ ಗುರಿಯಲ್ಲಿ, ದೃಷ್ಟಿಕೋನದಲ್ಲಿ, ನೀತಿಗಳಲ್ಲಿ, ಕ್ರಿಯಾ ಯೋಜನೆಗಳಲ್ಲಿ, ಕಾನೂನು ಕಟ್ಟಳೆಗಳಲ್ಲಿ ಹಾಗೂ ಸಂಪನ್ಮೂಲ ಹಂಚಿಕೆಯಲ್ಲಿ ಕಾಣಬೇಕು.**

ಭಾರತದಲ್ಲಿ ವಿಶೇಷಚೇತನರ ಜನಸಂಖ್ಯೆ 2001 ಮತ್ತು 2011ರ ಅವಧಿಯಲ್ಲಿ ಶೇ. 22.4 ರಷ್ಟು ಹೆಚ್ಚಾಗಿದೆ. 2001ರಲ್ಲಿ 2.19 ಕೋಟಿಯಷ್ಟಿದ್ದ ಇವರ ಸಂಖ್ಯೆ 2011ರಲ್ಲಿ 2.68 ಕೋಟಿಗೆ ಹೆಚ್ಚಾಗಿದೆ. ಈ ಪೈಕಿ 1.5 ಕೋಟಿ ಪುರುಷರು, 1.18 ಕೋಟಿ ಮಹಿಳೆಯರಿದ್ದಾರೆ. ವಿಶೇಷಚೇತನರ ಜನಸಂಖ್ಯೆ ಬೆಳವಣಿಗೆ ನಗರ ಪ್ರದೇಶಗಳಲ್ಲಿ, ಅದರಲ್ಲೂ ಮಹಿಳೆಯರಲ್ಲಿ ಹೆಚ್ಚಾಗಿದೆ. ಕಳೆದ ದಶಕದ ಅವಧಿಯಲ್ಲಿ ನಗರ ಪ್ರದೇಶದಲ್ಲಿ ಈ ಜನಸಂಖ್ಯೆ ಬೆಳವಣಿಗೆ ಶೇ. 48.2 ರಷ್ಟಿದ್ದು, ನಗರ ಮಹಿಳಾ ವಿಶೇಷಚೇತನರ ಜನಸಂಖ್ಯೆ ಬೆಳವಣಿಗೆ ಶೇ. 55 ರಷ್ಟಿದೆ. 2011ರ ಜನಗಣತಿ ಪ್ರಕಾರ ಪರಿಶಿಷ್ಟ ಜಾತಿಯಲ್ಲಿ ಈ ವರ್ಗದ ಪ್ರಮಾಣ ಶೇ. 2.45 ಇದೆ.

### ನಾವು ಈಗ ಎಲ್ಲಿ ಇದ್ದೇವೆ?

2011ರ ಜನಗಣತಿಯ ವಿಶೇಷಚೇತನ ವ್ಯಕ್ತಿಗಳ ವರದಿಯಲ್ಲಿ ಇರುವ ವಿಶೇಷಚೇತನರ ಸಂಖ್ಯೆಯನ್ನು ಪ್ರಾಥಮಿಕ ಹಾಗೂ ಪ್ರೌಢಶಾಲೆಯಲ್ಲಿ ಅಧ್ಯಯನ ಮಾಡುತ್ತಿರುವ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಸಂಖ್ಯೆಗೆ ಹೋಲಿಸಿ ನೋಡಿದರೆ, ಈ ಮಕ್ಕಳ ಶೈಕ್ಷಣಿಕ ಹಕ್ಕುಗಳನ್ನು ಖಾತರಿಪಡಿಸಿಕೊಳ್ಳಲು ಭಾರತ ಇನ್ನೂ ಬಹಳ ದೂರ ಕ್ರಮಿಸಬೇಕಾಗುತ್ತದೆ ಎಂದು ಕಾಣುತ್ತದೆ. ಉನ್ನತ ಶಿಕ್ಷಣದಲ್ಲಿ ಹಾಗೂ 0–6 ವರ್ಷ ವಯೋಮಾನದಲ್ಲಿರುವ ವಿಶೇಷ ಅಗತ್ಯತೆಯುಳ್ಳವರನ್ನು ಮುಖ್ಯವಾಹಿನಿಗೆ ಸೇರ್ಪಡೆ ಮಾಡುವ ಬಗ್ಗೆ ಸರಿಯಾದ ಮಾಹಿತಿ ಇಲ್ಲ. ಈ ಅಂತರ ಇನ್ನೂ ಉಳಿದಿದ್ದು ಯೋಜನಾ ಉದ್ದೇಶಕ್ಕೆ ದೊಡ್ಡ ತೊಡಕಾಗಿದೆ.

1. ಸರ್ವ ಶಿಕ್ಷಣ ಅಭಿಯಾನ (ಎಸ್‌ಎಸ್‌ಎ)ದ ಶಿಕ್ಷಣ ಯೋಜನೆಯಲ್ಲಿ 10.71 ಲಕ್ಷ ವಿಶೇಷ ಅಗತ್ಯತೆಯುಳ್ಳ ಮಕ್ಕಳಿದ್ದಾರೆ (ಮಾಹಿತಿ ಮೂಲ : ಯುಡಿಐಎಸ್‌ಇ 2013–14)

2. ಪ್ರೌಢಶಾಲೆಯಲ್ಲಿ ಅಂತರ್ಗತ ಶಿಕ್ಷಣ ಪಡೆಯುತ್ತಿರುವ ವಿಶೇಷಚೇತನ ಮಕ್ಕಳು (ಐಇಡಿಎಸ್‌ಎಸ್) ಸುಮಾರು 2 ಲಕ್ಷ ಇದ್ದಾರೆ.

3. 977 ವಿಶೇಷ ಶಾಲೆಗಳಲ್ಲಿ ವಿಶೇಷ ಅಗತ್ಯತೆಯುಳ್ಳ ಸುಮಾರು 1 ಲಕ್ಷ ಮಕ್ಕಳು ಅಭ್ಯಾಸ ಮಾಡುತ್ತಿದ್ದಾರೆ (ಸರ್ಕಾರೇತರ ಸಂಸ್ಥೆಯೊಂದರ ಅಧ್ಯಯನ)

ಶಿಕ್ಷಣ ಸಿಗಬೇಕಾದ 0–29 ವರ್ಷ ವಯೋಮಾನದ ವಿಶೇಷಚೇತನರ ಸಂಖ್ಯೆ 2011ರ ಜನಗಣತಿ ಪ್ರಕಾರ 1.23 ಕೋಟಿ ಇದೆ. ಇದರಲ್ಲಿ 53.4 ಲಕ್ಷ ಬಾಲಕಿಯರು–ಮಹಿಳೆಯರು ಇದ್ದಾರೆ. ಪ್ರಸ್ತುತ ಕನಿಷ್ಠ 20 ಲಕ್ಷ ಮಕ್ಕಳು ಪ್ರಾಥಮಿಕ, ಪ್ರೌಢ ಹಾಗೂ ವಿಶೇಷ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ಅಂದಾಜಿಸಲಾಗಿದೆ. ಇನ್ನೂ ಶಿಕ್ಷಣ ಸಿಗದ ಬೇರೆ ಬೇರೆ ರೀತಿಯ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಶಿಕ್ಷಣ ದೊರೆಯುವದನ್ನು ಖಾತರಿಪಡಿಸಿಕೊಳ್ಳುವುದು ಹೇಗೆ? ಎಂಬ ಬಹು ದೊಡ್ಡ ಸವಾಲು ಎದುರಾಗಿದೆ.

ಭಾರತದ ಸಂವಿಧಾನವು ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಖಾತರಿಯನ್ನು ನೀಡಿದೆ. ಶಿಕ್ಷಣ ಹಕ್ಕು ಶಾಸನವು 2005 ರಿಂದ ಜಾರಿಯಲ್ಲಿದ್ದರೂ ಸಹ ವಿಶೇಷ ಅಗತ್ಯತೆಯುಳ್ಳ ಶೇ. 20

* ಪ್ರಾದೇಶಿಕ ಸಲಹಾಗಾರರು, ಸಿಬಿಆರ್ ನೆಟ್‌ವರ್ಕ್. Email : ideasianetwork2013@gmail.com

ರಷ್ಟು ಮಕ್ಕಳಿಗೂ ಶಿಕ್ಷಣ ಒದಗಿಸಲು ನಮಗೆ ಸಾಧ್ಯವಾಗಿಲ್ಲದಿರುವುದು ಚರ್ಚೆಯ ವಿಷಯವಾಗಿಲ್ಲ. ವಿಶೇಷಚೇತನರ ಹಕ್ಕುಗಳಿಗೆ ಸಂಬಂಧಿಸಿದಂತೆ ಭಾರತ ಹಲವಾರು ಅಂತಾರಾಷ್ಟ್ರೀಯ ಒಡಂಬಡಿಕೆ ಹಾಗೂ ಒಪ್ಪಂದಗಳಿಗೆ ಸಹಿ ಮಾಡಿದೆ. ವಿಶೇಷಚೇತನರ ಹಕ್ಕುಗಳ ಕುರಿತು 2006ರಲ್ಲಿ ವಿಶ್ವಸಂಸ್ಥೆ ಸಮ್ಮೇಳನದಲ್ಲಿ ಭಾರತ ವಿಶೇಷಚೇತನರ ಹಕ್ಕುಗಳನ್ನು ರಕ್ಷಿಸುವ ಬದ್ಧತೆಗೆ ಸಹಿ ಹಾಕಿ ನಂತರ ಅದನ್ನು ದೃಢೀಕರಿಸಿಯೂ ಇದೆ. ವಿಕಲಚೇತನರ ಹಕ್ಕುಗಳ ಸಮಾವೇಶದ 24ನೇ ಅನುಚ್ಛೇದದಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಎರಡು ವಿಷಯಗಳಲ್ಲಿ ಸರ್ಕಾರಕ್ಕೆ ಬಾಧ್ಯತೆಯನ್ನು ನೀಡಲಾಗಿದೆ. ಅವುಗಳೆಂದರೆ

1. ವಿಶೇಷಚೇತನ ಮಕ್ಕಳು ಹಾಗೂ ಯುವಜನತೆಗೆ ಇತರ ಮಕ್ಕಳಿಗೆ ಸಿಗುವ ಶಿಕ್ಷಣಕ್ಕೆ ಸಮಾನವಾದ ಶಿಕ್ಷಣವನ್ನು ಒದಗಿಸುವುದು.

2. ಒಳಗೊಂಡ ಅಂತರ್ಗತ ವ್ಯವಸ್ಥೆಯಲ್ಲಿಯೂ ಶಿಕ್ಷಣ ಒದಗಿಸುವುದು.

ಯಾವ ತಾರತಮ್ಯ ಮಾಡದೆ ಪ್ರತಿಯೊಬ್ಬರಿಗೂ ಶಿಕ್ಷಣ ನೀಡುವ ಬದ್ಧತೆಯನ್ನು ಭಾರತ ಹೊಂದಿದ್ದರೂ ಸಹ ಈ ದುಃಸ್ಥಿತಿಗೆ ಹಲವಾರು ಆಯಾಮಗಳಿವೆ ಎಂದು ವಾದಿಸಲಾಗುತ್ತದೆ. ವಿಶೇಷಚೇತನ ಮಕ್ಕಳಿಗೆ, ಅವರಲ್ಲೂ ಬಾಲಕಿಯರಿಗೆ ಉತ್ತಮ ಕಲಿಕಾ ವಾತಾವರಣದಲ್ಲಿ ಸೂಕ್ತ ಹಾಗೂ ಅಡೆತಡೆ ರಹಿತವಾದ ಶಿಕ್ಷಣವನ್ನು ನೀಡಲು ಕೇವಲ ಬದ್ಧತೆ ಹೊಂದಿದ್ದರೆ ಸಾಲದು. ಅಂತರ್ಗತವಾದ ಶಿಕ್ಷಣದ ಬಗ್ಗೆ ಪರಿಕಲ್ಪನಾ ಸ್ಪಷ್ಟತೆ ಕೂಡ ಇರಬೇಕು. ಈ ಸ್ಪಷ್ಟತೆ ಗುರಿಯಲ್ಲಿ, ದೃಷ್ಟಿಕೋನದಲ್ಲಿ, ನೀತಿಗಳಲ್ಲಿ, ಕ್ರಿಯಾ ಯೋಜನೆಗಳಲ್ಲಿ, ಕಾನೂನು ಕಟ್ಟಳೆಗಳಲ್ಲಿ ಹಾಗೂ ಸಂಪನ್ಮೂಲ ಹಂಚಿಕೆಯಲ್ಲಿ ಕಾಣಬೇಕು.

ಹಿಂದೆ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶಿಕ್ಷಣವು ಶೈಕ್ಷಣಿಕ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಕಾಣುತ್ತಿರಲಿಲ್ಲ. ಸಾಮಾನ್ಯ ಶಿಕ್ಷಣ ವ್ಯವಸ್ಥೆಯು ನಮ್ಮ ಶಾಲಾ ಹಾಗೂ ವಿಶ್ವವಿದ್ಯಾಲಯಗಳನ್ನು ವಿಶೇಷಚೇತನರಿಗೆ ಬೇಕಾದ ಶಿಕ್ಷಣದ ಸೇರ್ಪಡೆಗೆ ಸೂಕ್ತ ತರಬೇತಿ ನೀಡಿ, ಸಜ್ಜುಗೊಂಡಿರುತ್ತಿರಲಿಲ್ಲ.



### ವಿಶೇಷ ಅಗತ್ಯತೆ ಮತ್ತು ಹೊಸ ಶಿಕ್ಷಣ ನೀತಿ

ಒಂದು ಸಮಗ್ರ ಶಿಕ್ಷಣ ನೀತಿಯು ಮೂಲತಃ ರಾಜಕೀಯ ಇಚ್ಛಾಶಕ್ತಿ ಹಾಗೂ ದೃಷ್ಟಿಕೋನವನ್ನು ಕಾರ್ಯರೂಪಕ್ಕೆ ತರುವ ಮಾರ್ಗಗಳನ್ನು ಕಂಡುಕೊಳ್ಳುವ ಪ್ರಯತ್ನವಾಗಿದೆ. ನಮ್ಮ ಸಮಾಜದಲ್ಲಿರುವ, ಪ್ರತಿಕೂಲತೆಯಿಂದಕೂಡಿದ ಈ ವರ್ಗವನ್ನು ಮುಖ್ಯವಾಹಿನಿಯ ಶಿಕ್ಷಣ ಹಾಗೂ ಅಭಿವೃದ್ಧಿಗೆ ಸೇರ್ಪಡೆಗೊಳಿಸುವುದು ಒಂದು ಪ್ರಕ್ರಿಯೆ. ಈ ಸೇರ್ಪಡೆ ಮಾರ್ಗದಲ್ಲಿ ಎದುರಾಗುವ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ರಾಜಕೀಯ, ಆಡಳಿತಾತ್ಮಕ ಹಾಗೂ ಇತರ ಅಡ್ಡಿ ಆತಂಕಗಳನ್ನು ಗುರುತಿಸಿ, ಅವುಗಳನ್ನು ವ್ಯವಸ್ಥಿತವಾಗಿ ತೆಗೆದು ಹಾಕಬೇಕಾಗುತ್ತದೆ.

ಹೊಸ ಶಿಕ್ಷಣ ನೀತಿ 2015ರಲ್ಲಿ ಅಂತರ್ಗತ ಶಿಕ್ಷಣವನ್ನು ವಿಶಾಲವಾಗಿ ಅರ್ಥೈಸಿರುವುದು ಕಂಡು ಬರುತ್ತದೆ. ಭಾರತದ ಸಂದರ್ಭದಲ್ಲಿ ಈ ಅಂತರ್ಗತ ಶಿಕ್ಷಣವು ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತ, ಮಕ್ಕಳು ಹಾಗೂ ವಿಕಲಚೇತನ ಯುವಜನ, ತೀವ್ರ ಬಡತನದ ಮಕ್ಕಳ, ಕಠಿಣ/ಸವಾಲಿನ ಪರಿಸ್ಥಿತಿಯಲ್ಲಿರುವ ಮಕ್ಕಳ ವಿಭಿನ್ನವಾದ ಅಗತ್ಯತೆಗಳನ್ನು ಒಳಗೊಂಡಿರುವುದು ಅತ್ಯಾವಶ್ಯಕ. ಇದೇ ಮೊದಲ ಬಾರಿಗೆ ಅಳವಡಿಸಿಕೊಳ್ಳಲಾಗುತ್ತಿರುವ ಹೊಸ ಶಿಕ್ಷಣ ನೀತಿಯು ಅಂತರ್ಗತ ಶಿಕ್ಷಣಕ್ಕೆ ಸಂಬಂಧಿಸಿದಂತೆ ಭಾರತೀಯ ದೃಷ್ಟಿಕೊನ ಹೊಂದಿದ್ದರೂ ಜಾಗತಿಕವಾದ ಕಾಳಜಿ ಹಾಗೂ ಬದ್ಧತೆಯನ್ನು ಪ್ರತಿಫಲಿಸುತ್ತದೆ.

ಮುಖ್ಯವಾಹಿನಿ ಶಿಕ್ಷಣದಿಂದ ವಿಶೇಷಚೇತನ ವ್ಯಕ್ತಿಗಳು/ಮಕ್ಕಳನ್ನು ಹೊರಗಿಡಬಹುದಾದ ಪ್ರಮುಖ ಅಂಶಗಳು ಯಾವುವು?

1. ಮುಖ್ಯವಾಹಿನಿ ಶಿಕ್ಷಣದಲ್ಲಿ ವಿಶೇಷಚೇತನ ಯುವಜನರನ್ನು ಹಾಗೂ ಮಕ್ಕಳನ್ನು ಸೇರ್ಪಡೆ ಮಾಡಿಕೊಳ್ಳುವುದನ್ನು ಕಡೆಗಣಿಸುವ ಭಾವನೆಯಿಂದ ಸರ್ವರಿಗೂ ಶಿಕ್ಷಣ ಎಂಬ ಧ್ಯೇಯ ಸಾಧಿಸಲು ಸಾಧ್ಯವಿಲ್ಲದಿರುವುದು.

2. ಸರ್ವರಿಗೂ ಶಿಕ್ಷಣದ ಗುರಿ ಸಾಧನೆಯಲ್ಲಿ ಪ್ರಗತಿ ನಿರ್ವಹಣೆಗಾಗಿ ಹಾಕಿಕೊಂಡ ಚೌಕಟ್ಟು ವಿಶೇಷಚೇತನ ಯುವಜನರನ್ನು ಹಾಗೂ ಮಕ್ಕಳನ್ನು ಕಡೆಗಣಿಸುವುದು.

3. ಯೋಜನೆ, ಆಡಳಿತ, ನಿರ್ವಹಣೆ ಹಾಗೂ ಅನುಷ್ಠಾನದ ಹಂತಗಳಲ್ಲಿ ಶಿಕ್ಷಣದ ಸೇರ್ಪಡೆಗೆ ಎದುರಾಗುವ ಅಡೆತಡೆಗಳನ್ನು ಗುರುತಿಸಿ ವ್ಯವಸ್ಥಿತವಾಗಿ ತೆಗೆದುಹಾಕುವಲ್ಲಿ ವಿಫಲವಾಗಿರುವುದು.

4. ಅಂತರ್ಗತ ಶಿಕ್ಷಣದ ಮೇಲೆ ಪರಿಣಾಮ ಬೀರುವಂತಹ ಅಂಶಗಳು ಪರಿಶಿಷ್ಟ ಜಾತಿ, ಪಂಗಡ, ಅಲ್ಪಸಂಖ್ಯಾತರ ವಿಕಲಚೇತನ ಯುವಕ ಹಾಗೂ ಮಕ್ಕಳ ಶಿಕ್ಷಣದಲ್ಲಿರುವ ಸಾಮಾಜಿಕ ಅಂತರಗಳಲ್ಲೂ ಇವೆ ಎಂಬುದನ್ನು ಗುರುತಿಸಲಾಗದಿರುವುದು.

5. ಅಂಗವಿಕಲತೆಯು ರಾಜ್ಯ ಪಟ್ಟಿಯ ವಿಷಯವಾಗಿದ್ದು, ಶಿಕ್ಷಣವು ಸಮವರ್ತಿ ಪಟ್ಟಿಯ ವಿಷಯವಾಗಿದೆ. ಇದರಿಂದ ವಿವಿಧ ರಾಜ್ಯಗಳಲ್ಲಿ ವಿಶೇಷಚೇತನ ಯುವ ಜನರ ಹಾಗೂ ಮಕ್ಕಳ ಶಿಕ್ಷಣದಲ್ಲಿ ಅಂತರ ಉಂಟಾಗಿರುವುದು.

6. ವಿಶೇಷಚೇತನ ಮಕ್ಕಳ ಶಿಕ್ಷಣವು ಎರಡು ಸಚಿವಾಲಯಗಳ ಜವಾಬ್ದಾರಿಯಾಗಿದೆ. ಅಂತರ್ಗತ ಶಿಕ್ಷಣ ಮಾನವ ಸಂಪನ್ಮೂಲ ಸಚಿವಾಲಯದ ಜವಾಬ್ದಾರಿಯಾದರೆ ವಿಶೇಷ ಶಿಕ್ಷಣವು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಜವಾಬ್ದಾರಿಯಾಗಿದೆ. ಇದೇ ರೀತಿಯ ಪುನರಾವರ್ತನೆ ರಾಜ್ಯಗಳ ಹಂತದಲ್ಲೂ ಇದೆ. ಇದರ ಪರಿಣಾಮವಾಗಿ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶಿಕ್ಷಣದಲ್ಲಿ ವೈರುಧ್ಯದ ಅಭ್ಯಾಸಗಳು ಹಾಗೂ ನೀತಿ ನಿರೂಪಣೆಗಳು ಏರ್ಪಡುವುದು.

7. ಅಂತರ್ಗತ ಶಿಕ್ಷಣವು ಪ್ರಸ್ತುತ ಚಾಲ್ತಿಯಲ್ಲಿರುವ ಶಿಕ್ಷಣ ವ್ಯವಸ್ಥೆ ಸುಧಾರಣೆಗೆ ಆರಂಭಿಕ ಅಂಶವಾಗಿದೆ ಎಂಬುದನ್ನು ಗುರುತಿಸಲಾಗದಿರುವುದು.

8. ನಮ್ಮ ಸಾಮಾಜಿಕ ಸಾಂಸ್ಕೃತಿಕ ಪರಿಸ್ಥಿತಿಗೆ ಅನುಗುಣವಾದ ಪುನಶ್ಚೇತನ



ಕಾರ್ಯತಂತ್ರಗಳು ವಿಶೇಷಚೇತನ ಮಹಿಳೆಯರಿಗೆ / ಬಾಲಕಿಯರಿಗೆ ಬೇಕಾಗಿವೆ. ಮಹಿಳೆಯರ ಅಂತರ್ಗತ ಮೌಲ್ಯವನ್ನು ಇನ್ನೂ ಕಾಣದ ಆಧುನಿಕ ಜಗತ್ತಿನಲ್ಲಿ ನಿಕೃಷ್ಟವಾಗಿ ಬದುಕಿರುವ ವಿಶೇಷಚೇತನ ಮಹಿಳೆಯರ ಅಗತ್ಯಗಳು ಹಾಗೂ ಹಕ್ಕುಗಳ ಬಗ್ಗೆ ನಾವು ವ್ಯಾಪಕ ಅರಿವು ಮೂಡಿಸಬೇಕಾಗಿದೆ.

**ಅಂಗವಿಕಲತೆಯ ದತ್ತಾಂಶ**

2001ರ ಜನಗಣತಿ ಪ್ರಕಾರ ವಿಶೇಷಚೇತನರ ಪೈಕಿ ಶೇ. 75 ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ಮತ್ತು ಶೇ. 25 ರಷ್ಟು ಮಾತ್ರ ನಗರ ಪ್ರದೇಶಗಳಲ್ಲಿ ಇದ್ದಾರೆ. ದೇಶದ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ. 2.13 ರಷ್ಟು ಜನರು ಒಂದಲ್ಲ ಒಂದು ವಿಧದ ಅಂಗವೈಕಲ್ಯ ಹೊಂದಿದ್ದಾರೆ. ಅಂಗವಿಕಲತೆಯ ಪ್ರಮಾಣದ ಬೆಳವಣಿಗೆ ಗ್ರಾಮೀಣ ಪ್ರದೇಶದಲ್ಲಿ ನಗರ ಪ್ರದೇಶಕ್ಕಿಂತ ಹೆಚ್ಚು. ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣ ಶೇ. 2.21 ರಷ್ಟಿದ್ದರೆ ನಗರ ಪ್ರದೇಶದಲ್ಲಿ ಶೇ. 1.93 ಇದೆ. ಅಂಗವಿಕಲತೆಯ ಬೆಳವಣಿಗೆ ಮಹಿಳೆಯರಿಗಿಂತ ಪುರುಷರಲ್ಲಿ ಹೆಚ್ಚಾಗಿದೆ. ಪುರುಷರ ಬೆಳವಣಿಗೆ ಪ್ರಮಾಣ ಶೇ. 2.37 ರಷ್ಟಿದ್ದರೆ ಮಹಿಳೆಯರ ಪ್ರಮಾಣದ ಬೆಳವಣಿಗೆ ಶೇ. 1.87 ಇದೆ. ಈ ಬೆಳವಣಿಗೆ ದರ ಪರಿಶಿಷ್ಟ ಜಾತಿಯಲ್ಲಿ ಇತರರಿಗಿಂತ ಹೆಚ್ಚಾಗಿದ್ದು, ಶೇ. 2.23 ಇದೆ. ಬುಡಕಟ್ಟು ಜನಾಂಗದಲ್ಲಿ ಈ ಪ್ರಮಾಣ ಇತರರಿಗಿಂತ ಕಡಿಮೆ ಇದ್ದು, ಶೇ. 1.92 ಇದೆ.

2001ರ ಜನಗಣತಿಯಲ್ಲಿ 21.9 ದಶಲಕ್ಷ ಇದ್ದ ಇವರ ಸಂಖ್ಯೆ 2011ರ ಜನಗಣತಿಯಲ್ಲಿ 26.8 ಲಕ್ಷಕ್ಕೆ ಏರಿದ್ದು ಈ ದಶಕದಲ್ಲಿ ಶೇ. 2.13 ಯಿಂದ ಶೇ. 2.21ಗೆ ಬಂದಿದೆ.

ಪುರುಷ ವಿಶೇಷಚೇತನರು 14.9 ದಶಲಕ್ಷ ಇದ್ದು, ಮಹಿಳಾ ವಿಶೇಷಚೇತನರು 11.8 ದಶಲಕ್ಷ ಇದ್ದಾರೆ. ದೇಶದ ಗ್ರಾಮೀಣ ಪ್ರದೇಶದಲ್ಲಿ 18 ದಶ ಲಕ್ಷಕ್ಕೂ ಹೆಚ್ಚು ವಿಶೇಷಚೇತನರು ಗ್ರಾಮೀಣ ಪ್ರದೇಶದಲ್ಲಿದ್ದು, ಕೇವಲ 8.1 ದಶ ಲಕ್ಷ ಜನ ನಗರ ಪ್ರದೇಶದಲ್ಲಿ ಕೇಂದ್ರಿತವಾಗಿದ್ದಾರೆ. ಪುರುಷ ವಿಶೇಷಚೇತನರ ಶೇ. ಪ್ರಮಾಣ 2.41 ರಷ್ಟಿದ್ದು, ಮಹಿಳಾ ವಿಶೇಷಚೇತನರ ಪ್ರಮಾಣ ಶೇ. 2.01 ರಷ್ಟಿದೆ.

ವಿಶೇಷಚೇತನರ ಔದ್ಯೋಗಿಕ ದರವು ಭೌಗೋಳಿಕ ನೆಲೆ, ಲಿಂಗ, ಶಿಕ್ಷಣ ಇತರ ಅಂಶಗಳಿಂದ ಆಧಾರದ ಮೇಲೆ ವ್ಯತ್ಯಾಸವಾಗುತ್ತದೆ. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆಯ ಶೇ. 68 ರಷ್ಟು ಜನ ಗ್ರಾಮೀಣ ಪ್ರದೇಶದಲ್ಲಿ ಇದ್ದಾರೆ, ಹಾಗಾಗಿ ವಿಶೇಷಚೇತನರ ಸಂಖ್ಯೆಯೂ ಸಹ ಇಲ್ಲಿ ಹೆಚ್ಚು. ಬಡತನ ಹಾಗೂ ಸೂಕ್ತ ಆರೋಗ್ಯ ಸೇವೆ ಲಭ್ಯವಾಗದ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಈ ಸಮಸ್ಯೆ ಸ್ವಲ್ಪ ಹೆಚ್ಚಾಗಿದೆ. ಗ್ರಾಮೀಣ ಪ್ರದೇಶದ ವಿಶೇಷಚೇತನರಿಗೆ ಸೂಕ್ತ ಕೌಶಲ್ಯ ತರಬೇತಿ ಹಾಗೂ ಔದ್ಯೋಗಿಕ ಮಾರುಕಟ್ಟೆ ಸಮರ್ಪಕವಾಗಿ ದೊರೆತಿಲ್ಲ. ವಿಶೇಷಚೇತನರ ಸಾಕ್ಷರತೆ ಕೂಡ ಕಡಿಮೆ




ಇದೆ. 2011ರ ಜನಗಣತಿ ಪ್ರಕಾರ ಶೇ. 51 ರಷ್ಟು ವಿಶೇಷಚೇತನರು ಅನಕ್ಷರಸ್ಥರಾಗಿದ್ದಾರೆ. ಶೇ. 26 ರಷ್ಟು ಮಂದಿ ಪ್ರಾಥಮಿಕ ಶಿಕ್ಷಣದ ಹಂತ ತಲುಪಿದ್ದರೆ ಶೇ. 6 ರಷ್ಟು ಜನ ಮಾಧ್ಯಮ ಹಂತ ತಲುಪಿದ್ದಾರೆ. ಶೇ. 13 ರಷ್ಟು ಜನ ಪ್ರೌಢ ಶಿಕ್ಷಣ ಹಾಗೂ ಅದಕ್ಕಿಂತ ಹೆಚ್ಚಿನ ಶಿಕ್ಷಣ ಪಡೆದಿದ್ದಾರೆ. (ILO study Regional Office for Asia and the Pacific. - Bangkok: ILO, 2011)

ಪ್ರಸ್ತುತ ಲಭ್ಯವಿರುವ ದತ್ತಾಂಶಗಳು ಬಹಿರಂಗ ಪಡಿಸಿದ ಅಂಶಗಳಿಗಿಂತ ಬಹಿರಂಗಪಡಿಸದ ಅಂಶಗಳೇ ಹೆಚ್ಚಿದೆ. ಜನಗಣತಿಯು ಅತ್ಯಂತ ದೊಡ್ಡ ಪ್ರಕ್ರಿಯೆ ಆಗಿರುವುದರಿಂದ ವಿಶೇಷಚೇತನರ ಅಗತ್ಯತೆಗೆ ಅನುಗುಣವಾದ ಅಂಶಗಳ ದತ್ತಾಂಶಗಳನ್ನು ಒದಗಿಸುವುದು ಬಹುಶಃ ಕಷ್ಟದ ಕೆಲಸವಾಗಿದೆ. ಅಂಗವೈಕಲ್ಯತೆಯನ್ನು ಗುರುತಿಸಲು ವಿಶೇಷ ಕೌಶಲ್ಯ ಬೇಕು. ಮುಖ್ಯವಾಗಿ ಬೌದ್ಧಿಕ, ಮೆದುಳಿನ ಸಂವೇದನಾಶೀಲತೆ ಮಟ್ಟಗಳನ್ನು ಗುರುರಿಸಲು ವಿಶೇಷವಾದ ತರಬೇತಿ ಹೊಂದಿದವರಿಗೆ ಮಾತ್ರ ಸಾಧ್ಯವಾಗುತ್ತದೆ.

ಮುಖ್ಯವಾಹಿನಿಗೆ ವಿಶೇಷಚೇತನರ ಪರಿಣಾಮಕಾರಿ ಸೇರ್ಪಡೆಗೆ ಸೂಕ್ತ ಯೋಜನೆ ರೂಪಿಸಲು ವಿಶೇಷಚೇತನರ ದತ್ತಾಂಶಗಳು ಬೇಕು. ಈಗಿನ ಸಮೀಕ್ಷಾ ಪದ್ಧತಿಯಲ್ಲಿ ಸಮಗ್ರವಾದ ಮಾಹಿತಿ ಲಭ್ಯವಾಗದಿರುವ ಹಿನ್ನೆಲೆಯಲ್ಲಿ ಈ ದತ್ತಾಂಶಗಳನ್ನು ಪಡೆಯಲು ವಿನೂತನವಾದ ಮಾರ್ಗಗಳನ್ನು ಅನುಸರಿಸಬೇಕಾಗುತ್ತದೆ. ವಿಶೇಷಚೇತನರ ಹಲವಾರು ಆಯಾಮಗಳ ಬಗ್ಗೆ ನಮಗೆ ಮಾಹಿತಿ ಬೇಕಾಗಿದೆ. ಮುಖ್ಯವಾಗಿ ಅಂಗವೈಕಲ್ಯತೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಔದ್ಯೋಗಿಕ ಅಂಶಗಳು, ಪ್ರತಿಯೊಬ್ಬರ ವಿಭಿನ್ನವಾದ ಅಗತ್ಯಗಳು (ಪುನಶ್ಚೇತನ ಅಗತ್ಯಗಳು, ಉದ್ಯೋಗ, ಕೌಶಲ್ಯಾಭಿವೃದ್ಧಿ, ಶಿಕ್ಷಣ ಮುಂತಾದವು) ಮುಂತಾದ ಮಾಹಿತಿಗಳು ಬೇಕಾಗಿವೆ. ಈ ಮಾಹಿತಿಯ ಆಧಾರದ ಮೇಲೆ ವಿಶೇಷಚೇತನ ಮಕ್ಕಳನ್ನು ಅವರ ಕುಟುಂಬದಿಂದ ಬೇರ್ಪಡಿಸದೆಯೂ ಸಹ ಸಮುದಾಯದ ಹಂತದಲ್ಲಿ ಪರಿಣಾಮಕಾರಿ ಸೇರ್ಪಡೆಗೆ ಯೋಜನೆ ರೂಪಿಸಬಹುದು.

ಸಮುದಾಯ / ಶಾಲೆ / ಐ.ಸಿ.ಡಿ.ಎಸ್. ಹಂತದಲ್ಲಿ ವಿಶೇಷಚೇತನ ವ್ಯಕ್ತಿಗಳ ದಾಖಲೆಯನ್ನು ಭಾರತದಲ್ಲಿ



ಕಡ್ಡಾಯಗೊಳಿಸಬೇಕು. ಗ್ರಾಮದ ವಿಶೇಷಚೇತನರ ದಾಖಲೆ ಪುಸ್ತಕ, ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶಾಲಾ ದಾಖಲೆ ಪುಸ್ತಕ, ವಾರ್ಡ್‌ನ ವಿಶೇಷಚೇತನರ ದಾಖಲೆ ಪುಸ್ತಕಗಳನ್ನು ನಿರ್ವಹಿಸುವುದರಿಂದ ಗುರಿ ಸಾಧನೆ ಮಾಡಬಹುದು. ಈ ಮಾಹಿತಿಗಳನ್ನು ಆಧಾರ್ ಕಾರ್ಡ್ ಹಾಗೂ ಪಡಿತರ ಚೀಟಿಗಳಲ್ಲೂ ಸಹ ದಾಖಲಿಸಬೇಕು. ಈ ಮಾಹಿತಿಗಳ ಡಿಜಿಟಲೀಕರಣ ಮಾಡುವುದರಿಂದ ವಿಶೇಷಚೇತನರಿಗೆ ಪ್ರಸ್ತುತ ನೀಡುತ್ತಿರುವ ಕಾಗದದ ಗುರುತಿನ ಚೀಟಿ ಬದಲಿಗೆ ಸ್ಮಾರ್ಟ್ ಕಾರ್ಡ್‌ಗಳನ್ನು ನೀಡಿ ಉಪಯೋಗಿಸಬಹುದು.

ಸಮುದಾಯ ಆಧರಿತ ಪುನಶ್ಚೇತನ ಕಾರ್ಯಕ್ರಮದಲ್ಲಿ ಸಮುದಾಯ ಆಧರಿತ ಸೇರ್ಪಡೆ ಸೇವೆಗಳನ್ನು ನೀಡಲು ಈಗಾಗಲೇ ಗ್ರಾಮದ ವಿಶೇಷಚೇತನರ ದಾಖಲೆ ವ್ಯವಸ್ಥೆ ಹೊಂದಲಾಗಿದೆ.

ವಿಶೇಷಚೇತನರ ಸೇರ್ಪಡೆಗೆ ಅಡೆತಡೆ ಆಗಿರುವ ಇತರ ಅಂಶಗಳನ್ನು ಈ ಮುಂದಿನಂತೆ ಪಟ್ಟಿ ಮಾಡಲಾಗಿದೆ.

1. ಶಿಕ್ಷಣ ವ್ಯವಸ್ಥೆಗೆ ವಿಶೇಷಚೇತನ ಮಕ್ಕಳು ಕಾಣದಂತೆ ಉಳಿದುಕೊಂಡಿರುವುದು. 2. ಕುಟುಂಬಗಳಿಂದ ಸೂಕ್ತ ಬೆಂಬಲ ದೊರೆಯದಿರುವುದು. 3. ಸೂಕ್ತ ಪಠ್ಯಕ್ರಮ ಅಳವಡಿಸಿಕೊಳ್ಳಲು ಶಿಕ್ಷಕರಿಗೆ ಸೂಕ್ತ ತರಬೇತಿ, ನಾಯಕತ್ವಗುಣ, ಜ್ಞಾನ, ಇಲ್ಲದಿರುವುದು. 4. ಕಳಪೆ ಗುಣಮಟ್ಟದ ಶಿಕ್ಷಣ 5. ಪೋಷಕರು, ಶಿಕ್ಷಕರು, ಆಡಳಿತಗಾರರು ಹಾಗೂ ನೀತಿ ನಿರೂಪಕರಿಗೆ ಸರಿಯಾದ ಮಾಹಿತಿ ಹಾಗೂ ಜ್ಞಾನ ದೊರೆಯದಿರುವುದು. 6. ಅಂತರ್ಗತ ಶಿಕ್ಷಣಕ್ಕೆ ಆಡಳಿತ, ನೀತಿ, ಯೋಜನೆ, ಹಣಕಾಸು, ಅನುಷ್ಠಾನ ಹಾಗೂ ನಿರ್ವಹಣೆಯಂತಹ ಮೂಲಸೌಲಭ್ಯ ಇಲ್ಲದಿರುವುದು. 7. ಸೇರ್ಪಡೆಗೆ ಸಾರ್ವಜನಿಕ ಬೆಂಬಲದ ಕೊರತೆ. 8. ನಿರ್ವಹಣಾ ಯಾಂತ್ರಿಕತೆ ಹಾಗೂ ಹೊಣೆಗಾರಿಕೆಯ ಕೊರತೆ. ಒಟ್ಟಾರೆ ಈ ವಿಷಯದಲ್ಲಿ ರಾಜಕೀಯ ನಾಯಕತ್ವದಲ್ಲಿ ಪೊಳ್ಳುತನ ಕಾಣುತ್ತದೆ ಎಂದು ವಾದಿಸಲಾಗುತ್ತಿದೆ. ವಿಶೇಷ ಅಗತ್ಯತೆಯುಳ್ಳ ವ್ಯಕ್ತಿಗಳ ಶೈಕ್ಷಣಿಕ ಹಕ್ಕುಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ದೊಡ್ಡ ಕಂದರ ಇರುವುದರಿಂದ ಅಂತರ್ಗತ ಶಿಕ್ಷಣಕ್ಕೆ ಈಗಿನ ಹೊಣೆಗಾರಿಕೆ ಸಾಕಾಗುವುದಿಲ್ಲ ಎಂಬ ವಾದವಿದೆ.

### ಹೊಸ ಶಿಕ್ಷಣ ನೀತಿ–ಸಾಮಾಜಿಕ ಕಂದರಗಳ ನಡುವೆ ಸೇತುವೆ ನಿರ್ಮಾಣದ ಪ್ರಯತ್ನ

ಹೊಸ ಶಿಕ್ಷಣ ನೀತಿ 2015 ಉಪಕ್ರಮದಲ್ಲಿ ತಳದಿಂದ ಶಿಖರದ ಮಾರ್ಗವನ್ನು ಅಳವಡಿಸಿಕೊಂಡಿದ್ದು, ಸಮುದಾಯದ ಸಹಭಾಗಿತ್ವ ಹಾಗೂ ಚರ್ಚೆಗೆ ಅವಕಾಶ ಕಲ್ಪಿಸಿದೆ. ಇದು ಹೊಸ ಶಿಕ್ಷಣ ನೀತಿಯ ವಿಶೇಷವಾಗಿದೆ. ನೀತಿ ನಿರೂಪಕರು ಸಮುದಾಯದ ಕಾಳಜಿಯನ್ನು ವಾಸ್ತವದ ನೆಲೆಗಟ್ಟಿನಲ್ಲಿ ಅರ್ಥ ಮಾಡಿಕೊಂಡು, ನೀತಿಯೊಳಗೆ ಅಳವಡಿಸಲು ಈ ಸಹಭಾಗಿತ್ವದ ಮಾರ್ಗ ಅಗತ್ಯವಾಗಿದೆ. ಈ ನಿಟ್ಟಿನಲ್ಲಿ ಹೊಸ ನೀತಿಯು ಅಂತರ್ಗತ ಶಿಕ್ಷಣದ ಪ್ರಯತ್ನ ಮಾಡಿದ್ದು ಯಶಸ್ವಿಯಾಗಿದೆ. ಅಂತರ್ಗತ ಶಿಕ್ಷಣದ ಪರಿಕಲ್ಪನೆ ಬಹಳ ಸ್ಪಷ್ಟವಾಗಿ ಈ ನೀತಿಯ ಚೌಕಟ್ಟಿನಲ್ಲಿ ಸೇರಿದೆ. ಕಲಿಕಾರ್ಥಿಗಳ ವಿಭಿನ್ನ ಅಗತ್ಯತೆಗಳನ್ನು ಈಡೇರಿಸುವ ಸಾಮರ್ಥ್ಯ ಶಿಕ್ಷಕರಿಗೆ ಇರಬೇಕಾದುದನ್ನು ಹೊಸ ಶಿಕ್ಷಣ ನೀತಿ 2015 ಕಾಣುತ್ತಿದೆ.

ಹೊಸ ಶಿಕ್ಷಣ ನೀತಿ 2015ರ ಬಗ್ಗೆ ಆನ್‌ಲೈನ್ ಚರ್ಚೆ ನಡೆದಾಗ ಇ–ಕಲಿಕೆ, ಮಾಹಿತಿ ಸಂವಹನ ತಂತ್ರಜ್ಞಾನ (ಐಸಿಟಿ) ಕ್ಕೆ ಸಾಕಷ್ಟು ಪ್ರೋತ್ಸಾಹ ನೀಡಿ ಶಾಲೆಗಳನ್ನು ಬಲಪಡಿಸಬೇಕಾದ ಅಗತ್ಯವಿದೆ ಎಂಬ ಅಂಶ ಹೆಚ್ಚು ಪ್ರತಿಪಾದನೆಯಾಯಿತು. ವಿಶೇಷಚೇತನರ ವಿಶೇಷ ಅಗತ್ಯಗಳನ್ನು ಈಡೇರಿಸಲು ಶಿಕ್ಷಕರಿಗೆ ತರಬೇತಿ ನೀಡಬೇಕು ಎಂಬ ವಿಷಯವನ್ನು ವಿಶೇಷಚೇತನರು, ಅವರ ಕುಟುಂಬಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಎತ್ತಿದವು.

ಶಿಕ್ಷಣ ವಂಚಿತ ವಿಶೇಷಚೇತನ ಯುವಕರು ಹಾಗೂ ಮಕ್ಕಳ ನಡುವೆ ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಬಹಳ ಅಂತರವಿದ್ದು, ಇದು ಪ್ರಮುಖ ಸವಾಲಾಗಿದೆ ಎಂಬ ಅಂಶ ಚರ್ಚೆಯಲ್ಲಿ ಗುರುತಿಸಲ್ಪಟ್ಟಿತು.



ಶಿಕ್ಷಣ ಪ್ರವೇಶ, ಶಿಕ್ಷಣ ನೀತಿ, ಶಿಕ್ಷಕರ ತರಬೇತಿ, ಪಠ್ಯಗಳ ಅಭಿವೃದ್ಧಿ, ಬೋಧನಾ ತಂತ್ರಗಳು, ಕಲಿಕಾ ಸಾಮಗ್ರಿಗಳು, ಮೌಲ್ಯ ಮಾಪನ ವ್ಯವಸ್ಥೆ, ವಾಸ್ತವ ಕಲಿಕಾ ವೇದಿಕೆಗಳು ಮುಂತಾದ ಶಿಕ್ಷಣದ ವಿವಿಧ ಘಟಕಗಳಲ್ಲಿ ವಿಶೇಷಚೇತನ ಸಮಸ್ಯೆ ನಿವಾರಣೆಯ ಕಾಳಜಿಯನ್ನು ಹೊಸ ಶಿಕ್ಷಣ ನೀತಿ 2015 ಹೊಂದಿದೆ.

ಅಂತರ್ಗತ ಶಿಕ್ಷಣವು ಅಂಗವಿಕಲತೆಯ ದೃಷ್ಟಿಕೋನದಿಂದ ನೋಡುವಂತೆ ಹೊಸ ಶಿಕ್ಷಣ ನೀತಿ 2015 ರೂಪಿಸಲಾಗಿದೆ. ವಿಭಜಿತ ವಾತಾವರಣದಲ್ಲಿ ವಿಶೇಷಚೇತನ ಮಕ್ಕಳನ್ನು ಪ್ರತ್ಯೇಕವಾಗಿ ನೋಡುವ ಪರಿಪಾಠ ತೆಗೆಯುವುದನ್ನು ಹೊಸ ನೀತಿ ಪ್ರೋತ್ಸಾಹಿಸುತ್ತದೆ. ಸೂಕ್ತ ಹಾಗೂ ಸಮರ್ಪಕ ವಾತಾವರಣದಲ್ಲಿ ಪ್ರತಿ ಮಗುವಿಗೂ ಶಿಕ್ಷಣದ ಹಕ್ಕು ಲಭ್ಯತೆಯನ್ನು ಖಾತರಿ ಪಡಿಸಿಕೊಳ್ಳುವ ನಿಟ್ಟಿನಲ್ಲಿ, ಕಲಿಕೆಯನ್ನು ಗಮನಿಸಬಹುದಾದ, ಅಳೆಯಬಹುದಾದ ಹಾಗೂ ಸಾಧಿಸಬಹುದಾದ ಕ್ರಮಗಳಲ್ಲಿ ನಿರ್ದಿಷ್ಟ ಗುರಿಗಳನ್ನು ಈ ನೀತಿ ಇಟ್ಟುಕೊಂಡಿದೆ. ಮಗುವಿನ ಲಿಂಗ ಹಾಗೂ ಅಂಗವೈಕಲ್ಯತೆಯ ಆಧಾರದ ಮೇಲೆ ಇದು ಪಕ್ಷಪಾತ ಮಾಡುವುದಿಲ್ಲ. ಹೊಸ ನೀತಿ ತಳ ಹಂತದಲ್ಲಿ ಅನುಷ್ಠಾನಗೊಂಡಾಗ, ಈ ಮಕ್ಕಳ ಭವಿಷ್ಯದ ದಿಕ್ಕನ್ನೇ ಬದಲಾಯಿಸಬಲ್ಲ ಸಾಮರ್ಥ್ಯವನ್ನು ಇದು ಹೊಂದಿದೆ.ಸಶಕ್ತ ವಾತಾವರಣದಲ್ಲಿ ವಿಶೇಷ ಅಗತ್ಯತೆಯುಳ್ಳವರ ಕಲಿಕೆಗೆ ಎಲ್ಲಾ ಬಾಗಿಲುಗಳನ್ನು ತೆರೆಯುವಂತಹ ಅಂತರ್ಗತ ಶಿಕ್ಷಣ ವ್ಯವಸ್ಥೆಯ ಕಡೆಗೆ ಶ್ರಮಿಸೋಣ. ತಂತ್ರಾಂಶದ ಶಿಕ್ಷಣ ವ್ಯವಸ್ಥೆ, ಇ–ಕಲಿಕೆ ಸೌಲಭ್ಯಗಳು, ಉದ್ದೇಶಿತ ಸ್ವಯಂ ಆನ್‌ಲೈನ್ ಕಲಿಕೆ, ಅಂತರ್ಗತ ಶಿಕ್ಷಕರ ತರಬೇತಿ ಕಾರ್ಯಕ್ರಮ, ರಾಷ್ಟ್ರೀಯ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮ, ಶಿಕ್ಷಕರ ಸಾಮರ್ಥ್ಯ ವರ್ಧನೆ ಕ್ರಮಗಳು ಭಾರತದಲ್ಲಿ ಸರ್ವರಿಗೂ ಶಿಕ್ಷಣ ಎಂಬ ಧ್ಯೇಯವನ್ನು ನಿಜವಾಗಿಸುತ್ತವೆ. ❑

ಸಾಕಾರ

# ವಿಶೇಷ ಚೇತನರಿಗೆ ಕೌಶಲ್ಯ ತರಬೇತಿ – ಉದ್ಯೋಗ

* ಶಾಂತಿ ರಾಘವನ್




ಭಾರತದಲ್ಲಿ ವಿಶೇಷಚೇತನರು ಆರ್ಥಿಕ ಚಟುವಟಿಕೆಯ ಒಂದು ಭಾಗವಾಗಿ ಯೋಜನೆಯ ಫಲ ನೀಡುವ ಸಮಯ ಸನ್ನಿಹಿತವಾಗಿದೆ. ವಿವಿಧ ರೀತಿಯ ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳಿಗೆ ಸೂಕ್ತವಾದ ಯಶಸ್ವಿ ಮಾದರಿಗಳನ್ನು ನಾವು ಅಳವಡಿಸಿಕೊಳ್ಳಬೇಕಾಗಿದೆ.

ಸಣ್ಣ ಕಂಪನಿಯೊಂದರಲ್ಲಿ ಶ್ರೀ ಮಂಜುನಾಥ ಅವರು 15 ಜನರ ತಂಡದ ಸುಪರ್‌ವೈಸರ್ ಆಗಿದ್ದಾರೆ. ಯಂತ್ರದ ನೆರವಿನಿಂದ ಉಡುಪು ತಯಾರಿಸುವ ಕೆಲಸಗಳನ್ನು ಇವರ ತಂಡ ನಿರ್ವಹಿಸುತ್ತದೆ. ಗುಣಮಟ್ಟ ಕಾಯ್ದುಕೊಳ್ಳುವುದು ಇವರ ಸವಾಲಿನ ಕೆಲಸ. ಉತ್ಪನ್ನವನ್ನು ಗಿರಾಕಿಗಳು ತಿರಸ್ಕರಿಸಿದರೆ ವ್ಯವಹಾರದಲ್ಲಿ ನಷ್ಟವಾಗುತ್ತದೆ ಎಂಬ ಅರಿವು ಮಂಜುನಾಥ ಅವರಿಗೆ ಇದೆ. ಉತ್ಕೃಷ್ಟ ಉತ್ಪನ್ನಗಳನ್ನು ನೀಡುವ ಶ್ರೀ ಮಂಜುನಾಥ ಅಂತಹವರು ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿ ಅವರ 'ಮೇಕ್ ಇನ್ ಇಂಡಿಯಾ' (ಭಾರತದಲ್ಲೇ ತಯಾರಿಸು) ಪರಿಕಲ್ಪನೆಗೆ ಸ್ಫೂರ್ತಿಯಾದವರು. ಮಂಜುನಾಥ ಅವರಿಗೆ ಸ್ವಲ್ಪ ದೃಷ್ಟಿದೋಷವಿದೆ. ಇವರ ತಂಡದಲ್ಲಿ ಅಂಗವೈಕಲ್ಯ ಇರುವವರೂ ಸೇರಿದಂತೆ ವಿಭಿನ್ನತೆಯಿಂದ ಕೂಡಿದ ಹಲವರು ಇದ್ದಾರೆ.

ಶ್ರೀ ಸ್ಟ್ಯಾನ್ಲಿ ಸ್ವಯಂ ಉದ್ಯೋಗಿ. ಫಿನಾಯಿಲ್ ವ್ಯಾಪಾರ ನಡೆಸುತ್ತಾರೆ. ಇವರು ಸೆರೆಬ್ರಲ್ ಪಾಲ್ಸಿ ಸಮಸ್ಯೆ ಇರುವವರು. ತಬಸುಮ್ ಅವರು ಆಫ್‌ಶೋರ್ ನೆರವಿನ ಕೇಂದ್ರದಲ್ಲಿ ಕೆಲಸ ಮಾಡುತ್ತಾರೆ. ಸಾಗರದಾಚೆಯ ಇಂಗ್ಲೆಂಡ್‌ನ ಗ್ರಾಹಕರನ್ನು ನಿಭಾಯಿಸಲು ಸದಾ ವಿದ್ಯುನ್ಮಾನ ಪರದೆಯನ್ನು ಇವರು ನೋಡುತ್ತಿರಬೇಕು. ತಬಸುಮ್ ದೈಹಿಕ ಅಂಗವೈಕಲ್ಯ ಇರುವವರು. ಶ್ರೀ ಪ್ರದೀಪ್, ಮಾಲ್ ಒಂದರಲ್ಲಿ ಕೆಲಸ ಮಾಡುತ್ತಾರೆ. ಇವರಿಗೆ ಬೌದ್ಧಿಕ ವೈಕಲ್ಯತೆ ಹಾಗೂ ದೃಷ್ಟಿದೋಷ ಹಾಗೂ ಶ್ರವಣ ದೋಷ ಸಹ ಇದೆ. ಶ್ರವಣ ದೋಷ ಇರುವ ಶ್ರೀ ರಾಜೀವ್ ಅವರು ಬಹುರಾಷ್ಟ್ರೀಯ ಬ್ಯಾಂಕ್‌ವೊಂದರಲ್ಲಿ ವಿಶ್ಲೇಷಕರಾಗಿದ್ದಾರೆ. ಅಂಧರಾಗಿರುವ ಶ್ರೀ ಪ್ರಶಾಂತ್ ನಿರಂತರ ಪರಿಶ್ರಮದ ಫಲವಾಗಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹುದ್ದೆ ಪಡೆದುಕೊಂಡಿದ್ದಾರೆ. ಅಂಧರಾಗಿರುವ ಕಾರಣ ಇವರಿಗೆ ಮೊದ ಮೊದಲಿಗೆ ಕೆಲಸ ಮಾಡಲು ಬಿಟ್ಟಿರಲಿಲ್ಲ. ಇವರಿಗೆ ವಿಶೇಷ ತರಬೇತಿ ನೀಡಿ, ಇವರ ಮಾತನ್ನು ಗುರುತಿಸಿ, ಬರಹದಲ್ಲಿ ದಾಖಲಿಸುವ ಸಾಫ್ಟ್‌ವೇರ್‌ಅನ್ನು ಅಳವಡಿಸಿದ ನಂತರ ಶ್ರೀ ಪ್ರಶಾಂತ್ ಎಲ್ಲಾ ಸವಾಲುಗಳನ್ನು ಆತ್ಮವಿಶ್ವಾಸದಿಂದ ನಿಭಾಯಿಸಲು ಸಾಧ್ಯವಾಗಿದೆ. ಶ್ರೀ ಪ್ರಶಾಂತ್ ತಮ್ಮ ದಕ್ಷತೆ ಹಾಗೂ ಕಾರ್ಯಕ್ಷಮತೆಯಿಂದ ಸಹೋದ್ಯೋಗಿಗಳ ಹಾಗೂ ಗ್ರಾಮಸ್ಥರ ಪ್ರೀತಿ ವಿಶ್ವಾಸ ಗಳಿಸಿದ್ದಾರೆ.

ತೀವ್ರ ಅಂಗವೈಕಲ್ಯತೆ ಇರುವ ಶ್ರೀಮತಿ ಗೌಸಿಯಾಳಿಗೆ ಸ್ನಾನ ಹಾಗೂ ಊಟೋಪಚಾರವನ್ನು ಅವರ ತಾಯಿಯೇ ಮಾಡಿಸಬೇಕಾಗಿದೆ. ಇಷ್ಟಾದರೂ ಸಹ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಯೋಜನಾ ಸಮನ್ವಯಾಧಿಕಾರಿಯಾಗಿ ಅವರು ಮಾಡಿದ ಗಳಿಕೆಯಿಂದ ಆಕೆ ತನ್ನ ತಾಯಿ ಹಾಗೂ ಕುಟುಂಬವನ್ನು ಆರ್ಥಿಕವಾಗಿ ಸಲಹುತ್ತಿದ್ದಾರೆ. ಇವರು ಆನ್‌ಲೈನ್‌ನಲ್ಲಿ ಬುಕ್ ಮಾಡಿ ಖರೀದಿಸಿದ ವಾಸಿಂಗ್ ಮೆಷಿನ್‌ನಿಂದ ಶ್ರೀಮತಿ ಗೌಸಿಯಾ ಅವರ ತಾಯಿಗೆ ತುಂಬಾ ಸಹಾಯವಾಗಿದೆ. ಶ್ರೀಮತಿ ಗೌಸಿಯಾ ಅವರು ಮಾತು ಗುರುತಿಸುವ ಸಾಫ್ಟ್‌ವೇರ್‌ನ ನೆರವಿನಿಂದ ಆನ್‌ಲೈನ್‌ನಲ್ಲಿ ತಾವು ಇರುವ ಸ್ಥಳದಲ್ಲೇ ಕೆಲಸ ಮಾಡುತ್ತಾರೆ. ಆಕೆಯ 'ಮಾತು' ಬಳಸಿ

* ಸಂಸ್ಥಾಪಕರು, ಎನೇಬಲ್ ಇಂಡಿಯಾ. Email : shanti@enable-india.org

ದೂರವಾಣಿ ಕರೆ ಮಾಡಲು, ಅಂತರ್ಜಾಲ ಸೇರಿದಂತೆ ಬೇರೆ ಬೇರೆ ಸಾಫ್ಟ್‌ವೇರ್ ಟೂಲ್‌ಗಳನ್ನು ಉಪಯೋಗಿಸಲು ಈ ಮಾತು ಗುರುತಿಸುವ ಸಾಫ್ಟ್‌ವೇರ್ ನೆರವಾಗುತ್ತದೆ. ತಂತ್ರಜ್ಞಾನವನ್ನು ಸಮರ್ಪಕವಾಗಿ ಬಳಸಿಕೊಂಡು ಅವರು ತಮ್ಮ ಆರ್ಥಿಕ ಅಗತ್ಯಗಳನ್ನು ಪೂರೈಸಿಕೊಂಡಿದ್ದಾರೆ.

ಸರ್ವಶ್ರೀ ಮಂಜುನಾಥ್, ಸ್ವಾಬ್ನಿ, ತಬಸುಮ್, ಪ್ರದೀಪ್, ರಾಜೀವ್ ಹಾಗೂ ಪ್ರಶಾಂತ್ ಮತ್ತು ಶ್ರೀಮತಿ ಗೌಸಿಯಾ ಅವರು 'ಭಾರತದಲ್ಲಿ ಬದಲಾವಣೆ'ಯ ಹವಾ ಉಂಟು ಮಾಡಿದವರು. ಉದ್ಯೋಗರ್ಹತೆ ಹಾಗೂ ಕೌಶಲ್ಯಗಳನ್ನು ಗಳಿಸಿಕೊಂಡ ಇವರು ಇತರರಂತೆ ಕೆಲಸ ಕಾರ್ಯಗಳನ್ನು ಮಾಡಿ, ಜೀವನಕ್ಕೆ ಬೇಕಾದ ಸಂಪಾದನೆ ಮಾಡಿ, ತೆರಿಗೆ ಸಹ ಕಟ್ಟುತ್ತಾರೆ, ತಮ್ಮ ತಮ್ಮ ಕುಟುಂಬಗಳನ್ನು ನೋಡಿಕೊಳ್ಳುತ್ತಾರೆ. ಎಲ್ಲರಂತೆ ಸಮಾಜದ ಭಾಗವಾಗಿ ಬದುಕುತ್ತಿದ್ದಾರೆ. ಅಂಗವೈಕಲ್ಯತೆ, ಬಡತನ ಹಾಗೂ ತಾರತಮ್ಯದಂತಹ ಸವಾಲುಗಳನ್ನು ಯಶಸ್ವಿಯಾಗಿ ಎದುರಿಸಬಲ್ಲ ಜನರನ್ನು ಹೊಂದಿರುವುದೇ ಭಾರತದ ಶ್ರೇಷ್ಠತೆ ಎಂಬುದನ್ನು ಈ ಸಾಧಕರು ನಮಗೆ ನೆನಪಿಸುತ್ತಾರೆ.

### ಉದ್ಯೋಗ ಹಾಗೂ ಕೌಶಲ್ಯ ಕುರಿತಾದ ಈಗಿನ ಸನ್ನಿವೇಶ

ಕಳೆದ ಹತ್ತು ವರ್ಷಗಳ ಈಚೆಗೆ ಮುಖ್ಯವಾಗಿ ಮೆಟ್ರೊಪಾಲಿಟನ್ ನಗರಗಳಲ್ಲಿ ಖಾಸಗಿ ವಲಯದಲ್ಲಿ ವಿಶೇಷಚೇತನರಿಗೆ ಉದ್ಯೋಗಾವಕಾಶ ಗಣನೀಯವಾಗಿ ಸುಧಾರಿಸಿದೆ. ವಿಶೇಷಚೇತನರ ನೇಮಕಾತಿಯಲ್ಲಿ ಸಹ ಕಂಪನಿಗಳು ವ್ಯವಹಾರಿಕ ಮೌಲ್ಯವನ್ನು ಕಾಣುತ್ತಿವೆ. ಉತ್ಪಾದಕತೆ ಹಾಗೂ ಗುಣಮಟ್ಟದ ಬಗ್ಗೆ ಕಂಪನಿಗಳು ಚಿಂತಿಸುತ್ತವೆ. ಈ ಅಗತ್ಯವನ್ನು ಉದ್ಯೋಗಾರ್ಹತೆ ಹೊಂದಿರುವ ಪರಿಣತಿ ಪಡೆದ ಅಭ್ಯರ್ಥಿಗಳು ನೀಗಿಸಬಲ್ಲರು.



ಕಂಪನಿಗಳು ಉದ್ಯೋಗಿಗಳಿಗೆ ನೀಡುವ ವಂತಿಕೆಗೆ ಅನುಗುಣವಾಗಿ ಸೂಕ್ತ ಉತ್ಪನ್ನವನ್ನು ಉದ್ಯೋಗಿಗಳು ನೀಡಿದರೆ, ಅವರ ಮೇಲೆ ಕಂಪನಿಗಳಿಗೆ ನಂಬಿಕೆ ನಿರ್ಮಾಣವಾಗುತ್ತದೆ. 2008 ಮತ್ತು 2014ರಲ್ಲಿ ಉಂಟಾದ ತೀವ್ರ ಆರ್ಥಿಕ ಹಿಂಜರಿತದ ಸಂದರ್ಭದಲ್ಲಿ ಕಂಪನಿಗಳು ವಿಶೇಷಚೇತನರನ್ನು ನೇಮಕ ಮಾಡಿಕೊಂಡವು. ಕಂಪನಿಗಳ ಈ ಕ್ರಮದಿಂದ ಉತ್ತಮವಾದನ್ನು ತಯಾರಿಸಿದರೆ ಅದಕ್ಕೆ ಯಾವಾಗಲೂ ಸೂಕ್ತ ಮಾರುಕಟ್ಟೆ ದೊರೆಯುತ್ತದೆ ಎಂಬುದು ಮತ್ತೊಮ್ಮೆ ಸಾಬೀತಾಯಿತು. ಕಳೆದ 5 ವರ್ಷದಲ್ಲಿ ಕಂಪನಿಗಳ ಬೆಳವಣಿಗೆ ವೇಗ ಹೆಚ್ಚಾಗಿದ್ದರಿಂದ ಅರ್ಹ ಉದ್ಯೋಗಿಗಳ ಪೂರೈಕೆಯಲ್ಲಿ ಅಂತರ ಉಂಟಾಯಿತು. ಈ ಅಂತರವನ್ನು ತುಂಬಲು ಕೆಲವು ಕಂಪನಿಗಳು ವಿಶೇಷಚೇತನ ವ್ಯಕ್ತಿಗಳ ಕಡೆ ನೋಡಲಾರಂಭಿಸಿದವು. ಈ ಬೆಳವಣಿಗೆಯಿಂದ 2ನೇ ಹಂತದ ನಗರಗಳು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ವಿಶೇಷಚೇತನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ಸರ್ಕಾರೇತರ (ಎನ್.ಜಿ.ಓ.) ಸಂಸ್ಥೆಗಳು, ಮುಖ್ಯವಾಹಿನಿಯಲ್ಲಿರುವ ತರಬೇತಿ ಸಂಸ್ಥೆಗಳು, ಸಾಮಾಜಿಕ ಉದ್ಯಮಗಳು ಈ ವರ್ಗದ ಜನರ ಕೌಶಲ್ಯ ಹಾಗೂ ಉದ್ಯೋಗಾರ್ಹತೆಯನ್ನು ಹೆಚ್ಚಿಸಲು ನಿರತವಾದವು.

ಕಂಪನಿಗಳಲ್ಲಿ ವಿಶೇಷಚೇತನ ವ್ಯಕ್ತಿಗಳಿಗೆ ಸಂಭಾವನೆ ನೀಡಿ, ಅವರನ್ನು ಎಲ್ಲಿ, ಹೇಗೆ ಸಮರ್ಪಕವಾಗಿ ಬಳಸಿಕೊಳ್ಳಬೇಕು ಎಂಬುದನ್ನು ಸುಪರ್‌ವೈಸರ್‌ಗಳು ಹಾಗೂ ಕೌಶಲ್ಯ ವಿಭಾಗದ ಮುಖ್ಯಸ್ಥರು ಕಂಡುಕೊಂಡಿದ್ದಾರೆ. ನಿರ್ದಿಷ್ಟವಾದ ಕ್ಷೇತ್ರ (ಡೊಮೇನ್) ಹಾಗೂ ಕೆಲಸದ ತರಬೇತಿಗಾಗಿ ಕಂಪನಿಗಳು ತರಬೇತಿ ಸಂಸ್ಥೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳುತ್ತವೆ. ಇದರಿಂದ ಅರ್ಹ ಅಭ್ಯರ್ಥಿಗಳನ್ನು ಸೃಷ್ಟಿ ಮಾಡಲು ಹಾಗೂ ಉತ್ತಮ ಉದ್ಯೋಗಾವಕಾಶ ಕಲ್ಪಿಸಲು ನೆರವಾಗುತ್ತಿದೆ. ಇದರಿಂದ ಕಂಪನಿಗಳಿಗೆ ಅವುಗಳ ಭವಿಷ್ಯದ ಬೇಡಿಕೆಗೆ ಅನುಗುಣವಾದ ಸೂಕ್ತ ಅಭ್ಯರ್ಥಿಗಳನ್ನು ಪಡೆದುಕೊಂಡಂತೆ ಆಗುವುದಲ್ಲದೆ, ಅಭ್ಯರ್ಥಿಗಳಿಗೆ ಸೂಕ್ತ ಉದ್ಯೋಗ ಸಹ ದೊರೆತಂತೆ ಆಗುತ್ತದೆ. ಇದನ್ನು ಕಂಪನಿ ಹಾಗೂ ಅಭ್ಯರ್ಥಿ ಇಬ್ಬರೂ ತಮ್ಮ ಗುರಿ ತಲುಪಿ ಗೆಲುವು ಪಡೆದ ಪರಿಸ್ಥಿತಿ ಎಂದು ಭಾವಿಸಲಾಗಿದೆ.



ಯಶಸ್ವಿ ಕೌಶಲ್ಯದ ಮಾದರಿಗಳು ಅನುಭವಾತ್ಮಕ ಕಲಿಕೆಯ ದೊಡ್ಡ ಘಟಕಗಳನ್ನು ಒಳಗೊಂಡಿವೆ. ಕೌಶಲ್ಯ ತರಬೇತಿಯಲ್ಲಿ ಇವರ ಮನೋಧೋರಣೆ ಹಾಗೂ ಜೀವನ ಕಲೆಯ ಅಭಿವೃದ್ಧಿಗೆ ಗಮನ ಹರಿಸಲಾಗುತ್ತದೆ. ಅಭ್ಯರ್ಥಿಗಳ ತರಬೇತಿಗೆ ವೆಚ್ಚ ಮಾಡುವ ಕಂಪನಿಗಳು ಅವರನ್ನು ಕಂಪನಿಯಲ್ಲಿಯೇ ಉಳಿಸಿಕೊಳ್ಳುವ ಬಗ್ಗೆ ಹೆಚ್ಚಿನ ಒತ್ತು ನೀಡಲಾಗುತ್ತವೆ. ಕೌಶಲ್ಯ ತರಬೇತಿಯಲ್ಲಿ ವಿಶೇಷಚೇತನರ ಪೋಷಕರ ಮನೋಅಭಿವೃದ್ಧಿಗೂ ಒತ್ತು ನೀಡುವುದರಿಂದ ದೀರ್ಘಕಾಲದ ಸುಸ್ಥಿರತೆ ಕಂಡು ಬಂದಿದೆ. ವೃತ್ತಿ ಹಾಗೂ ಜೀವನದ ಕಟು ವಾಸ್ತವಗಳನ್ನು ತಮ್ಮ ಮಕ್ಕಳು ಎದುರಿಸಬಲ್ಲರೆ ಎಂಬ ವಿಶ್ವಾಸ ಪೋಷಕರಿಗೂ ಇರುವುದಿಲ್ಲ. ಹಾಗಾಗಿ ಆರ್ಥಿಕ ಅಗತ್ಯಗಳು ಇದ್ದಾಗ್ಯೂ ಈ ಪೋಷಕರು ತಮ್ಮ ವಿಶೇಷಚೇತನ ಮಕ್ಕಳಿಂದ ದೂರ ಪ್ರಯಾಣ, ನಿರ್ದಿಷ್ಟ ಗುರಿ ಹಾಗೂ ಪಾಳಿಗಳಲ್ಲಿ ಕೆಲಸ ಮಾಡಿಸಲು ಹಿಂಜರಿಯುತ್ತಾರೆ. ಆದ್ದರಿಂದ ಪೋಷಕರ ಮನಃಸ್ಥಿತಿಯ ಬದಲಾವಣೆಗೂ ಒತ್ತು ನೀಡಲಾಗುತ್ತದೆ.

ತೀವ್ರತರವಾದ ಬೌದ್ಧಿಕ ವೈಕಲ್ಯತೆ ಹಾಗೂ ಐ.ಕ್ಯೂ. ಪ್ರಮಾಣ 65ಕ್ಕಿಂತ ಕಡಿಮೆ ಇರುವ ವ್ಯಕ್ತಿಗಳೊಂದಿಗೆ ತರಬೇತುದಾರರು ವ್ಯಕ್ತಿಗತವಾಗಿ ಮುಖಾಮುಖಿಯಾಗಿ ತರಬೇತಿ ನೀಡುವುದರಿಂದ ಯಶಸ್ಸು ಕಂಡು ಬಂದಿದೆ. ಸಾಂಪ್ರದಾಯಿಕ ಕೌಶಲ್ಯ ವರ್ಧನೆ ತರಬೇತಿಗಿಂತ ಈ ಮಾದರಿಯ ತರಬೇತಿ ಉತ್ತಮ ಪರ್ಯಾಯವಾಗಿದೆ. ಮಾನಸಿಕವಾಗಿ ಸಾಮಾಜಿಕವಾಗಿ ದುರ್ಬಲರಾದವರಿಗೆ ಉದ್ಯೋಗ ಹಾಗೂ ತರಬೇತಿ ನೀಡಲು ಮನಃಶಾಸ್ತ್ರಜ್ಞರು ಹಾಗೂ ಆಪ್ತ ಸಲಹೆಗಾರರು ಸಹ ದೊರೆಯುತ್ತಾರೆ.

ಬ್ಯಾಂಕಿಂಗ್, ಜವಳಿ, ಉಡುಪು, ಮಾಹಿತಿ ತಂತ್ರಜ್ಞಾನ, ಆಸ್ಪತ್ರೆ, ಚಿಲ್ಲರೆ

(ರಿಟೇಲ್) ಮಾರಾಟ ಮುಂತಾದ ಕ್ಷೇತ್ರಗಳಲ್ಲಿ ಕೌಶಲ್ಯ ಅಭಿವೃದ್ಧಿ ಚಟುವಟಿಕೆಗಳು ನಡೆಯುತ್ತಿವೆ. ಸೌಂದರ್ಯ ವರ್ಧನೆ, ಮೊಬೈಲ್ ರಿಪೇರಿ ಮುಂತಾದ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಕೌಶಲ್ಯ ತರಬೇತಿ ಯಶಸ್ವಿಯಾಗಿದೆ.

### ಭವಿಷ್ಯದ ಸನ್ನಿವೇಶ

ಮುಂದಿನ 7 ವರ್ಷಗಳಲ್ಲಿ ಸುಮಾರು 38 ಲಕ್ಷ ವಿಶೇಷಚೇತನರ ಕೌಶಲ್ಯ ಹೆಚ್ಚಿಸುವ ಗುರಿಯೊಂದಿಗೆ ಪ್ರಧಾನ ಮಂತ್ರಿಗಳು ರಾಷ್ಟ್ರೀಯ ಕೌಶಲ್ಯ ನೀತಿಯನ್ನು ಆರಂಭಿಸಿದ್ದಾರೆ. ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯದ ಅಡಿಯಲ್ಲಿ ಸೃಜಿಸಲಾಗಿರುವ ವಿಶೇಷಚೇತನರ ಸಬಲೀಕರಣ ಇಲಾಖೆಯು ವಿಶೇಷಚೇತನರಿಗಾಗಿ ರಾಷ್ಟ್ರೀಯ ಕ್ರಿಯಾ ಯೋಜನೆ ರಚಿಸಿ, ವಿಶೇಷಚೇತನರಿಗೆ ಸೂಕ್ತ ಪರಿಸರ ನಿರ್ಮಾಣವಾಗಲು ನೆರವಾಗಿದೆ. ಕೌಶಲ್ಯ ನೀತಿ ಅನುಷ್ಠಾನವನ್ನು ಮುಂದುವರಿಸಲು ವಿಶೇಷಚೇತನರ ಕೌಶಲ್ಯ ಪರಿಷತ್ ಸ್ಥಾಪಿಸಲಾಗಿದೆ. ಇದರಿಂದಾಗಿ ಭಾರತದಲ್ಲಿ ವಿಶೇಷಚೇತನರು ಆರ್ಥಿಕ ಚಟುವಟಿಕೆಯ ಒಂದು ಭಾಗವಾಗಿ ಯೋಜನೆಯ ಫಲ ನೀಡುವ ಸಮಯ ಸನ್ನಿಹಿತವಾಗಿದೆ. ವಿವಿಧ ರೀತಿಯ ಅಂಗವೈಕಲ್ಯತೆ ಹೊಂದಿರುವ ವ್ಯಕ್ತಿಗಳಿಗೆ ಸೂಕ್ತವಾದ ಯಶಸ್ವಿ ಮಾದರಿಗಳನ್ನು ನಾವು ಅಳವಡಿಸಿಕೊಳ್ಳಬೇಕಾಗಿದೆ. ವಿಶೇಷವಾಗಿ ತೀವ್ರತರವಾದ ದೈಹಿಕ ಹಾಗೂ ಮಾನಸಿಕ ವೈಕಲ್ಯತೆ ಇರುವವರಿಗೆ ಹೆಚ್ಚಿನ ಗಮನ ನೀಡಿ, ಭೌಗೋಳಿಕವಾಗಿ ಎಲ್ಲಾ ಪ್ರದೇಶದಲ್ಲಿ ಎಲ್ಲಾ ರೀತಿಯ ಉದ್ಯೋಗಗಳಿಗೂ ಸಮಾನವಾದ ಪ್ರಾಮುಖ್ಯತೆಯನ್ನು ನೀಡಬೇಕಾಗಿದೆ.





ಪ್ರಸ್ತುತ ಚಾಲ್ತಿಯಲ್ಲಿರುವ ಉತ್ಕೃಷ್ಟ ಮೂಲಸೌಕರ್ಯ ಹೊಂದಿರುವ ಸುಮಾರು 600 ಕ್ಕೂ ಹೆಚ್ಚು ಗ್ರಾಮೀಣ ಸ್ವಯಂ ಉದ್ಯೋಗ ಸಂಸ್ಥೆಗಳನ್ನು ಬಳಸಿಕೊಳ್ಳಬೇಕಾದ ಅಗತ್ಯವಿದೆ. ಈ ಸಂಸ್ಥೆಗಳನ್ನು ಸ್ವಯಂ ಉದ್ಯೋಗ ತರಬೇತಿಗೆ ಬಳಸಿಕೊಳ್ಳಬಹುದು. ವಿಶೇಷವಾದ ಪರಿವಿಡಿಗಳನ್ನು ರಚಿಸಿ, ವಿಭಿನ್ನವಾದ ಸ್ವಯಂ ಉದ್ಯೋಗ ಅವಕಾಶಗಳನ್ನು ಸೃಷ್ಟಿ ಮಾಡಬೇಕಾಗಿದೆ. ವಿಶೇಷಚೇತನರ ತರಬೇತಿಗೆ ವಿಶೇಷಚೇತನರಲ್ಲೇ ಅರ್ಹರಾದ ತರಬೇತುದಾರರು ಹುಟ್ಟಿಕೊಂಡರೆ, ಅವರು ಉತ್ತಮ ತರಬೇತುದಾರರು ಆಗುವುದಲ್ಲದೆ, ವಿಶೇಷಚೇತನರಿಗೆ ಆದರ್ಶ ವ್ಯಕ್ತಿಗಳಾಗಿಯೂ ನಿಲ್ಲುವರು.

ಕಳೆದ 10 ವರ್ಷಗಳಲ್ಲಿ ಸುಮಾರು 26 ಕ್ಷೇತ್ರಗಳಲ್ಲಿ 273ಕ್ಕೂ ಹೆಚ್ಚು ಉದ್ಯೋಗ ಅವಕಾಶಗಳು ತೆರೆದುಕೊಂಡಿವೆ. ವಿಶೇಷಚೇತನರು ಪರಿಣಾಮಕಾರಿ ಕೆಲಸ ಮಾಡಲು ಸೂಕ್ತವಾದ ಪರಿಸರ ಹಾಗೂ ಸುಲಭ ಮಾರ್ಗೋಪಾಯಗಳನ್ನು ಗುರುತಿಸಿದ್ದರಿಂದ ಈ ಪ್ರಮಾಣದ ಉದ್ಯೋಗ ಅವಕಾಶಗಳು ದೊರೆಯಲು ಸಾಧ್ಯವಾಗಿದೆ. ಗಂಭೀರವಾದ ಅಂಗವೈಕಲ್ಯತೆ ಹೊಂದಿರುವ ವಿವಿಧ ವರ್ಗದ ವಿಕಲಚೇತರಿಗೆ ಇನ್ನಷ್ಟು ಪರಿಹಾರಾತ್ಮಕ ಕ್ರಮಗಳನ್ನು ಹುಡುಕಿ ಇನ್ನೂ ಹೆಚ್ಚಿನ ಉದ್ಯೋಗಗಳನ್ನು ಸೃಷ್ಟಿಸಬೇಕಾದ ಅಗತ್ಯವಿದೆ. ಹೆಚ್ಚು ವಿಶೇಷಚೇತನರನ್ನು ನೇಮಿಸಿಕೊಳ್ಳಲು ಮುಂದೆ ಬರುವವರಿಗೆ ಹೆಚ್ಚಿನ ಉತ್ತೇಜನ ನೀಡಲು ವ್ಯವಸ್ಥಿತವಾದ ಪ್ರಯತ್ನವನ್ನು ಮಾಡಬೇಕು.

ಉದ್ಯೋಗ ವಿಶ್ಲೇಷಣಾ ಸೇವೆ, ಕರ್ತವ್ಯ ಸ್ಥಳದಲ್ಲಿ ಎದುರಾಗುವ ಸಮಸ್ಯೆ ನಿವಾರಣೆ, ಒಳಪಡಿಕೆ ಸೇವೆಗಳು, ಅರಿವು ಹಾಗೂ ಜಾಗೃತಿ, ನಾಯಕತ್ವ ಅಭಿವೃದ್ಧಿ ಮುಂತಾದ ಸೇವೆಗಳನ್ನು ಒದಗಿಸಲು, ಒಂದು ಪವಿತ್ರವಾದ ನೆರವು ನೀಡುವ ವ್ಯವಸ್ಥೆಯನ್ನು ನಿರ್ಮಿಸಬೇಕು. ಇಂತಹ ಕೌಶಲ್ಯ ಅಭಿವೃದ್ಧಿ ಕ್ರಮಗಳನ್ನು ಯಶಸ್ವಿಗೊಳಿಸುವುದು ತುಂಬಾ ಕಠಿಣವಾದುದು. ವಿಶೇಷಚೇತನರ ಜೀವನಕ್ರಮವವನ್ನು ಸುಧಾರಿಸುವ ನಿಟ್ಟಿನಲ್ಲಿ ಸಕ್ರಿಯವಾದ ಸಮುದಾಯಗಳನ್ನು ಒಗ್ಗೂಡಿಸಲು ಈ ವರ್ಷ ಆರಂಭಿಸಲಾದ ಅಕಾಡೆಮಿಯು ಸೂಕ್ತ ವೇದಿಕೆಯಾಗುವಂತೆ ಸಶಕ್ತಗೊಳಿಸಬೇಕಾಗಿದೆ. ಈ ವೇದಿಕೆಯಲ್ಲಿ ಎಲ್ಲಾ ಪಾಲುದಾರರು ಸಂಪನ್ಮೂಲಗಳನ್ನು ಬಳಸಿಕೊಳ್ಳಬಹುದು ಹಾಗೂ ತಮ್ಮಲ್ಲೇ ವಿನಿಮಯ ಮಾಡಿಕೊಳ್ಳಬಹುದು. ಇದರಿಂದ ಸಾಂಘಿಕ ಪ್ರಯತ್ನದ ಶಕ್ತಿ ಹೆಚ್ಚುವುದಲ್ಲದೆ, ಅತ್ಯಗತ್ಯವಾಗಿ ಬೇಕಾದ ಪವಿತ್ರವಾದ ನೆರವನ್ನು ಒದಗಿಸದಂತೆಯೂ ಆಗುತ್ತದೆ.



ಕರ್ನಾಟಕದ ಗ್ರಾಮೀಣ ಪ್ರದೇಶದಲ್ಲಿರುವ ವಿಶೇಷಚೇತರಿಗೆ ಒಂದು ಸೂಕ್ತ ಸಂಪರ್ಕಜಾಲವನ್ನು ಒದಗಿಸಲು 'ನಮ್ಮವಾಣಿ' ಎಂಬ ಪ್ರತಿಕ್ರಿಯಾತ್ಮಕ ಧ್ವನಿ ವ್ಯವಸ್ಥೆಯನ್ನು ಮಾಡಲಾಗಿದೆ. ವಿಶೇಷಚೇತರನು ಮಿಸ್ಡ್ ಕಾಲ್ ದೂರವಾಣಿ ಕರೆ ಮಾಡಿದರೆ ಸ್ಪಂದಿಸಲಾಗುತ್ತದೆ. ವಿಶೇಷಚೇತನರು ತಮ್ಮ ನೋವು ನಲಿವುಗಳನ್ನು, ಸಮಸ್ಯೆ ಸವಾಲುಗಳನ್ನು ಹಂಚಿಕೊಂಡು ಇಲ್ಲಿ ಪರಿಹಾರಗಳನ್ನು ಕಂಡುಕೊಳ್ಳಬಹುದು. ತಮ್ಮ ಸಮಸ್ಯೆಗಳನ್ನು ನಿವಾರಿಸಿಕೊಳ್ಳಬಹುದು. ಇದರಿಂದ ಭರವಸೆ ಮೂಡಿ, ದೈನಂದಿನ ಸವಾಲುಗಳನ್ನು ವಿಶ್ವಾಸದಿಂದ ಎದುರಿಸಿ, ಆರ್ಥಿಕವಾಗಿ ಸ್ವಾವಲಂಭನೆ ಸಾಧಿಸಲು ಸಾಧ್ಯವಾಗುತ್ತದೆ. ಈ ರೀತಿಯ ತಂತ್ರಜ್ಞಾನ ಆಧರಿತ ವೇದಿಕೆಗಳು ಅವರ ಜೀವನಕ್ರಮದಲ್ಲಿ ಬದಲಾವಣೆ ತಂದು, ಕೌಶಲ್ಯತೆ ಪಡೆದ ವಿಶೇಷಚೇತನರಿಗೆ ಉಜ್ವಲ ಭವಿಷ್ಯವನ್ನು ನೀಡುತ್ತವೆ.

'ಭಾರತದಲ್ಲಿ ಬದಲಾವಣೆ' ಉಂಟಾದಾಗ 'ಭಾರತದಲ್ಲೇ ತಯಾರಿಸು' ಪರಿಕಲ್ಪನೆಯು ಯಶಸ್ವಿಯಾಗಲು ಸಾಧ್ಯವಾಗುತ್ತದೆ. ಈ ಬದಲಾವಣೆಯ ಯಶಸ್ಸು ಸಮಾಜದ ಎಲ್ಲಾ ವರ್ಗಗಳನ್ನು ಒಳಗೊಳ್ಳುತ್ತದೆ. ಯಶಸ್ವಿಯಾಗಿ ದುಡಿಯುತ್ತಿರುವ ವಿಶೇಷಚೇತನರು ಇಂಥ ಬದಲಾವಣೆಯ ಮುಂದಾಳತ್ವ ವಹಿಸಿದ್ದಾರೆ. ❑

# ದಿವ್ಯಾಂಗರು ಮತ್ತು ಆರ್ಥಿಕ ಒಳಗೊಳ್ಳುವಿಕೆ

* ಪಿ.ಸಿ.ದಾಸ್



ದಿವ್ಯಾಂಗರ ಆರ್ಥಿಕ ಸಬಲತೆಯು ಹೆಚ್ಚಿಗೆ ಮಹತ್ವ ಪಡೆದಿದ್ದು ಸಮಾಜದ ಬೇರೆ ಯಾವುದೇ ವಂಚಿತ ವರ್ಗಕ್ಕಿಂತ ಹೆಚ್ಚಿನ ಸವಾಲುಗಳಿಂದ ಕೂಡಿದೆ, ಕಾರಣ ದಿವ್ಯಾಂಗರ ಚಲನವಲನದ ಹಾಗೂ ದೈಹಿಕ ಇತಿಮಿತಿಗಳು, ಆರ್ಥಿಕ ಸವಲತ್ತುಗಳ ಕುರಿತ ಕನಿಷ್ಠ ತಿಳುವಳಿಕೆ ಮತ್ತು ಹಂಚಿಹೋದ ಜನಸಂಖ್ಯೆ ಸ್ವಸಹಾಯ ಗುಂಪು ನಿರ್ಮಿಸಿಕೊಳ್ಳುವಲ್ಲಿನ ಸವಾಲುಗಳಾಗಿವೆ.

ಭಾರತದ ಸಂವಿಧಾನವು ಕೆಲಸ ಹಾಗೂ ಉದ್ಯೋಗದ ಮಹತ್ವದ ಕುರಿತು ಆರ್ಟಿಕಲ್ 39ರ ನಿಯಮಗಳಲ್ಲಿ ಉಲ್ಲೇಖಿಸುತ್ತಾ ಪ್ರಜೆ, ಪುರುಷ, ಮಹಿಳೆ ತನ್ನ ಜೀವನಾಧಾರಕ್ಕಾಗಿ ಉದ್ಯೋಗಾವಕಾಶ ಪಡೆಯುವಲ್ಲಿ ಸಮಾನ ಹಕ್ಕನ್ನು ಹೊಂದಿದ್ದಾರೆ ಎಂದು ಹೇಳುತ್ತದೆ. ಆರ್ಟಿಕಲ್ 41ರ ಪ್ರಕಾರ ಪ್ರತಿ ರಾಜ್ಯ ತನ್ನ ಆರ್ಥಿಕ ಶಕ್ತಿ ಹಾಗೂ ಪ್ರಗತಿ ಮಿತಿಯಲ್ಲಿ ಉದ್ಯೋಗದ ಹಕ್ಕಿಗೆ ಅನುವು ಮಾಡಿಕೊಡ ಬೇಕು ಮತ್ತು ಆರ್ಟಿಕಲ್ 42ರ ಪ್ರಕಾರ ರಾಜ್ಯವು ಉದ್ಯೋಗದಲ್ಲಿ ಸಹನೀಯ ವಾತಾವರಣ ಮಾಡಿ ಕೊಡಬೇಕು ಎಂದು ಹೇಳುತ್ತದೆ. ನಾವು ಇಲ್ಲಿ ಮಾತನಾಡ ಹೊರಟಿರುವುದು ದಿವ್ಯಾಂಗ ವ್ಯಕ್ತಿಗಳ ಕುರಿತು. ದಿವ್ಯಾಂಗ ವ್ಯಕ್ತಿ ಎಂದರೆ ವೈದ್ಯಕೀಯ ನಿಯಮಗಳಿಗನುಗುಣವಾಗಿ 40% ಹಾಗೂ ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಯಾವುದೇ ರೀತಿಯ ಊನ ಅನುಭವಿಸುತ್ತಿರುವ ವ್ಯಕ್ತಿ. ಭಾರತ ಸರ್ಕಾರ ದಿವ್ಯಾಂಗ ವ್ಯಕ್ತಿಗಳಿಗೆ ಸಾಮಾಜಿಕ ಹಾಗೂ ರಾಜಕೀಯ ದೃಷ್ಟಿಯಿಂದ ಸಮಾನ ಅವಕಾಶ ಒದಗಿಸುವ ನಿಟ್ಟಿನಲ್ಲಿ 3 ಶಾಸನಗಳನ್ನು ಹೊರಡಿಸಿದೆ ಅವುಗಳೆಂದರೆ 1. ಭಾರತೀಯ ಪುನರ್ವಸತಿ ಕೌನ್ಸಿಲ್ ಆ್ಯಕ್ಟ್ 1992 2. ಅಂಗವಿಕಲ ವ್ಯಕ್ತಿಗಳ ಆ್ಯಕ್ಟ್ 1995 3. ಆಟಿಸಮ್, ಸೆರೆಬ್ರಲ್ ಪಾಲಸಿ, ಬುದ್ಧಿ ಮಾಂದ್ಯತೆ ಹಾಗೂ ಬಹು ಅಂಗವೈಕಲ್ಯದ ರಾಷ್ಟ್ರೀಯ ಕಲ್ಯಾಣ ಇಲಾಖೆ ಆ್ಯಕ್ಟ್ 1995.

ಇವುಗಳೊಂದಿಗೆ ಭಾರತವು 2008ರಲ್ಲಿ ಅನುಮೋದಿಸಿ ಸಮಾಜದಲ್ಲಿ ಪೂರ್ಣ ಪ್ರಮಾಣದಲ್ಲಿ ಸಮಾನ ಅವಕಾಶದೊಂದಿಗೆ ಭಾಗವಹಿಸುವಿಕೆಗೆ ಮಹತ್ವ ನೀಡಿದ ಯುಎನ್ ಕನವೆನಶನ್ ಆನ್ ರೈಟ್ಸ್ ಆಫ್ ಪರಸನ್ಸ್ ವಿತ್ ಡಿಸೆಬಿಲಿಟಿ 2006 (UNCRPD) ಕೂಡ ಒಂದು. ಇದೇ ರೀತಿ 2006ರ ರಾಷ್ಟ್ರೀಯ ವಿಕಲಚೇತನರ ನೀತಿ, ದಿವ್ಯಾಂಗರನ್ನು ಉಪಯುಕ್ತ ಮಾನವ ಸಂಪನ್ಮೂಲ ಎಂದು ಗುರುತಿಸುತ್ತದೆ ಹಾಗೂ ಸಮಾಜದಲ್ಲಿ ಅವರ ಉತ್ತಮ ಸ್ಥಾನಮಾನಕ್ಕಾಗಿ ಸಮಾನ ಅವಕಾಶಗಳನ್ನು ಸೃಷ್ಟಿಸುವತ್ತ ಗಮನ ಹರಿಸುತ್ತದೆ. ಎಲ್ಲರನ್ನು ಒಳಗೊಂಡ ಒಂದು ಸಮಾಜವನ್ನು ಇದು ಆದೇಶಿಸುತ್ತದೆ.

2011ರ ಜನಗಣತಿಯ ಪ್ರಕಾರ, 26.8 ಮಿಲಿಯನ್ ದಿವ್ಯಾಂಗ ವ್ಯಕ್ತಿಗಳು ಭಾರತದಲ್ಲಿದ್ದಾರೆ. ಇವರಲ್ಲಿ 14.99 ಮಿಲಿಯನ್ ಪುರುಷರು ಹಾಗೂ 11.2 ಮಿಲಿಯನ್ ಮಹಿಳೆಯರು. ಇವರಲ್ಲಿ 18.63 ಮಿಲಿಯನ್ ದಿವ್ಯಾಂಗರು ಗ್ರಾಮಾಂತರ ಪ್ರದೇಶದಲ್ಲಿ ಹಾಗೂ 8.18 ಮಿಲಿಯನ್ ನಗರ ಪ್ರದೇಶದಲ್ಲಿ ವಾಸಿಸುತ್ತಾರೆ. ಲಭ್ಯವಿರುವ ದತ್ತಾಂಶಗಳ ಪ್ರಕಾರ, ಸುಮಾರು 13.4 ಮಿಲಿಯನ್ (ಗ್ರಾಮಾಂತರ ಪ್ರದೇಶದ 8.8 ಹಾಗೂ ನಗರ ಪ್ರದೇಶದ 4.6 ಮಿಲಿಯನ್) ದಿವ್ಯಾಂಗರು ಉದ್ಯೋಗಾರ್ಹ ವಯಸ್ಸಿನವರಾಗಿದ್ದಾರೆ. 13.4 ಮಿಲಿಯನ್ ಉದ್ಯೋಗಾರ್ಹ ವಯಸ್ಸಿನ ದಿವ್ಯಾಂಗರಲ್ಲಿ 7.8 ಮಿಲಿಯನ್ ಪುರುಷರು ಹಾಗೂ 5.6 ಮಿಲಿಯನ್ ಮಹಿಳೆಯರಾಗಿದ್ದಾರೆ. ದಿವ್ಯಾಂಗರ ಒಟ್ಟು ಜನಸಂಖ್ಯೆಯಲ್ಲಿ 14.6 ಮಿಲಿಯನ್ ಜನ ಅಕ್ಷರಸ್ಥರಾಗಿದ್ದಾರೆ. ಈ ಅಂಕಿಸಂಖ್ಯೆಗಳು ದಿವ್ಯಾಂಗರು ಸಶಕ್ತ ಮಾನವ ಸಂಪನ್ಮೂಲದ ಹಾಗೂ ದೇಶದ ಆರ್ಥಿಕ ಪರಿಸ್ಥಿತಿ ಬೆಳವಣಿಗೆಯಲ್ಲಿ ಇವರ ಮಹತ್ವದ ಪಾಲನ್ನು ನಾವು ನಿರ್ಲಕ್ಷಿಸುವಂತಿಲ್ಲ ಎಂಬುದನ್ನು ತೋರಿಸುತ್ತದೆ. ಆರ್ಥಿಕ ವ್ಯವಸ್ಥೆಯ ವಿವಿಧ ಸೇವೆಗಳು ಹಾಗೂ

* ವ್ಯವಸ್ಥಾಪಕ ನಿರ್ದೇಶಕರು, ರಾಷ್ಟ್ರೀಯ ವಿಶೇಷ ಚೇತನರ ಆರ್ಥಿಕ ಮತ್ತು ಅಭಿವೃದ್ಧಿ ನಿಗಮ. Email : das.pcd.pareshchandra@gmail.com

ಉತ್ಪನ್ನಗಳು ಕೈಗೆಟಕುವ ದರಗಳಲ್ಲಿ ಸಮಾಜದ ವಂಚಿತ ವರ್ಗಕ್ಕೆ ಕಲ್ಪಿಸುವುದೇ ಆರ್ಥಿಕ ಸಬಲತೆಯಾಗಿದೆ. ಇದರಲ್ಲಿ ಬ್ಯಾಂಕ್‌ನ ಸೇವೆಗಳು ಹಾಗೂ ಆರ್ಥಿಕ ಸೇವೆಗಳಾದ ವಿಮಾ, ಪಿಂಚಣಿ ಹಾಗೂ ವಿವಿಧ ಉದ್ದೇಶಗಳಿಗಾಗಿ ಸಾಲ ನೀಡುವುದು ಪ್ರಮುಖವಾಗಿವೆ. ಆರ್ಥಿಕ ಸಬಲತೆಯು ಎಲ್ಲರೂ ಮಿಳಿತವಾದ ಸಮಾಜ ರೂಪಿಸುವ ಯೋಜನೆಯಲ್ಲಿ ವಂಚಿತ ವರ್ಗದವರಿಗೆ ಆರ್ಥಿಕ ಸಬಲತೆಮೂಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಭಾರತದ ಸರ್ಕಾರಕ್ಕೆ ಆರ್ಥಿಕ ಸಬಲತೆಯ ಅರಿವಾಗಿದೆ ಹಾಗೂ ಸಮಾಜದ ಎಲ್ಲ ವರ್ಗದ ಜನರಿಗೆ ಆರ್ಥಿಕ ಸಬಲತೆ ಒದಗಿಸುವದಕ್ಕೆ ಪ್ರಾಮುಖ್ಯತೆ ನೀಡುತ್ತಿದೆ. ಜನ ಧನ ಯೋಜನೆ, ಬಡವರಿಗೆ ಆರೋಗ್ಯ ವಿಮೆ, ಮುದ್ರಾ ಸಾಲಗಳು ಪ್ರಮುಖ ರಾಷ್ಟ್ರೀಯ ಯೋಜನೆಗಳಾಗಿವೆ. ಆರ್ಥಿಕ ಸಬಲತೆ ಒದಗಿಸುವ ಕಾರ್ಯಕ್ರಮಗಳು ಸರ್ಕಾರದ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೂ ಸಹಾಯ ಮಾಡುತ್ತವೆ. ಆರ್ಥಿಕ ಸಬಲತೆಯ ಕಡಿಮೆ ದರದಲ್ಲಿ ಪಾವತಿ ಪ್ರಕ್ರಿಯೆಯು ಹೆಚ್ಚು ಸರಳವಾಗಲು ಅನುಕೂಲ ಮಾಡಿಕೊಡುತ್ತದೆ, ಪ್ರಕ್ರಿಯೆ ಹೆಚ್ಚು ಪಾರದರ್ಶಕವಾಗುತ್ತದೆ ಹಾಗೂ ನಕಲಿ ಫಲಾನುಭವಿಗಳ ಹಾವಳಿ ತಪ್ಪಿಸುತ್ತದೆ.

## ದಿವ್ಯಾಂಗರು–ಆರ್ಥಿಕ ಸಬಲತೆಯಿಂದ ವಂಚಿತರು

ದಿವ್ಯಾಂಗರನ್ನು ಸಮಾಜದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಬಡವರಲ್ಲಿಯೇ ಬಡವರು ಎಂದು ನಾವು ಪರಿಗಣಿಸಬಹುದು. ಆರ್ಥಿಕ ದುರ್ಬಲತೆ ಹಾಗೂ ಅಂಗವೈಕಲ್ಯತೆಗೆ ಒಂದಕ್ಕೊಂದು ಸಂಬಂಧವಿದ್ದು, ದಿವ್ಯಾಂಗರಿರುವಲ್ಲಿಯೇ ಬಡತನ ಕಂಡು ಬರುವುದು ಸಹಜವಾಗಿದೆ. ಹಾಗೆಯೇ, ಸಮಾಜದ ಬಡ ವರ್ಗವು ವೈಕಲ್ಯಕ್ಕೆ ಒಳಗಾಗುತ್ತದೆ. ವಿಕಲತೆ ಹೊಂದಿದ ಮಹಿಳೆಯರಲ್ಲಿ ಈ ಪರಿಸ್ಥಿತಿ ಇನ್ನೂ ಕೆಟ್ಟದಾಗಿರುತ್ತದೆ. ದಿವ್ಯಾಂಗರ ಆರ್ಥಿಕ ಸಬಲತೆಯು ಹೆಚ್ಚಿಗೆ ಮಹತ್ವ ಪಡೆದಿದ್ದು ಸಮಾಜದ ಬೇರೆ ಯಾವುದೇ ವಂಚಿತ ವರ್ಗಕ್ಕಿಂತ ಹೆಚ್ಚಿನ ಸವಾಲುಗಳಿಂದ ಕೂಡಿದೆ, ಕಾರಣ ದಿವ್ಯಾಂಗರ ಚಲನವಲನದ ಹಾಗೂ ದೈಹಿಕ ಇತಿಮಿತಿಗಳು, ಆರ್ಥಿಕ ಸವಲತ್ತುಗಳ ಕುರಿತ ಕನಿಷ್ಠ ತಿಳಿವಳಿಕೆ ಮತ್ತು ಹಂಚಿಹೋದ ಜನಸಂಖ್ಯೆ



ಸ್ವಸಹಾಯ ಗುಂಪು ನಿರ್ಮಿಸಿಕೊಳ್ಳುವಲ್ಲಿನ ಸವಾಲುಗಳಾಗಿವೆ. ದಿವ್ಯಾಂಗರಿಗೆ ಇರುವ ತೊಂದರೆಗಳನ್ನು ಪರಿಗಣಿಸಿ ಅವರಿಗೆ ಆರ್ಥಿಕ ಸಬಲತೆ/ ಸ್ವ ಉದ್ಯೋಗ ಅಥವಾ ಶಿಕ್ಷಣಕ್ಕಾಗಿ ಸಾಲ ಒದಗಿಸಲು ಸರ್ಕಾರವು ರಾಷ್ಟ್ರೀಯ ಅಂಗವಿಕಲರಿಗೆ ಆರ್ಥಿಕ ಸಹಾಯ ಹಾಗೂ ಅಭಿವೃದ್ಧಿ ನಿಗಮವನ್ನು (ಎನ್‌ಹೆಚ್‌ಎಫ್‌ಡಿಸಿ) 24 ಜನವರಿ, 1997ರಲ್ಲಿ 400ಕೋಟಿ ರೂಪಾಯಿ ಬಂಡವಾಳದೊಂದಿಗೆ ಸ್ಥಾಪಿಸಿದೆ. ಕಂಪನಿಸ್ ಆಕ್ಟ್ 195ನ 25ನೇ ಸೆಕ್ಷನ್ ಅಡಿ ಲಾಭಾಪೇಕ್ಷೆಯಿಲ್ಲದ ಕಂಪನಿ ಎಂದು ನೊಂದಾಯಿಸಲಾಗಿದೆ (ಕಂಪನಿಸ್ ಆ್ಯಕ್ಟ್ 2013ರ ಸೆಕ್ಷನ್ 8ರ ಅಡಿಯಲ್ಲಿ).

ಎನ್‌ಹೆಚ್‌ಎಫ್‌ಡಿಸಿ ರಿಯಾಯಿತಿ ದರದಲ್ಲಿ 40% ಅಥವಾ ಅದಕ್ಕಿಂತ ಹೆಚ್ಚು ಭಾಗ ಅಂಗವಿಕಲತೆ ಹೊಂದಿದ ಭಾರತೀಯ ಪ್ರಜೆಗಳಿಗೆ ಹಾಗೂ 18ಕ್ಕಿಂತ ಹೆಚ್ಚಿನ ವಯಸ್ಸಿನವರಿಗೆ ಸಾಲ ನೀಡುತ್ತದೆ. ಸಾಲ ನೀಡಲು ದಿವ್ಯಾಂಗರಿಗೆ ಗರಿಷ್ಠ ವಯಸ್ಸಿನ ಮಿತಿಯನ್ನು ನಿಗದಿ ಮಾಡಿಲ್ಲ. ಮುಖ್ಯವಾಗಿ ಈ ಸಾಲ ಯೋಜನೆಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದು, 1) ರಿಯಾಯಿತಿ ದರದಲ್ಲಿ ಕ್ರೆಡಿಟ್ ಆಧರಿತ ಸಾಲವನ್ನು ದಿವ್ಯಾಂಗರಿಗೆ ನೀಡುವುದು 2) ಕ್ರೆಡಿಟ್‌ರಹಿತ ಕಾರ್ಯಕ್ರಮಗಳು ಇಲ್ಲಿ ದಿವ್ಯಾಂಗರಿಗೆ ಅನುದಾನವನ್ನು ನೀಡಲಾಗುತ್ತದೆ.

### 1) ಕ್ರೆಡಿಟ್ ಆಧರಿತ

**ಅ) ಸ್ವ ಉದ್ಯೋಗಕ್ಕಾಗಿ ಸಾಲ :** ಈ ಕಾರ್ಯಕ್ರಮದಲ್ಲಿ ರಿಯಾಯಿತಿ ದರದಲ್ಲಿ 25 ಲಕ್ಷದವರೆಗೆ ಸಾಲವನ್ನು ದಿವ್ಯಾಂಗರಿಗೆ ಸ್ವ ಉದ್ಯೋಗಕ್ಕಾಗಿ ಬಂಡವಾಳವೆಂದು 5%–8% ಬಡ್ಡಿವರೆಗೆ ಸಾಲದ ಮೊತ್ತ ಆಧರಿಸಿ ನೀಡಲಾಗುತ್ತದೆ. ಇಲ್ಲಿ ಸಾಲವನ್ನು ಗರಿಷ್ಠ 10 ವರ್ಷ ಅವಧಿಯಲ್ಲಿ ಮರುಪಾವತಿಸ ಬೇಕು.

**ಆ) ಶಿಕ್ಷಣ ಸಾಲ :** ಅತಿ ಹೆಚ್ಚು ರಿಯಾಯಿತಿ ದರದಲ್ಲಿ ಅಂದರೆ ಕೇವಲ 4% ಬಡ್ಡಿ ದರದಲ್ಲಿ ಈ ಕಾರ್ಯಕ್ರಮದ ಅಡಿಯಲ್ಲಿ ಆಸಕ್ತ ದಿವ್ಯಾಂಗ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣಕ್ಕಾಗಿ ಸಾಲವನ್ನು ನೀಡಲಾಗುತ್ತದೆ. ಭಾರತದಲ್ಲಿಯೇ ಕಲಿಯಲು ರೂ. 10 ಲಕ್ಷದವರೆಗೆ ಸಾಲ ಹಾಗೂ ವಿದೇಶದಲ್ಲಿ ಕಲಿಯಲು ರೂ. 20 ಲಕ್ಷದವರೆಗೆ ಸಾಲವನ್ನು ನೀಡಲಾಗುತ್ತದೆ. ಸಾಲವನ್ನು ಗರಿಷ್ಠ 7 ವರ್ಷ ಅವಧಿಯಲ್ಲಿ ಮರುಪಾವತಿಸ ಬಹುದು. ಸಾಲದ ಮರು ಪಾವತಿಯು ಶಿಕ್ಷಣ ಮುಕ್ತಾಯಗೊಂಡ 1 ವರ್ಷದ ನಂತರ ಅಥವಾ ಉದ್ಯೋಗ ದೊರೆತ 6 ತಿಂಗಳ ನಂತರ, ಇವುಗಳಲ್ಲಿ ಯಾವುದು ಮೊದಲಾಗುತ್ತದೊ ಅದರ ಪ್ರಕಾರ ಪ್ರಾರಂಭವಾಗುತ್ತದೆ.

**ಇ) ಕಿರು ಹಣಕಾಸು :** ಈ ಕಾರ್ಯಕ್ರಮದ ಉದ್ದೇಶವು ದಿವ್ಯಾಂಗರ ದುರ್ಬಲ ಭಾಗಕ್ಕೆ ಆದಾಯ ಉತ್ಪನ್ನ ಕಾರ್ಯಕ್ರಮಗಳಿಗಾಗಿ ಸಾಲ ನೀಡುವುದಾಗಿದೆ. ಈ ಯೋಜನೆಗಳು ಸರ್ಕಾರೇತರ ಸಂಸ್ಥೆಗಳ ಮೂಲಕ ಜಾರಿಗೊಳಿಸಲ್ಪಡುತ್ತವೆ. ದಿವ್ಯಾಂಗರ ರೂಪಾಯಿ 50000ದವರೆಗೆ ವೈಯಕ್ತಿಕ ಸಾಲ ಹಾಗೂ ಸರ್ಕಾರೇತರ ಸಂಸ್ಥೆಗಳು ದಿವ್ಯಾಂಗ ವ್ಯಕ್ತಿಗಳಿಗೆ ನೀಡಲು ರೂಪಾಯಿ 10 ಲಕ್ಷದ ವರೆಗೆ ಸಾಲ ಪಡೆಯಬಹುದಾಗಿದೆ. ಒಂದು ಸರ್ಕಾರೇತರ ಸಂಸ್ಥೆಯು ಗರಿಷ್ಠ 20 ದಿವ್ಯಾಂಗರಿಗೆ ಸಹಾಯ ನೀಡಬಹುದಾಗಿದೆ. 5% ವರೆಗೆ ಬಡ್ಡಿದರದ ನಿಗದಿಪಡಿಸಲಾಗುತ್ತದೆ. ಗರಿಷ್ಠ 3 ವರ್ಷದೊಳಗಾಗಿ ಸಾಲವನ್ನು ಮರುಪಾವತಿಸ ಬಹುದಾಗಿದೆ.

### 2) ಕ್ರೆಡಿಟ್ ಆಧಾರ ರಹಿತ

**ಅ) ದಿವ್ಯಾಂಗರಿಗಾಗಿ ಕೌಶಲ್ಯ ತರಬೇತಿ :** ಈ ಕಾರ್ಯಕ್ರಮದಡಿಯಲ್ಲಿ ಎನ್‌ಹೆಚ್‌ಎಫ್‌ಡಿಸಿ ದಿವ್ಯಾಂಗರ ಕೌಶಲ್ಯ ಅಭಿವೃದ್ಧಿಗೆ ಅನುದಾನವನ್ನು ನೀಡುತ್ತದೆ. ಇದರೊಂದಿಗೆ, ಪ್ರತಿ ತಿಂಗಳು 2000 ರೂಪಾಯಿ ವೇತನವನ್ನು ದಿವ್ಯಾಂಗ ಅಭ್ಯರ್ಥಿಗಳಿಗೆ ತರಬೇತಿ ಅವಧಿಯಲ್ಲಿ ನೀಡಲಾಗುತ್ತದೆ.

**ಆ) ವಿದ್ಯಾರ್ಥಿವೇತನ ಯೋಜನೆಗಳು:** ಮಂತ್ರಾಲಯವು ಎನ್‌ಹೆಚ್‌ಎಫ್‌ಡಿಸಿ ಗೆ ದಿವ್ಯಾಂಗ ವಿದ್ಯಾರ್ಥಿಗಳಿಗೆ ಕೊಡಮಾಡುವ ವಿದ್ಯಾರ್ಥಿ ವೇತನದ ಉಸ್ತುವಾರಿಯನ್ನು ನೋಡಿಕೊಳ್ಳಲು ಹೇಳಿದೆ. ಪ್ರಸಕ್ತ ಎನ್‌ಹೆಚ್‌ಎಫ್‌ಡಿಸಿ2500 ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣವನ್ನು ಪಡೆಯುತ್ತಿರುವ

ದಿವ್ಯಾಂಗ ವಿದ್ಯಾರ್ಥಿಗಳ ಉಸ್ತುವಾರಿ ನೋಡಿಕೊಳ್ಳುತ್ತಿದೆ.

ಎನ್‌ಹೆಚ್‌ಎಫ್‌ಡಿಸಿ 36 ರಾಜ್ಯ ಸರ್ಕಾರಗಳಿಂದ ನಾಮ ನಿರ್ದೇಶಿತಗೊಂಡ ರಾಜ್ಯ ಸಂಸ್ಥೆಗಳು ಈ ಕಾರ್ಯ ನಿರ್ವಹಿಸುತ್ತಿವೆ. ಎನ್‌ಹೆಚ್‌ಎಫ್‌ಡಿಸಿ 05 ಸಾರ್ವಜನಿಕ ಬ್ಯಾಂಕ್‌ಗಳು ಹಾಗೂ 18 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ ಮೂಲಕ ರಿಯಾಯಿತಿ ದರದಲ್ಲಿ ದಿವ್ಯಾಂಗರಿಗೆ ಸಾಲ ನೀಡುತ್ತಿದೆ. ಕಳೆದ ನಾಲ್ಕು ವರ್ಷಗಳಿಂದ ನಿಗಮವು ಉತ್ತಮ ಕಾರ್ಯದಕ್ಷತೆಯನ್ನು ತೋರಿಸುತ್ತಿದೆ.

**1) ಸಾಲ ವಿತರಣೆ :** ಎನ್‌ಹೆಚ್‌ಎಫ್‌ಡಿಸಿ ಪ್ರಾರಂಭದಿಂದ ಇಲ್ಲಿಯ ವರೆಗೆ ಅಂದಾಜು 694.29 ಕೋಟಿ ಹಣವನ್ನು 1.26 ಲಕ್ಷ ದಿವ್ಯಾಂಗರಿಗಾಗಿ ಬಿಡುಗಡೆ ಮಾಡಿದೆ.

**2) ಕೌಶಲ್ಯ ತರಬೇತಿ :** ನಿಗಮವು ಇಲ್ಲಿಯವರೆಗೆ 46.21 ಕೋಟಿ ಹಣವನ್ನು 36616 ದಿವ್ಯಾಂಗರಿಗೆ ಕೌಶಲ್ಯ ತರಬೇತಿಗಾಗಿ ಬಿಡುಗಡೆ ಮಾಡಿದೆ.

**3) ವಿದ್ಯಾರ್ಥಿ ವೇತನ :** ಟ್ರಸ್ಟ್ ಫಂಡ್ ಯೋಜನೆ ಅಡಿಯಲ್ಲಿ ಎನ್‌ಹೆಚ್‌ಎಫ್‌ಡಿಸಿ 47.94 ಕೋಟಿ ಹಣವನ್ನು ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣ ಪಡೆಯುತ್ತಿರುವ ವಿದ್ಯಾರ್ಥಿಗಳಿಗಾಗಿ ಬಿಡುಗಡೆ ಮಾಡಿದೆ (2011–12 ರಿಂದ ಪ್ರಾರಂಭಿಸಿ), ಇದರಲ್ಲಿ 7117 ಹೊಸ ವಿದ್ಯಾರ್ಥಿಗಳಾದರೆ 1097 ಹಳಬರಿದ್ದಾರೆ.

ನ್ಯಾಶನಲ್ ಫಂಡ್ ಯೋಜನೆ ಅಡಿಯಲ್ಲಿ, ಎನ್‌ಹೆಚ್‌ಎಫ್‌ಡಿಸಿ 3.51 ಕೋಟಿ ಹಣವನ್ನು (2009–10ರಿಂದ ಪ್ರಾರಂಭಿಸಿ) ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣ ಪಡೆಯುತ್ತಿರುವವರಿಗೆ ನೀಡಿದೆ. ಇದರಲ್ಲಿ 2827 ಹೊಸಬರು ಹಾಗೂ 101 ಹಳಬರಿದ್ದಾರೆ. ಎನ್‌ಹೆಚ್‌ಎಫ್‌ಡಿಸಿ ರಿಯಾಯಿತಿ ದರದಲ್ಲಿ ಸಾಲ ನೀಡುವುದನ್ನು ಇನ್ನು ಹೆಚ್ಚು ವೇಗವಾಗಿ ಜಾರಿಗೊಳಿಸಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ನಿಗಮವು ಈ ಮುಂದಿನ ಪ್ರಮುಖ ನಿರ್ಧಾರವನ್ನು ದಿವ್ಯಾಂಗರಿಗೆ ಆರ್ಥಿಕ ಸಬಲತೆ ನೀಡುವಲ್ಲಿ ಕೈಗೊಂಡಿದೆ.

**1) ಹಿನ್ನೆಲೆ ಅನುದಾನ ಯೋಜನೆ:** ನಿಗಮವು ದಿವ್ಯಾಂಗರ ಕಲ್ಯಾಣ ಇಲಾಖೆಯೊಂದಿಗೆ ಸೇರಿ ಎನ್‌ಹೆಚ್‌ಎಫ್‌ಡಿಸಿ ಹಿನ್ನೆಲೆ ಅನುದಾನ ನೀಡಲು ಯೋಜಿಸಿದೆ. ಭಾರತ ಸರ್ಕಾರದಿಂದ ಸಮ್ಮತಿ ಪಡೆದಲ್ಲಿ ದಿವ್ಯಾಂಗರು 35% ವರೆಗೆ ಅನುದಾನವನ್ನು ಪಡೆಯ ಬಹುದಾಗಿದೆ.

**2) ಬ್ಯಾಂಕ್‌ಗಳೊಂದಿಗೆ ಸಹಯೋಗ:** ಎನ್‌ಹೆಚ್‌ಎಫ್‌ಡಿಸಿ ವಿವಿಧ ಬ್ಯಾಂಕ್‌ಗಳ ಸಹಯೋಗ ಪಡೆಯುವುದರೊಂದಿಗೆ ರಿಯಾಯಿತಿ ದರದಲ್ಲಿ ನೀಡಲಾಗುವ ಸಾಲದ ಲಾಭವನ್ನು ಹೆಚ್ಚಿನ ದಿವ್ಯಾಂಗರಿಗೆ ತಲುಪಿಸಲು ಪ್ರಯತ್ನ ಪಡುತ್ತಿದೆ. ಎನ್‌ಹೆಚ್‌ಎಫ್‌ಡಿಸಿ ಈಗಾಗಲೆ 05 ಸಾರ್ವಜನಿಕ ಇಲಾಖೆಯ ಬ್ಯಾಂಕ್‌ಗಳೊಂದಿಗೆ ಒಪ್ಪಂದ ಮಾಡಿಕೊಂಡಿದೆ (ಪಂಜಾಬ ನ್ಯಾಶನಲ್ ಬ್ಯಾಂಕ್, ಆಂಧ್ರಾ ಬ್ಯಾಂಕ್, ಐಡಿಬಿಐ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ). ಇವುಗಳನ್ನು ಹೊರತು ಪಡಿಸಿ, ಎನ್‌ಹೆಚ್‌ಎಫ್‌ಡಿಸಿ 18 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳೊಂದಿಗೆ ಒಪ್ಪಂದ ಮಾಡಿಕೊಂಡಿವೆ. (ಉತ್ತರ ಪ್ರದೇಶ, ಮಧ್ಯ ಪ್ರದೇಶ, ಉತ್ತರಾಖಂಡ, ಗುಜರಾತ, ಹರಿಯಾಣಾ, ಮಹಾರಾಷ್ಟ್ರ ಹಾಗೂ ಅಸ್ಸಾಂ)

**3) ಎನ್‌ಬಿಎಫ್‌ಸಿ – ಎಂಎಫ್‌ಐ ಜೊತೆಗೆ ಸಹಯೋಗ :** ಎನ್‌ಬಿಎಫ್‌ಸಿ–ಎಂಎಫ್‌ಐ ಅತ್ಯಂತ ದೂರದ ಪ್ರದೇಶ ದಲ್ಲಿರುವ ಹಾಗೂ ಸೇವೆಯಿಂದ ವಂಚಿತವಾದ ಪ್ರದೇಶಗಳಿಗೆ ಸಂಪರ್ಕ ಒದಗಿಸಲು ಸಹಕಾರಿಯಾಗಿದೆ. ಎನ್‌ಬಿಎಫ್‌ಸಿ ವಿವಿಧ ಎನ್‌ಬಿಎಫ್‌ಸಿ – ಎಂಎಫ್‌ಐಗಳೊಂದಿಗೆ ಸಹಯೋಗ ಪಡೆದುಕೊಳ್ಳಲು ಸಹಕಾರಿಯಾಗುವಂತೆ ಆರ್.ಬಿ.ಐಗೆ ನಿಯಮಗಳನ್ನು ಸಡಿಲಗೊಳಿಸುವಂತೆ ವ್ಯವಸ್ಥೆ ಮಾಡಿಕೊಂಡಿದೆ, ಇದರಿಂದ ದಿವ್ಯಾಂಗರಿಗೆ ರಿಯಾಯಿತಿ ದರದ ಸಾಲವನ್ನು ಹೆಚ್ಚು ಸರಾಗವಾಗಿ ಒದಗಿಸಬಹುದಾಗಿದೆ.

4) ಎನ್‌ಬಿಎಫ್‌ಸಿ ದಿವ್ಯಾಂಗರ ಕಲ್ಯಾಣ ಇಲಾಖೆ, ಕೇಂದ್ರ ಸರ್ಕಾರ, ಭಾರತದ ಜೊತೆಗೆ ಸೇರಿ ದಿವ್ಯಾಂಗರಿಗೆ ಹೆಚ್ಚಿನ ಉದ್ಯೋಗಾವಕಾಶ ಕಲ್ಪಿಸಲು ಜಾಬ್ ಪೋರ್ಟಲ್‌ಗಳನ್ನು ಸ್ಥಾಪಿಸಿದೆ. ಇದರಿಂದ ಉದ್ಯೋಗಾವಕಾಶ, ಸ್ವ ಉದ್ಯೋಗಕ್ಕಾಗಿ ಸಾಲ, ಶಿಕ್ಷಣ ಸಾಲ, ಉಚಿತವಾಗಿ ಕೌಶಲ್ಯ ತರಬೇತಿಯನ್ನು ಒಂದೇ ವೇದಿಕೆಯಲ್ಲಿ ಒದಗಿಸಬಹುದಾಗಿದೆ. ಜಾಬ್ ಪೋರ್ಟಲ್



ಸಮಾಜ ಕಲ್ಯಾಣ ಹಾಗೂ ಅಭಿವೃದ್ಧಿಯ ಮಂತ್ರಿಗಳಿಂದ 27.1.2016ರಂದು ಉದ್ಘಾಟಿಸಲ್ಪಟ್ಟಿತು. ಇದು ದಿವ್ಯಾಂಗರಿಗೆ ಆರ್ಥಿಕ ಸಬಲತೆ ಒದಗಿಸುವಲ್ಲಿ ಪ್ರಮುಖ ಬೆಳವಣಿಗೆಯಾಗಿದೆ, ಇದರಿಂದ ವಿವಿಧ ಆರ್ಥಿಕ ಸೌಲಭ್ಯಗಳು ಸುಲಭವಾಗಿ ದಿವ್ಯಾಂಗರಿಗೆ ದೊರೆಯುತ್ತವೆ. ದಿವ್ಯಾಂಗರ ಕಲ್ಯಾಣ ಇಲಾಖೆಯಿಂದ, ದಿವ್ಯಾಂಗರ ಆರ್ಥಿಕ ಸಬಲತೆಗಾಗಿ ಭಾರತ ಸರ್ಕಾರವು ಕೆಲವು ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡಿದೆ. ಇದರಿಂದ ಮುಂಬರುವ ದಿನಗಳಲ್ಲಿ ದಿವ್ಯಾಂಗರ ಅಭಿವೃದ್ಧಿಗೆ ತುಂಬಾ ಸಹಕಾರ ಸಿಗಲಿದೆ.

* ಬ್ಯಾಂಕ್‌ಗಳ 10% ಆದ್ಯತಾ ವಲಯದ ವಿಭಾಗದಲ್ಲಿ ದಿವ್ಯಾಂಗರನ್ನು ಪರಿಗಣಿಸಲಾಗುವುದು.
* ಸ್ವಾವಲಂಬನಾ ಯೋಜನೆ ಅಡಿಯಲ್ಲಿ ಪ್ರತಿ ವರ್ಷ ಕೇವಲ 350 ರೂಪಾಯಿಗೆ ಆರೋಗ್ಯ ವಿಮೆಯನ್ನು ದಿವ್ಯಾಂಗರಿಗೆ ನೀಡಲಾಗುವುದು.
* ಮ್ಯಾಟ್ರಿಕ್ ಪೂರ್ವ ಹಾಗೂ ಮ್ಯಾಟ್ರಿಕ್ ನಂತರ ದಿವ್ಯಾಂಗ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನ ನೀಡಲಾಗುವುದು.
* ಉತ್ತಮ ಶ್ರೇಣಿಯ ಉನ್ನತ ಶಿಕ್ಷಣ ಪಡೆಯುತ್ತಿರುವ ದಿವ್ಯಾಂಗ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿ ವೇತನ.
* ಆಕ್ಸೆಸೆಬಲ್ ಇಂಡಿಯಾ ಕಾರ್ಯಕ್ರಮ ಆರಂಭ.
* ದಿವ್ಯಾಂಗರ ಕೌಶಲ್ಯ ಅಭಿವೃದ್ಧಿಗಾಗಿ ರಾಷ್ಟ್ರೀಯ ಕ್ರಿಯಾ ಯೋಜನೆಯ ಆರಂಭ. ❑

# ವಿಶೇಷಚೇತನರ ಸಾಮಾಜಿಕ ಸೇರ್ಪಡೆ

* ಡಾ. ಸಂಧ್ಯಾ ಲಿಮಯೆ



ವಿವಿಧ ರೀತಿಯ ಸಾಮಾಜಿಕ ಅಡೆತಡೆಗಳನ್ನು ತೊಡೆದುಹಾಕಿ, ಅವರಿಗೆ ಸಾಮಾನ್ಯ ನಾಗರಿಕರಿಗೆ ಇರುವ ಎಲ್ಲಾ ಜವಾಬ್ದಾರಿ ಮತ್ತು ಅವಕಾಶಗಳನ್ನು ಒದಗಿಸಬೇಕು. ಮನೆ, ಸಮುದಾಯ ಮತ್ತು ಕಾರ್ಯ ಕ್ಷೇತ್ರಗಳಲ್ಲಿ ಅವರನ್ನು ಸಂಪೂರ್ಣವಾಗಿ ತೊಡಗಿಸಬೇಕು. ಕೆಳಮಟ್ಟದ ನಿರೀಕ್ಷೆಗಳು ಮತ್ತು ಅವಲಂಬನೆಯ ಸಂಸ್ಕೃತಿಗಳಿಗೆ ಕೊನೆ ಹಾಡಲು ಇದು ಸಕಾಲ.

ಸಾಮಾಜಿಕ ಬಹಿಷ್ಕಾರಕ್ಕೆ ವ್ಯತಿರಿಕ್ತ ಅಥವಾ ತದ್ವಿರುದ್ಧ ಎನ್ನಬಹುದಾದ ಸಾಮಾಜಿಕ ಸೇರ್ಪಡೆಯು ಸಾಮಾಜಿಕ ಬಹಿಷ್ಕಾರಕ್ಕೆ ಕಾರಣವಾಗುವ ಅಥವಾ ಕಾರಣವಾಗುತ್ತಿರುವ ಸನ್ನಿವೇಶ ಮತ್ತು ಹವ್ಯಾಸ (ಪದ್ಧತಿ)ಗಳನ್ನು ಬದಲಿಸುವ ಸಕಾರಾತ್ಮಕ ಕ್ರಿಯೆ. ವಿಶ್ವ ಬ್ಯಾಂಕ್ ವ್ಯಾಖ್ಯಾನದ ಪ್ರಕಾರ, ಸಾಮಾಜಿಕ ಸೇರ್ಪಡೆ ಎಂದರೆ, ಸೌಲಭ್ಯವಂಚಿತ ಜನರ ಸಾಮರ್ಥ್ಯ, ಅವಕಾಶ ಮತ್ತು ಘನತೆಯನ್ನು ಸುಧಾರಿಸುವ ಮತ್ತು ಅವರನ್ನು ಸಮಾಜದ ಮುಖ್ಯ ವಾಹಿನಿಯಲ್ಲಿ ಪಾಲ್ಗೊಳ್ಳುವಂತೆ ಮಾಡುವ ಪ್ರಕ್ರಿಯೆ. ಜಾಗತಿಕವಾಗಿ, ವಿಶೇಷಚೇತನ ಜನರನ್ನು ತೀರಾ ನಿರ್ಲಕ್ಷ್ಯಕ್ಕೆ ಒಳಗಾದ, ವಂಚನೆಗೆ ಒಳಗಾದ ಮತ್ತು ಪ್ರತ್ಯೇಕವಾಗುಳಿದ ಅತಿದೊಡ್ಡ ಅಲ್ಪಸಂಖ್ಯಾತ ಗುಂಪು ಎಂದು ಗುರುತಿಸಲಾಗಿದೆ.

20ನೇ ಶತಮಾನದ ದ್ವಿತಿಯಾರ್ಧ ಭಾಗದಲ್ಲಿ, ಬಹುತೇಕ ರಾಷ್ಟ್ರಗಳು ವಿಶೇಷಚೇತನ ಸಮುದಾಯಕ್ಕೆ ಹಲವು ರೂಪದಲ್ಲಿ ನೆರವು ಒದಗಿಸಿವೆ. ಮಾನವ ಹಕ್ಕುಗಳ ಸಂರಕ್ಷಣೆ ವಿಧಾನದಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಮೂಲಕ ವಿಶೇಷಚೇತನರ ಚಿಕಿತ್ಸೆ ಮತ್ತು ಪುನರ್ವಸತಿಗೆ ದತ್ತಿ ಮತ್ತು ಸಾಂಸ್ಥಿಕ ರಕ್ಷಣೆಯ ಸಹಾಯಹಸ್ತ ಚಾಚಿವೆ. ಭಾರತ ಸ್ವಾತಂತ್ರ್ಯಾ ನಂತರ, ತನ್ನ ಗುರುತರ ಜವಾಬ್ದಾರಿಯನ್ನು ಒಪ್ಪಿಕೊಂಡು, ನಿರ್ಲಕ್ಷ್ಯಕ್ಕೆ ಒಳಗಾಗಿರುವ ಅಲ್ಪಸಂಖ್ಯಾತ ವಿಶೇಷಚೇತನ ಸಮುದಾಯಕ್ಕೆ ಎಲ್ಲಾ ನೆರವು ಒದಗಿಸಲು ಅಗತ್ಯವಾದ ನಾನಾ ಕಾರ್ಯಕ್ರಮಗಳನ್ನು ರೂಪಿಸಿದೆ. ಅವರ ಕ್ಷೇಮಾಭಿವೃದ್ಧಿ ಮತ್ತು ಪುನರ್ವಸತಿಯ ಹಲವಾರು ಕಾರ್ಯಕ್ರಮಗಳು ಜಾರಿಯಾಗಿವೆ.

ವಿಶೇಷಚೇತನರು ಸಮಾಜದಲ್ಲಿ ವ್ಯಾಪಕ ಅಡೆತಡೆಗಳನ್ನು ಎದುರಿಸುತ್ತಿದ್ದಾರೆ. ಅವರ ಎದುರಿಗಿರುವ ನಡವಳಿಕೆಯ ಊನತೆ, ಭೌತಿಕ ಊನತೆ ಮತ್ತು ಸಾಮಾಜಿಕ ಅಡೆತಡೆಗಳು ಅವರ ಸಾಮಾಜಿಕ ಸೇರ್ಪಡೆಯ ಮೇಲೆ ಪರಿಣಾಮ ಬೀರುತ್ತಿದೆ. ಅಂಗವೈಕಲ್ಯತೆ ಬಗ್ಗೆ ಇರುವ ಸಾಮಾಜಿಕ ಕಳಂಕದಿಂದಾಗಿ, ಸಮಾಜದಲ್ಲಿ ವಿಶೇಷಚೇತನರನ್ನು ನಕಾರಾತ್ಮಕವಾಗಿ ನೋಡುವ ಧೋರಣೆಯಿಂದಾಗಿ, ಅವರು ಸಾಮಾಜಿಕ ಸಮಸ್ಯೆಗಳನ್ನು ಎದುರಿಸುವಂತಾಗಿದೆ.

ಹಿಂದಿನ ಜನ್ಮದ ಶಾಪ ಅಥವಾ ಕರ್ಮದ ಫಲವಾಗಿ ಅಂಗವೈಕಲ್ಯ ಬರುತ್ತದೆ. ಇದು ದೇವರೇ ನೀಡುವ ಶಿಕ್ಷೆ. ಹಾಗಾಗಿ, ಇದನ್ನು ಯಾರಿಂದಲೂ ಬದಲಾಯಿಸಲು ಸಾಧ್ಯವಿಲ್ಲ ಎಂಬ ನಂಬಿಕೆ ಸಮಾಜದಲ್ಲಿ ಮನೆಮಾಡಿದೆ. ಈ ಕೆಟ್ಟ ನಂಬಿಕೆಯ ಫಲವಾಗಿ ವಿಶೇಷಚೇತನರನ್ನು ನಿರ್ಲಕ್ಷಿಸುವ ಜತೆಗೆ, ಅವರನ್ನು ಸಮಾಜದ ಮುಖ್ಯ ವಾಹಿನಿ ಮತ್ತು ಆರ್ಥಿಕತೆಯಿಂದ ದೂರ ಇಡುತ್ತಾ ಬರಲಾಗಿದೆ. ಇದರಿಂದಾಗಿ, ವಿಶೇಷಚೇತನರು ದೈನಂದಿನ ಬದುಕಿನಲ್ಲಿ ನಾನಾ ರೀತಿಯ ಅನನುಕೂಲಗಳನ್ನು ಅನುಭವಿಸುವಂತಾಗಿದೆ. ಈ ರೀತಿಯ ಪ್ರತಿಕೂಲ ಪರಿಸ್ಥಿತಿಯಿಂದಾಗಿ, ಬಹುತೇಕ ವಿಶೇಷಚೇತನರು ಮತ್ತು ಅವರ ಕುಟುಂಬ ಸದಸ್ಯರ ಜೀವನ ಗುಣಮಟ್ಟ ಕುಸಿಯುತ್ತಿದೆ. ಈ ರೀತಿಯ ಸಾಮಾಜಿಕ ತಾರತಮ್ಯ ಎದುರಿಸುತ್ತಿರುವ ವಿಶೇಷಚೇತನರಲ್ಲಿ ಸಂಕುಚಿತ ಮನೋಭಾವಗಳು ಕಾಡತೊಡಗಿವೆ. ನಾವು ಈ ಸಮಾಜಕ್ಕೆ ನಿರುಪಯುಕ್ತರು, ಈ ಸಮಾಜಕ್ಕೆ ಭಾರವಾಗಿ ಬದುಕುತ್ತಿದ್ದೇವೆ ಎಂಬ ಭಾವನೆ ಅವರನ್ನು

* ಸಹಪ್ರಾಧ್ಯಾಪಕರು, ಸೆಂಟರ್ ಫಾರ್ ಡಿಸೆಬಲಿಟಿ ಸ್ಟಡೀಸ್ ಆ್ಯಂಡ್ ಆ್ಯಕ್ಷನ್, ಮುಂಬಯಿ. Email : sandhyalimaye@yahoo.co.in

ಕಾಡಿ, ಪ್ರತ್ಯೇಕವಾಗಿರುವಂತೆ ಮಾಡಿದೆ. ಜತೆಗೆ, ವಿಶೇಷಚೇತನರ ಕುಟುಂಬ ಸದಸ್ಯರು, ಸಂಬಂಧಿಕರು, ಪೋಷಕರು ಮತ್ತು ಮಕ್ಕಳು ಸಹ ಸಮಾಜದ ನಕಾರಾತ್ಮಕ ವರ್ತನೆಗೆ ಬಲಿಪಶುವಾಗುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ, ಅವರು ಬಡತನ ಮತ್ತು ಒಂದು ರೀತಿಯ ಸಾಮಾಜಿಕ ಪ್ರತ್ಯೇಕತೆಗೆ ಒಳಗಾಗುತ್ತಿದ್ದಾರೆ. ವಿಶೇಷಚೇತನರನ್ನು ವೈಯಕ್ತಿಕವಾಗಿ ಮತ್ತು ಸಾಮಾಜಿಕ ಜೀವನದಿಂದ ಪೂರ್ಣವಾಗಿ ನಿರ್ಲಕ್ಷಿಸುವುದೇ ಸಾಮಾಜಿಕ ಬಹಿಷ್ಕಾರದ ಪ್ರಮುಖ ಅಂಶ. ಸಾಮಾಜಿಕ ರಚನೆಯಲ್ಲಿ ನಿರ್ಲಕ್ಷತೆ ಅಥವಾ ಅಲ್ಪವಾಗಿ ಕಾಣುವಿಕೆಗೆ ಬಹುತರದ ನೆಲೆಗಳಿವೆ. ಅಂಗವೈಕಲ್ಯದಿಂದ ಬಹುತರದ ಅನಾನುಕೂಲಗಳನ್ನು ಮತ್ತು ಸಮಸ್ಯೆಗಳನ್ನು ಎದುರಿಸುವ ಗುಂಪು ಜಾತಿ, ಜನಾಂಗೀಯತೆ, ಧರ್ಮ, ಸ್ಥಳ ಮತ್ತು ಪ್ರದೇಶದಂತಹ ಇತರೆ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಅಂಗವೈಕಲ್ಯ ಮತ್ತು ಲಿಂಗಬೇಧದ ಸಮಸ್ಯೆಯಿಂದಾಗಿ ವಿಶೇಷಚೇತನ ವ್ಯಕ್ತಿ ಸಮಾಜದಲ್ಲಿ ಸಂಪೂರ್ಣ ನಿರ್ಲಕ್ಷ್ಯಕ್ಕೆ ಒಳಗಾಗುತ್ತಿದ್ದಾನೆ. ವಿಶೇಷಚೇತನ ಮಹಿಳೆಯು ಗೃಹಿಣಿ, ಪತ್ನಿ, ಮತ್ತು ತಾಯಿಯ ಪಾತ್ರ ನಿರ್ವಹಿಸಲು ಅಸಕ್ತಳು ಎಂದೇ ಪರಿಗಣಿತಳಾಗುತ್ತಿದ್ದಾಳೆ. ಜತೆಗೆ, ಆಕೆ ಎಲ್ಲರಂತೆ ಸಹಜ ಭೌತಿಕ ಸೌಂದರ್ಯ ಹೊಂದಲಾಗದೆ ಸಮಾಜದಿಂದ ದೂರವಾಗಿ ಉಳಿಯುತ್ತಿದ್ದಾಳೆ. ಹೀಗಾಗಿ ವಿಶೇಷಚೇತನ ಮಹಿಳೆಯರು ಭೌತಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಒಂದು ರೀತಿಯ ನಿಂದನೆಗೆ ಒಳಗಾಗುತ್ತಿದ್ದಾರೆ. ಶತಮಾನಗಳಿಂದಲೂ ವಿಶೇಷಚೇತನ ಮಹಿಳೆಯರು ಉದ್ದೇಶಪೂರ್ವಕ ಅಲಕ್ಷ್ಯ, ಮೌಖಿಕ ನಿಂದನೆ, ದೈಹಿಕ ದಾಳಿ ಮತ್ತು ಲೈಂಗಿಕ ಕಿರುಕುಳಕ್ಕೆ ಒಳಗಾಗುತ್ತಿದ್ದಾರೆ. ಪ್ರಾಥಮಿಕ ಶಾಲಾ ಕಲಿಕೆಯ ಹಂತದಲ್ಲಿ





ಸಾಮಾನ್ಯ ಹಿತಾಸಕ್ತಿ, ಶಾಲಾ ಚಟುವಟಿಕೆ ಮತ್ತು ಕ್ರೀಡೆಯ ಮೂಲಕ ಸ್ನೇಹ ಅಥವಾ ಗೆಳೆತನ ರೂಪುಗೊಳ್ಳುತ್ತದೆ. ಆದರೆ, ವಿಶೇಷಚೇತನ ಮಕ್ಕಳು ಸಾಮಾನ್ಯವಾಗಿ ಸಾಮಾಜಿಕ ಕೌಶಲ್ಯಗಳ ಕೊರತೆ ಅನುಭವಿಸುತ್ತವೆ. ಇಂತಹ ಮಕ್ಕಳಿಗೆ ಗೆಳತನ ರೂಪುಗೊಳ್ಳಬೇಕಾದರೆ, ಸಂವಹನ ಅತ್ಯಗತ್ಯವಾಗುತ್ತದೆ. ಇದರಲ್ಲಿ ಸಂವಹನ ಮತ್ತು ಸಂಬಂಧ ನಿರ್ಮಾಣ ಕೌಶಲ್ಯಗಳ ಕಲಿಕೆ ಒಳಗೊಂಡಿರುತ್ತದೆ. ಸಾಮಾಜಿಕ ನಡವಳಿಕೆಗಳು ಬಾಲ್ಯಾವಸ್ಥೆಯಲ್ಲೇ ರೂಪುಗೊಳ್ಳುವುದರಿಂದ, ಮಕ್ಕಳ ಮನಃಸ್ಥಿತಿಯ ಮೇಲೆ ಸಾಮಾಜಿಕ ಅನುಭವವು ಹೆಚ್ಚಿನ ಪ್ರಭಾವ ಬೀರುತ್ತದೆ. ಆದರೆ, ಶ್ರವಣದೋಷ ಮತ್ತು ಬೌದ್ಧಿಕ ವಿಕಲಾಂಗತೆಯ ಮಕ್ಕಳು ಸಮಾಜದಲ್ಲಿ ಪರಿಣಾಮಕಾರಿ ಸಂವಹನ ನಡೆಸಲು ಅಸಮರ್ಥರಾಗುತ್ತಿದ್ದಾರೆ. ಇದರಿಂದ ಅವರು ಹೊಸ ಗೆಳೆತನ ಗಳಿಸುವುದಾಗಲಿ, ಸಾಮಾಜಿಕ ಸಂಬಂಧ ಹೆಚ್ಚಿಸಿಕೊಳ್ಳುವುದಾಗಲಿ ಸಾಧ್ಯವಾಗದೆ, ದೂರ ಉಳಿಯುವಂತಾಗುತ್ತಿದೆ. ಇದು ಅವರ ಸಾಮಾಜಿಕ ಸೇರ್ಪಡೆಯ ಮೇಲೆ ಪರಿಣಾಮವನ್ನುಂಟು ಮಾಡುತ್ತಿದೆ. ವಿಶೇಷಚೇತನರು ಪ್ರತ್ಯೇಕವಾಗಿ ಉಳಿಯಲು ಸೃಷ್ಟಿಯಾಗಿರುವ ಅತಿದೊಡ್ಡ ಸಮಸ್ಯೆ ಎಂದರೆ, ಸಮಾಜದ ಮುಖ್ಯ ವಾಹಿನಿಯಲ್ಲಿ ಅವರ ಬಗ್ಗೆ ರೂಪಿತವಾಗಿರುವ ನಕಾರಾತ್ಮಕ ಮನೋಭಾವ. ಈ ಹಿನ್ನೆಲೆಯಲ್ಲಿ ವಿಶೇಷಚೇತನರು ಹಾಕಿಕೊಂಡಿರುವ ಸಾಮಾಜಿಕ ಮಿತಿಗಳು ಎಲ್ಲರಿಗೂ ಅರ್ಥವಾಗುವಂತಿವೆ. ಹಾಗಾಗಿ ಸಮಾಜ ಅವರ ಇತಿಮಿತಿಗಳನ್ನು ಗ್ರಹಿಸಿ, ಅವನ್ನು ಒಪ್ಪಿಕೊಂಡು ಅವರಿಗೆ ಸಮಾನ ಅವಕಾಶಗಳನ್ನು ನೀಡಲು, ಸಹಾಯ ಹಸ್ತ ಚಾಚಲು ನಾಗರಿಕ ಸಮಾಜ ಮುಂದಾಗಬೇಕಿದೆ. ವಿಶೇಷಚೇತನರನ್ನು ಸಾಮಾಜಿಕ ವ್ಯವಸ್ಥೆಗೆ ಸೇರ್ಪಡೆಗೊಳಿಸುವ ಜವಾಬ್ದಾರಿ ಸಮಾಜದ ಮೇಲಿದೆ.

ವಿಶೇಷಚೇತನರಿಗೆ ಶಿಕ್ಷಣ, ಉದ್ಯೋಗ, ಇತರರೊಂದಿಗೆ ಅರ್ಥಪೂರ್ಣ ಸಂಬಂಧ ಸ್ಥಾಪನೆಯ ಅವಕಾಶಗಳನ್ನು ಸಮಾಜ ನಿರಾಕರಿಸುತ್ತಾ ಬರುವ ಮೂಲಕ ಅವರನ್ನು ಕೆಲಸಕ್ಕೆ ಬಾರದವರು ಎಂಬ ಹಣೆಪಟ್ಟಿ ಕಟ್ಟುವ ಜತೆಗೆ, ಅವರು ಸಮಾಜಕ್ಕೆ ಹೊರೆ ಎಂದು ಬಿಂಬಿಸಲಾಗುತ್ತಿದೆ. ಸಮಾಜದ ಈ ರೀತಿಯ ನಕಾರಾತ್ಮಕ ಧೋರಣೆಗಳಿಂದಾಗಿ, ವಿಶೇಷಚೇತನರು ತಮ್ಮ ಸ್ಥಳೀಯ ಸಮುದಾಯಕ್ಕೆ ಮತ್ತು ಆರ್ಥಿಕತೆಗೆ ಪರಿಣಾಮಕಾರಿ ಕೊಡುಗೆ ನೀಡಲು ಅಸಮರ್ಥರಾಗುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಇವರಿಗೆ ಸರಿಯಾದ ಬೆಂಬಲ ದೊರೆತರೆ, ಸಮುದಾಯದ ಒಳಿತಿಗೆ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಸಾಧ್ಯವಾಗಲಿದೆ. ಪ್ರಸ್ತುತ, ಹಲವಾರು ವಿಶೇಷಚೇತನರು ಮಹತ್ವಪೂರ್ಣ ಎನಿಸುವ ಸಾಮರ್ಥ್ಯ ಮತ್ತು ಕೌಶಲ್ಯ ಹೊಂದಿದ್ದರೂ, ಕೆಲಸ, ಕಾರ್ಯಗಳಿಂದ ದೂರ ಉಳಿದಿದ್ದಾರೆ. ಈ ವರ್ಗವನ್ನು ಸಮರ್ಪಕವಾಗಿ ಬಳಸಿಕೊಂಡರೆ ಸಾಮಾಜಿಕ ಸೇರ್ಪಡೆಯಲ್ಲಿ ಹೊಸ ನಿರೀಕ್ಷೆಗಳು ಹೆಚ್ಚಾಗುವುದರಲ್ಲಿ ಯಾವುದೇ ಸಂದೇಹ ಇಲ್ಲ. ವಿಶೇಷಚೇತನರನ್ನು ಸಮಾಜದ ಮುಖ್ಯವಾಹಿನಿಗೆ ಸೇರ್ಪಡೆ ಮಾಡದ ಕಾರಣಕ್ಕಾಗಿ ಅವರು ಸರ್ಕಾರ, ಕುಟುಂಬದ ಬೆಂಬಲ ಮತ್ತು ಪ್ರಯೋಜನಗಳನ್ನು ಸಂಪೂರ್ಣ ಅವಲಂಬಿಸುವ ಅನಿವಾರ್ಯತೆ ಸೃಷ್ಟಿಯಾಗಿದೆ. ದುಡಿಯುವ ಅಪಾರ ಶಕ್ತಿ ಹೊಂದಿರುವ ವಿಶೇಷಚೇತನರಿಗೆ ಸೂಕ್ತ ಅವಕಾಶಗಳನ್ನು ನಿರಾಕರಿಸುತ್ತಿರುವ ಪರಿಣಾಮವಾಗಿ, ಸಮಾಜವೇ ಅವರ ಇಳಿಗಾಲದ ಬದುಕನ್ನು ಕಗ್ಗತ್ತಲಲ್ಲಿ ಇಡುತ್ತಿದೆ.

ವಿಶೇಷಚೇತನರ ಭೌತಿಕ ಅಡೆತಡೆಗಳಿಂದಾಗಿ, ಅವರಿಗೆ ಸಮಾಜದಲ್ಲಿ ಸ್ನೇಹಮಯ ಪರಿಸರ ಸೃಷ್ಟಿಸಿಕೊಳ್ಳುವುದು ಸಾಧ್ಯವಾಗುತ್ತಿಲ್ಲ. ಸಾರ್ವಜನಿಕ ಸಾರಿಗೆ ವ್ಯವಸ್ಥೆ, ಕಟ್ಟಡಗಳ ಬಳಕೆ ಮತ್ತಿತರ ಸೇವೆಗಳಿಂದ ವಂಚಿತರಾಗುತ್ತಿದ್ದಾರೆ. ಸಾರ್ವಜನಿಕ ಸೇವೆಗಳನ್ನು ಪಡೆಯುವ ಎಲ್ಲಾ ಹಕ್ಕುಗಳು ಅವರಿಗೆ ಇವೆ ಎಂಬುದನ್ನು ಸಮಾಜವೇ ಅರ್ಥ ಮಾಡಿಕೊಂಡು, ಅವುಗಳನ್ನು ಒದಗಿಸಲು ಮುಂದಾಗಬೇಕು.

ವಿವಿಧ ರೀತಿಯ ಅಂಗವೈಕಲ್ಯಗಳಿಗೆ ಅಗತ್ಯವಿರುವ ನಾನಾ ರೀತಿಯ ಸೌಲಭ್ಯಗಳನ್ನು ಒದಗಿಸಲು ಪೂರಕವಾದ ನೀತಿಗಳನ್ನು ರೂಪಿಸಲು ಸರ್ಕಾರ ಆದ್ಯತೆಯ

ಗಮನ ನೀಡಬೇಕು. ವಿವಿಧ ರೀತಿಯ ಅಂಗವೈಕಲ್ಯ ಹೊಂದಿರುವ ಗುಂಪುಗಳನ್ನು ಪರಿಗಣನೆಗೆ ತೆಗೆದುಕೊಂಡು, ಅವರೊಂದಿಗೆ ಸಮಾಲೋಚನೆ ನಡೆಸಿ, ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ನೀತಿ ರೂಪಿಸುವ ಕೆಲಸಕ್ಕೆ ಸರ್ಕಾರ ಮುಂದಾಗಬೇಕು.

ಆದರೆ, ತೀರಾ ಛಿದ್ರ ಎನಿಸಿರುವ, ಅತಿ ಸಂಕೀರ್ಣ ಅನಿಸಿರುವ ಮತ್ತು ಅಧಿಕಾರಶಾಹಿ ಹಿಡಿತದಲ್ಲಿರುವ ವ್ಯವಸ್ಥೆಯ ಜತೆ ನಾವು ಗುದ್ದಾಡುತ್ತಿದ್ದೇವೆ ಎಂಬ ಭಾವನೆ ವಿಶೇಷಚೇತನರನ್ನು ಕಾಡತೊಡಗಿದೆ. ಈ ಅಧಿಕಾರಿಶಾಹಿ ವ್ಯವಸ್ಥೆಯು ವಿಶೇಷಚೇತನರ ಜೀವನಾವಕಾಶಗಳನ್ನು ಸುಧಾರಿಸುವ, ಸಾಮಾಜಿಕ ಸೇರ್ಪಡೆಯ ಯಾವುದೇ ಕೆಲಸವನ್ನು ಮಾಡುತ್ತಿಲ್ಲ. ರಾಜಕೀಯ ಮತ್ತು ಕಾನೂನು ವಲಯದ ಈ ರೀತಿಯ ಜಡ್ಡುಗಟ್ಟಿದ ವ್ಯವಸ್ಥೆಯು ವಿಶೇಷಚೇತನರನ್ನು ಪ್ರತ್ಯೇಕವಾಗಿ ಉಳಿಯುವಂತೆ ಮಾಡಿದೆ. ಇದರ ಪರಿಣಾಮ ಎಂಬಂತೆ ಅವರು ಒಂದು ರೀತಿಯ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುತ್ತಿದ್ದಾರೆ.

### ಕಾರ್ಯತಂತ್ರಗಳು

ಸಾಮಾಜಿಕ ಸೇರ್ಪಡೆಯ ಬೇಡಿಕೆಯು ವಾಸ್ತವವಾಗಿ ಸಮಾಜ ನಡೆಸುತ್ತಾ ಬಂದಿರುವ ದಬ್ಬಾಳಿಕೆಯ ವಿರುದ್ಧದ ಪ್ರತಿಭಟನೆ. ಹಿಂಸೆ ಮತ್ತು ಶೋಷಣೆಗಳಿಗೆ ಅಂತ್ಯ ಹಾಡುವುದು ಅತಿಮುಖ್ಯವಾದ ವಿಚಾರ. ವಿಶೇಷ ಚೇತನರನ್ನು ಸಬಲೀಕರಿಸಬೇಕಾದರೆ, ವಿವಿಧ ರೀತಿಯ ನಾನಾ ಸಾಮಾಜಿಕ ಅಡೆತಡೆಗಳನ್ನು ತೊಡೆದುಹಾಕಿ, ಅವರಿಗೆ ಸಾಮಾನ್ಯ ನಾಗರಿಕರಿಗೆ ಇರುವ ಎಲ್ಲಾ ಜವಾಬ್ದಾರಿ ಮತ್ತು ಅವಕಾಶಗಳನ್ನು ಒದಗಿಸಬೇಕು. ಮನೆ, ಸಮುದಾಯ ಮತ್ತು ಕಾರ್ಯ ಕ್ಷೇತ್ರಗಳಲ್ಲಿ ಅವರನ್ನು ಸಂಪೂರ್ಣವಾಗಿ ತೊಡಗಿಸಬೇಕು. ಕೆಳಮಟ್ಟದ ನಿರೀಕ್ಷೆಗಳು ಮತ್ತು ಅವಲಂಬನೆಯ ಸಂಸ್ಕೃತಿಗಳಿಗೆ ಕೊನೆ ಹಾಡಲು ಇದು ಸಕಾಲ. ವಿಶೇಷಚೇತನರಲ್ಲಿ ಹೂಡಿಕೆ ಮಾಡುವ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರುವ, ಸಬಲೀಕರಿಸುವ ಮತ್ತು ಸಾಮಾಜಿಕ ಸೇರ್ಪಡೆ ಮಾಡುವ ಕಡೆಗೆ ಸಮಾಜ ತಿರುಗಬೇಕಿದೆ.

ಈ ರೀತಿಯ ಅಡೆತಡೆಗಳನ್ನು ಹತ್ತಿಕ್ಕುವ ಗುರುತರ ಜವಾಬ್ದಾರಿ ಸರ್ಕಾರದ ಕೆಲಸ ಮಾತ್ರವಲ್ಲದೆ, ಎಲ್ಲಾ ಜನರ ಜವಾಬ್ದಾರಿಯೂ ಹೌದು. ಅದರಲ್ಲೂ, ವಿಶೇಷಚೇತನರ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ ಎಂಬುದನ್ನು ಮನಗಾಣಬೇಕು. ಉದ್ಯೋಗದಾತರು, ಆರೋಗ್ಯ ವೃತ್ತಿಪರರು, ವಿದ್ಯಾವಂತರು, ಸ್ಥಳೀಯ ಸಮುದಾಯಗಳು, ಸರಕು ಮತ್ತು ಸೇವೆಗಳನ್ನು ಒದಗಿಸುವವರು.... ಹೀಗೆ ಎಲ್ಲ ವರ್ಗದ ಜನರು ವಿಶೇಷಚೇತನರ ಬಾಳು ಬೆಳಕಾಗಿಸಲು ನೆರವಾಗಬೇಕು.

### ವಿಶೇಷಚೇತನರ ಅಭ್ಯುದಯಕ್ಕೆ ಯೋಜನೆ, ಸಂಪನ್ಮೂಲ ಮತ್ತು ದೃಷ್ಟಿಕೋನ

1. ನಾನಾ ರೀತಿಯ ಅಂಗವೈಕಲ್ಯತೆ, ಅದರ ಅಗತ್ಯಗಳು ಮತ್ತು ಸಾಮರ್ಥ್ಯಗಳ ಕುರಿತು ವಿವಿಧ ಪಾಲುದಾರರಲ್ಲಿ ಅರಿವು ಮೂಡಿಸುವ ಜತೆಗೆ ಸೂಕ್ಷ್ಮಗ್ರಾಹಿಯಾಗಿಸುವುದು.

2. ವೈದ್ಯಕೀಯ ವೃತ್ತಿಪರರು, ಶಿಕ್ಷಕರು, ನಾಗರಿಕ ಸೇವಾದಾರರು, ವಕೀಲರು, ಉದ್ಯೋಗದಾತರು, ಉದ್ಯೋಗ ಅಧಿಕಾರಿಗಳು, ಸ್ಥಳೀಯ ಸಮುದಾಯ ನಾಯಕರು... ಇತ್ಯಾದಿ ಪಾಲುದಾರರಿಗೆ ಸೇವಾ ತರಬೇತಿ ನೀಡುವಾಗ ಅಂಗವೈಕಲ್ಯದ ಜ್ಞಾನ ಹೆಚ್ಚಿಸುವ ಜತೆಗೆ, ಕೌಶಲ್ಯ ಅಭಿವೃದ್ಧಿಪಡಿಸಲು ಆದ್ಯತೆ ನೀಡಬೇಕು.

3. ವಿಶೇಷಚೇತನರ ಶಕ್ತಿ ಮತ್ತು ಸಾಮರ್ಥ್ಯಗಳನ್ನು ಬಲಪಡಿಸಲು ಮತ್ತು ಅವರನ್ನು ಪ್ರೋತ್ಸಾಹಿಸಲು ಗಮನ ನೀಡಬೇಕು.



4. ಬಿ.ಎಡ್ ಮತ್ತು ಎಂ.ಎಡ್‌ಗೆ ಸಮಾನವಾದ ಅಂಗವೈಕಲ್ಯತೆಯ ಕೋರ್ಸ್ ಕಡ್ಡಾಯಮತ್ತು ನಾನಾ ರೀತಿಯ ಅಂಗವೈಕಲ್ಯದ ಮಕ್ಕಳಲ್ಲಿ ಬೋಧನಾ ಕಲೆ ಕಡ್ಡಾಯಕ್ಕೆ ಒತ್ತು ನೀಡಬೇಕು.

5. ಸಮಾಜಕ್ಕೆ ಕೊಡುಗೆ ನೀಡಲು ಇರುವ ಹಲವು ಅವಕಾಶಗಳನ್ನು ಪಡೆಯಲು ವಿಶೇಷಚೇತನರಿಗೆ ಅವಕಾಶ ಸಿಗುವಂತಾಗಬೇಕು. ಸಮಾಜ ಅವರನ್ನು ನಂಬುವಂತಾಗಬೇಕಾದರೆ, ಸರ್ಕಾರದ ನೀತಿಗಳು ಸೌಲಭ್ಯಗಳು ಅವರಿಗೆ ಲಭ್ಯವಾಗುವಂತಾಗಬೇಕು.

6. ವಿಶೇಷಚೇತನರ ಎಲ್ಲಾ ಅಗತ್ಯಗಳು ಮುಖ್ಯವಾಹಿನಿಯ ನೀತಿಗಳಲ್ಲಿ ಜಾರಿಯಾಗಬೇಕು.

7. ವಿಶೇಷಚೇತನರು ಅನುಭವಿಸುವ ಸರ್ಕಾರದ ಬೆಂಬಲ ಮತ್ತು ಸೇವೆಗಳು ಸಂಪೂರ್ಣ ಬದಲಾಗಬೇಕು.

8. ಮುಕ್ತ ಮತ್ತು ಎಲ್ಲರನ್ನೂ ಒಳಗೊಂಡ ಪ್ರಗತಿಯ ಪರಿಸರ ನಿರ್ಮಾಣಕ್ಕೆ ಸಾರ್ವತ್ರಿಕವಾದ ನೀತಿ ರೂಪುಗೊಳ್ಳಬೇಕು. ❑


# ಯೋಜನಾ

## ಜೂನ್ 2016 ಸಂಚಿಕೆಯ ವಿಷಯ

# ಭಾರತದ ದಾಪುಗಾಲು

# ಅಸಾಮರ್ಥ್ಯ ಮತ್ತು ವಿವಿಧ ಸಾಮರ್ಥ್ಯಗಳು

* ಅರ್ಚನಾ ಸಿಂಗ್



'ಅಸಾಮರ್ಥ್ಯ'ವೆನ್ನುವುದು ಒಂದು ಮಾನಸಿಕ ಸ್ಥಿತಿ ಮಾತ್ರ ಎನ್ನುವುದು ಹಲವು ಅಧ್ಯಯನಗಳಿಂದ ದೃಢಪಟ್ಟಿದೆ. ಸಮಸ್ಯೆಯಾಗಿರುವುದು 'ಅಸಾಮರ್ಥ್ಯ'ವುಳ್ಳ ವ್ಯಕ್ತಿಗಳ 'ಅಸಾಮರ್ಥ್ಯ'ಕ್ಕಿಂತ ಹೆಚ್ಚಾಗಿ ಆ ವ್ಯಕ್ತಿಗಳ ಹಾದಿಯಲ್ಲಿ ಇತರರು ಸೃಷ್ಟಿಸುವ ಅಡೆತಡೆಗಳೇ.

ದೈಹಿಕ ಅಥವಾ ಮಾನಸಿಕ ಕುಂದು ಅಥವಾ ಅಸಾಮರ್ಥ್ಯವಿರುವ ವ್ಯಕ್ತಿಗಳ ಒಳಗೊಳ್ಳುವಿಕೆಯ ನಿಟ್ಟಿನಲ್ಲಿ ವಿವಿಧ ಪ್ರಯತ್ನಗಳ ಬಗ್ಗೆ ನೀಡುವ ಅತ್ಯುತ್ಸಾಹದ ಭಾಷಣಗಳ ಮಧ್ಯೆ ಈ ವರ್ಷ ಭಾರತವು ದೆಹಲಿಯ ಅತ್ಯಂತ ಪ್ರತಿಷ್ಠಿತ ವಿಜ್ಞಾನ ಭವನದಲ್ಲಿ 'ಸುಗಮ್ಯ ಭಾರತ ಚಳವಳಿ'ಯನ್ನು ಹಮ್ಮಿಕೊಂಡಿದೆ. ಸಂಯುಕ್ತ ರಾಷ್ಟ್ರಗಳ ಸಂಘದ ಪ್ರಕಾರ, ಒಂದು ನೂರು ಕೋಟಿಗೂ ಹೆಚ್ಚು ಜನರು – ಅಂದರೆ ವಿಶ್ವದ ಒಟ್ಟು ಜನಸಂಖ್ಯೆಯಲ್ಲಿ ಶೇ 15ರಷ್ಟು ಜನರು – ಒಂದಲ್ಲ ಒಂದು ರೀತಿಯ ಅಸಾಮರ್ಥ್ಯದಿಂದ ಬದುಕುತ್ತಿದ್ದಾರೆ. 2011ರ ಭಾರತ ಜನಗಣತಿಯು ತಿಳಿಸುವ ಹಾಗೆ 26 ದಶಲಕ್ಷ ಜನರು – ಅಂದರೆ ಆಸ್ಟ್ರೇಲಿಯಾದ ಒಟ್ಟು ಜನಸಂಖ್ಯೆಗಿಂತಲೂ ಅಧಿಕ ಸಂಖ್ಯೆಯ ಜನರು – ಅಸಾಮರ್ಥ್ಯವನ್ನು ಹೊಂದಿದ್ದಾರೆ. ಭಾರತವು ಆರ್ಥಿಕವಾಗಿ ಶೀಘ್ರವಾಗಿ ಬೆಳೆಯುತ್ತಿರುವ ದೇಶ. ಅನುಕೂಲಕರ ನಿಟ್ಟಿನಲ್ಲಿ ಇಲ್ಲಿ ಸಾಕಷ್ಟು ಪ್ರಗತಿಯಾಗಿದೆ ಮತ್ತು ಈ ಪ್ರಗತಿಯು ಶೀಘ್ರಗತಿಯಲ್ಲಿ ಇನ್ನೂ ಮುಂದುವರಿಯುತ್ತಿದೆ. ನಮ್ಮ ಇಷ್ಟೆಲ್ಲ ಪ್ರಗತಿಯ ನಡುವೆಯೂ ನಮ್ಮ ಹಾದಿಯಲ್ಲಿ ಕಾರ್ಯಸಾಧನೆಗೆ ಅಡ್ಡಿಯಾಗುವಂತಹ ಹಲವು ಸಂಗತಿಗಳಿವೆ. ಮೊದಲನೆಯದಾಗಿ ಇರುವ ಸವಾಲೆಂದರೆ, ಅಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಗಳನ್ನು 'ಅಸಾಮರ್ಥ್ಯವ್ಯಕ್ತಿ'ಗಳು ಎಂದು ಗುರುತಿಸುವುದು. ಇದು ಸಾಲದು ಎಂಬಂತೆ, ಅಸಾಮರ್ಥ್ಯವಿರುವ ವ್ಯಕ್ತಿಗಳಲ್ಲಿರುವ ವಿಲಕ್ಷಣತೆಯನ್ನು ಸಮಾಜದಲ್ಲಿರುವ ಇತರರು ಒಂದೇ ಸಮನೆ ದಿಟ್ಟಿಸಿ ನೋಡುತ್ತಾರೆ. ಇಷ್ಟೇ ಅಲ್ಲದೆ, ಭಾರತದಲ್ಲಿ ಒಬ್ಬ ಅಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿ ತನ್ನ ದೈಹಿಕ ಅಸಾಮರ್ಥ್ಯವನ್ನು ಸಾಬೀತುಪಡಿಸಲು ಕಾನೂನುಬದ್ಧವಾದ ದಾಖಲೆಗಳನ್ನು ಹೊಂದಿರಬೇಕು ಮತ್ತು ಅದನ್ನು ಸಕ್ಷಮ ಅಧಿಕಾರಿಯಿಂದ ಪಡೆದಿರಬೇಕು.

## ದೈಹಿಕ ಅಸಾಮರ್ಥ್ಯವನ್ನು ಹೊಂದಿರುವವನು ಎಂದರೆ ಯಾರು?

ಭಾರತದಲ್ಲಿ, ಸರ್ಕಾರದಿಂದ ನೇಮಿಸಲ್ಪಟ್ಟ ವೈದ್ಯಕೀಯ ವೃತ್ತಿನಿರತರು ಇರುವ ಮಂಡಲಿಯು, ವ್ಯಕ್ತಿಯನ್ನು ಪರಿಶೀಲಿಸಿ ಆ ವ್ಯಕ್ತಿ ದೈಹಿಕವಾಗಿ ಅಸಮರ್ಥನೇ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುತ್ತದೆ. ಹಾಗೆ ನಿರ್ಧರಿಸುವಾಗ ಅಸಾಮರ್ಥ್ಯವು ಶೇ 40 ಅಥವಾ ಅದಕ್ಕಿಂತ ಹೆಚ್ಚು ಇದ್ದರೆ, ಆ ವ್ಯಕ್ತಿಗೆ 'ಅಸಾಮರ್ಥ್ಯದ ಪ್ರಮಾಣಪತ್ರ'ವನ್ನು ನೀಡುತ್ತಾರೆ. ಅಲ್ಲದೆ, ಈ ಮಂಡಲಿಯ ಸದಸ್ಯರ ಕಾನೂನು ಯಾವುದನ್ನು ಅಸಾಮರ್ಥ್ಯ ಎಂದು ಗುರುತಿಸಿದೆಯೋ ಅವುಗಳನ್ನು ಮಾತ್ರ ಪರಿಗಣಿಸುತ್ತಾರೆ. ಸರ್ಕಾರವು ಈ ವರ್ಗದ ವ್ಯಕ್ತಿಗಳಿಗೆ ನೀಡುತ್ತಿರುವ ಸವಲತ್ತುಗಳು ಇಂತಹ ಪ್ರಮಾಣಪತ್ರವನ್ನು ಹೊಂದಿರುವವರಿಗೆ ಮಾತ್ರ ದೊರಕುತ್ತವೆ. ಈ ಪ್ರಮಾಣಪತ್ರವನ್ನು ನೀಡುವ ಪ್ರಕ್ರಿಯೆ ಹೆಚ್ಚು ಕಾಲವನ್ನು ಹಿಡಿಯುತ್ತದೆ ಮತ್ತು ಅಷ್ಟು ಸುಲಭವೂ ಅಲ್ಲ, ಆದರೆ ಇದರಿಂದ ಸವಲತ್ತುಗಳು ದುರುಪಯೋಗವಾಗುವುದು ತಪ್ಪುತ್ತದೆ. ನಾವು ಇಪ್ಪತ್ತೊಂದನೆಯ

* ಮುಖ್ಯಸ್ಥರು, ಸ್ಟ್ಯಾಂಡರ್ಡ್ಸ್ ಆ್ಯಂಡ್ ಅಶ್ಯುರನ್ಸ್. Email : archna.singh@scpwd.in

ಶತಮಾನವನ್ನು ಪ್ರವೇಶಿಸಿರುವಾಗ ಹಾಗೂ ತಂತ್ರಜ್ಞಾನದ ಬೆಳವಣಿಗೆ ಜೀವನದಲ್ಲಿ ಹಾಸುಹೊಕ್ಕಾಗಿರುವಾಗ, ದೈಹಿಕ ಅಸಾಮರ್ಥ್ಯದ ಪ್ರಮಾಣಪತ್ರವನ್ನು ನೀಡುವ ಪ್ರಕ್ರಿಯೆಯಲ್ಲಿಯೂ ಸ್ವಾಗತಿಸಬೇಕಾದ ಕೆಲವೊಂದು ಬದಲಾವಣೆಗಳು ಬರಬೇಕು.

### ದೈಹಿಕ ಅಸಾಮರ್ಥ್ಯದ ಪ್ರಮಾಣಪತ್ರ

ಮೊದಲನೆಯ ಹೆಜ್ಜೆಯೆಂದರೆ, ಅಸಾಮರ್ಥ್ಯದ ಪ್ರಮಾಣಪತ್ರಕ್ಕೆ ಸಲ್ಲಿಸಬೇಕಾದ ಅರ್ಜಿ. 2009ರಲ್ಲಿ ಪ್ರಕಟವಾದ ಅಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಗಳಿಗೆ ಸಂಬಂಧ ಪಟ್ಟ ನಿಯಮಗಳ ತಿದ್ದುಪಡಿಯ ಪ್ರಕಾರ ಅಂತಹ ಅಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿ ತನ್ನ ಹೆಸರಿನಲ್ಲಿ ಪ್ರಮಾಣಪತ್ರವನ್ನು ಪಡೆಯಬೇಕಾದರೆ ನಿಗದಿತ ಅರ್ಜಿಯ ನಮೂನೆಯಲ್ಲಿ ವಿವರಗಳನ್ನು ಬರೆದು ಸಲ್ಲಿಸಬೇಕು. ಈ ಅರ್ಜಿಯು ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಸಚಿವಾಲಯದ ಅಂತರ್ಜಾಲತಾಣದಲ್ಲಿ ದೊರೆಯುತ್ತದೆ. ಹಾಗೆ ಅರ್ಜಿಯನ್ನು ಸಲ್ಲಿಸುವಾಗ, ಅದರ ಜೊತೆಯಲ್ಲಿ ವಿಳಾಸದ ಸಬೂತಿಗಾಗಿ ದಾಖಲೆ, ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಎರಡು ಚಿತ್ರಗಳನ್ನು ಲಗತ್ತಿಸಬೇಕು. ಅಭ್ಯರ್ಥಿಗಳು ನೀಡಿರುವ ವಿಳಾಸದ ಆಧಾರದ ಮೇಲೆ ಅವರ ಜಿಲ್ಲೆಯಲ್ಲಿಯ ಅಧಿಕೃತ ವೈದ್ಯಕೀಯ ಅಧಿಕಾರಿಗಳಿಗೆ ಅಥವಾ ಅಭ್ಯರ್ಥಿಯು ತನ್ನ ದೈಹಿಕ ಅಸಾಮರ್ಥ್ಯಕ್ಕೆ ಚಿಕಿತ್ಸೆಯನ್ನು ಪಡೆದ ಅಥವಾ ಪಡೆಯುತ್ತಿರುವ ಸರ್ಕಾರಿ ಆಸ್ಪತ್ರೆಯ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಬೇಕು.

ಒಂದು ವೇಳೆ, ಮೇಲೆ ಹೇಳಿದ ಅರ್ಜಿಯನ್ನು ಅಭ್ಯರ್ಥಿಯು ತಾನೇ ಸಲ್ಲಿಸಲಾಗದಂತಹ ಅಪ್ರಾಪ್ತ ವಯಸ್ಸಿನವನಾಗಿದ್ದರೆ, ಹಾಗೆ ಮಾಡಲು ದೈಹಿಕವಾಗಿ ಅಥವಾ ಬೌದ್ಧಿಕವಾಗಿ ಅಸಮರ್ಥನಾಗಿದ್ದರೆ, ಅಂತಹ ವ್ಯಕ್ತಿಯ ಪರವಾಗಿ ಆತನ ಕಾನೂನುಬದ್ಧ ಪೋಷಕರು ಅರ್ಜಿಯನ್ನು ಸಲ್ಲಿಸಬಹುದು.

ಎರಡನೆಯ ಹೆಜ್ಜೆಯೆಂದರೆ, ಪ್ರಮಾಣಪತ್ರವನ್ನು ನೀಡುವುದು. ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಸಂಬಂಧ ಪಟ್ಟ ವೈದ್ಯಕೀಯ ಅಧಿಕಾರಿಯು 1955ರ 'ವೈಯಕ್ತಿಕ ಅಸಾಮರ್ಥ್ಯಗಳ (ಸಮಾನಾವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ರಕ್ಷಣೆ) ಅಧಿನಿಯಮದ ಪ್ರಕಾರ ಸಾಧ್ಯವಾದಷ್ಟು ಮಟ್ಟಿಗೆ ಅರ್ಜಿಯನ್ನು ಸ್ವೀಕರಿಸಿದ ಒಂದು ವಾರದ ಒಳಗೆ, ಆದರೆ ಒಂದು ತಿಂಗಳು ಮೀರುವುದಕ್ಕೆ ಮುಂಚೆ, ಪ್ರಮಾಣಪತ್ರವನ್ನು ನೀಡುತ್ತಾರೆ.

ಪರೀಕ್ಷೆಯ ನಂತರ ಅಭ್ಯರ್ಥಿಯ ದೈಹಿಕ ಅಸಾಮರ್ಥ್ಯವು ಒಂದು ನಿರ್ದಿಷ್ಟ ಕಾಲಾವಧಿಯ ಒಳಗೆ ಉತ್ತಮವಾಗುವ ಅವಕಾಶಗಳು ಇಲ್ಲವೆಂದು ಕಂಡುಬಂದರೆ, ವೈದ್ಯಕೀಯ ಅಧಿಕಾರಿಯು 'ಶಾಶ್ವತವಾದ ಅಸಾಮರ್ಥ್ಯವೆಂದು ಸೂಚಿಸುವ ಪ್ರಮಾಣಪತ್ರ'ವನ್ನು ನೀಡುತ್ತಾರೆ. ತಾವು ನಡೆಸಿದ ಪರೀಕ್ಷೆಯಲ್ಲಿ, ಅಭ್ಯರ್ಥಿಯ ದೈಹಿಕ ಅಸಾಮರ್ಥ್ಯವು ಕೆಲವು ಕಾಲದ ನಂತರ ಬದಲಾಗಬಹುದು ಎಂದು ಭಾವಿಸಿದರೆ, ಅವರು ಪ್ರಮಾಣಪತ್ರವನ್ನು ಒಂದು ನಿರ್ದಿಷ್ಟಾವಧಿಯವರೆಗೆ ಮಾತ್ರ ನೀಡಬಹುದು. ಪರೀಕ್ಷೆಯ ನಂತರ ಅಭ್ಯರ್ಥಿಯು ಅಸಾಮರ್ಥ್ಯದ ಪ್ರಮಾಣಪತ್ರವನ್ನು ಪಡೆಯಲು ಅರ್ಹನಲ್ಲವೆಂದು ಅಧಿಕಾರಿಗಳು ಭಾವಿಸಿದರೆ, ಹಾಗೆ ನಿರಾಕರಿಸಲು ಇರುವ ಕಾರಣಗಳನ್ನು ವೈದ್ಯಕೀಯ ಅಧಿಕಾರಿಯು ಅಭ್ಯರ್ಥಿಗೆ ವಿವರಿಸಬೇಕು ಮತ್ತು ಆ ಕಾರಣಗಳನ್ನು ಬರವಣಿಗೆಯಲ್ಲಿ ನೀಡಬೇಕು.

ಒಂದು ವೇಳೆ, ಅರ್ಜಿಯು ತಿರಸ್ಕೃತವಾದರೆ, ಪ್ರಮಾಣಪತ್ರವನ್ನು ನೀಡಬೇಕಾಗುವ ತೀರ್ಮಾನವನ್ನು ಅಥವಾ ತಿರಸ್ಕರಿಸುವ ತೀರ್ಮಾನವನ್ನು ಪುನರ್ಪರಿಶೀಲಿಸಬೇಕಾದ ಮೂರನೆಯ ಹೆಜ್ಜೆಯ ಆವಶ್ಯಕತೆ ಬರುತ್ತದೆ. ಅಂತಹ ಪ್ರಕರಣಗಳಲ್ಲಿ, ತನಗೆ ದೊರಕಬೇಕಾಗಿದ್ದ ಪ್ರಮಾಣಪತ್ರವು ದೊರಕದಿರುವ ಬಗ್ಗೆ ಅಥವಾ ದೊರಕಿರುವ ಪ್ರಮಾಣಪತ್ರವು ಸರಿಯಿಲ್ಲವೆಂಬುದರ ಬಗ್ಗೆ ದೂರನ್ನು ವ್ಯಕ್ತಿಯು ಸಂಬಂಧಪಟ್ಟ ವೈದ್ಯಕೀಯ ಅಧಿಕಾರಿಗೆ ಸಲ್ಲಿಬಹುದು. ಅಭ್ಯರ್ಥಿಯು ತನ್ನ ಪುನರ್ಪರಿಶೀಲನಾ ಅರ್ಜಿಯನ್ನು ಸಲ್ಲಿಸಲಾಗದಂತಹ ಅಪ್ರಾಪ್ತ ವಯಸ್ಸಿನವನಾಗಿದ್ದರೆ, ಅಥವಾ ದೈಹಿಕವಾಗಿ ಅಥವಾ ಬೌದ್ಧಿಕವಾಗಿ ಅಸಮರ್ಥನಾಗಿದ್ದರೆ, ಅಂತಹ ವ್ಯಕ್ತಿಯ ಪರವಾಗಿ ಆತನ ಕಾನೂನುಬದ್ಧ ಪೋಷಕರು ಅರ್ಜಿಯನ್ನು ಸಲ್ಲಿಸಬಹುದು ಎಂಬ ಅವಕಾಶವನ್ನು ಈ ಪುನರ್ಪರಿಶೀಲನಾ ಪ್ರಕ್ರಿಯೆಯಲ್ಲಿ ಅಳವಡಿಸಲಾಗಿದೆ.





### ಅಸಾಮರ್ಥ್ಯವನ್ನು ಹೊಂದಿರುವವರು ಎಂದು ಯಾರು ನಿರ್ಣಯಿಸುತ್ತಾರೆ?

ಅಸಾಮರ್ಥ್ಯದ ಪ್ರಮಾಣಪತ್ರವನ್ನು ನೀಡುವ ಅಧಿಕಾರವನ್ನು ಆಯಾ ರಾಜ್ಯದ ಅಥವಾ ಜಿಲ್ಲಾ ಮಟ್ಟದಲ್ಲಿ ರಚಿಸಲ್ಪಟ್ಟಿರುವ ವೈದ್ಯಕೀಯ ಮಂಡಲಿಯು ಹೊಂದಿರುತ್ತದೆ. ಈ ಮಂಡಲಿಯು ಆಯಾ ಜಿಲ್ಲೆಯ ಮುಖ್ಯ ವೈದ್ಯಕೀಯ ಅಧಿಕಾರಿ/ವೈದ್ಯಕೀಯ ಉಪ–ವಿಭಾಗಾಧಿಕಾರಿ ಹಾಗೂ ಈ ಕ್ಷೇತ್ರದಲ್ಲಿನ ಮತ್ತೊಬ್ಬ ತಜ್ಞರನ್ನು ಒಳಗೊಂಡಿರುತ್ತದೆ. ಉದಾಹರಣೆಗೆ: ನೇತ್ರ ಸಂಬಂಧಿ ವಿಷಯಗಳಲ್ಲಿ ನೇತ್ರಶಸ್ತ್ರಕ್ರಿಯಾ ವೈದ್ಯರು, ಕಿವಿ, ಮೂಗು ಮತ್ತು ಗಂಟಲುಗಳ ಸಮಸ್ಯೆಗೆ ಸಂಬಂಧಿಸಿದ ಹಾಗೆ ಆ ವಿಭಾಗದ ಶಸ್ತ್ರಕ್ರಿಯಾತಜ್ಞರು, ವಾಕ್ ಮತ್ತು ಶ್ರವಣ ಸಮಸ್ಯೆಗಳಿರುವಂತಹ ಸಂದರ್ಭಗಳಲ್ಲಿ ಅದಕ್ಕೆ ಸಂಬಂಧಪಟ್ಟ ತಜ್ಞರು, ಹಾಗೆಯೇ ಆಯಾ ಸಂದರ್ಭಗಳಿಗೆ ತಕ್ಕ ಹಾಗೆ, ಮೂಳೆ ಮತ್ತು ಕೀಲು ತಜ್ಞರು, ಮನಃಶಾಸ್ತ್ರಜ್ಞರು, ಮಾನಸಿಕ ಔಷಧತಜ್ಞರು, ಮಾನಸಿಕವಾಗಿ ಕುಂಠಿತವಾದ ಮಕ್ಕಳಿಗೆ ಶಿಕ್ಷಣವನ್ನು ನೀಡುವಂತಹ ಶಿಕ್ಷಕರು, ಮೊದಲಾದವರು ಆಯಾ ಸಂದರ್ಭಗಳಿಗೆ ತಕ್ಕಂತೆ ಈ ಮಂಡಲಿಯಲ್ಲಿ ಇರುತ್ತಾರೆ.

### ಸವಾಲುಗಳು

ತನ್ನಲ್ಲಿರುವ ಅಸಾಮರ್ಥ್ಯದ ವ್ಯಕ್ತಿಗಳನ್ನು ಗುರುತಿಸಿ, ಅವರನ್ನು ಗೌರವವಾಗಿ ನಡೆಸಿಕೊಂಡು, ಅವರು ತಮ್ಮ ಜೀವನವನ್ನು ಸಾಧ್ಯವಾದಷ್ಟು ಗೌರವಯುತವಾಗಿ ನಡೆಸಿಕೊಂಡು ಹೋಗುವಂತಹ ಅವಕಾಶವನ್ನು ಕಲ್ಪಿಸುವ, ಮಾನವ ಹಕ್ಕುಗಳನ್ನು ಅವರಿಗೆ ಒದಗಿಸುವಂತಹ ಕಾಳಜಿಯನ್ನು ಹೊಂದಿರುವುದು ಪ್ರತಿಯೊಂದು ಸಮಾಜದ



ಕರ್ತವ್ಯವಾಗಿರುತ್ತದೆ. ಪ್ರತಿಯೊಂದು ದೇಶವು ತನ್ನ ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ಈ ವಿಷಯದಲ್ಲಿ ತನ್ನ ಕರ್ತವ್ಯವನ್ನು ನಿಭಾಯಿಸಬೇಕು. ಇಂತಹ ವ್ಯಕ್ತಿಗಳು ಇರುವ ಪರಿಸರವು ಒಂದೇ ರೀತಿಯಲ್ಲಿ ಇರದೆ ಬೇರೆ ಬೇರೆ ಸಮಾಜಗಳಲ್ಲಿ ಬೇರೆ ಬೇರೆಯ ರೀತಿಯಲ್ಲಿ, ಮತ್ತು ಬೇರೆ ಬೇರೆಯ ಮಟ್ಟಗಳಲ್ಲಿ ಇರುತ್ತವೆ. ಈ ವ್ಯತ್ಯಾಸಗಳಿಗೆ ಆಯಾ ದೇಶ ಅಥವಾ ಸಮಾಜದಲ್ಲಿನ ಸ್ಥಳೀಯ ಹಾಗೂ ಸಾಂಸ್ಕೃತಿಕ ಪರಿಸರಗಳು ಕಾರಣವಾಗಿರುತ್ತವೆ. (ಉದಾಹರಣೆಗೆ: ದೈಹಿಕ ಅಸಾಮರ್ಥ್ಯವುಳ್ಳವರಿಗೆ ನಗರಗಳಲ್ಲಿನ ಪರಿಸ್ಥಿತಿಯು ಗ್ರಾಮಾಂತರ ಪ್ರದೇಶಗಳಲ್ಲಿನ ಪರಿಸ್ಥಿತಿಗಿಂತ ತೀರ ಭಿನ್ನವಾಗಿರುತ್ತವೆ). ಅಲ್ಲದೆ, ಅಂತಹ ವ್ಯಕ್ತಿಗಳಿಗೆ ಅಗತ್ಯವಾದ ನೆರವನ್ನು ನೀಡಲು ಬೇಕಾದ ಸಂಪನ್ಮೂಲಗಳು ಬೇರೆ ಬೇರೆಯ ಸಮಾಜಗಳಲ್ಲಿ ಬೇರೆ ಬೇರೆಯ ಮಟ್ಟದಲ್ಲಿರುತ್ತವೆ.

ಅಸಾಮರ್ಥ್ಯದ ಪ್ರಮಾಣಪತ್ರವನ್ನು ನೀಡಿದ ನಂತರ, ಆ ವ್ಯಕ್ತಿಯ ಖಾಸಗಿತನವನ್ನು ಯಾವುದೇ ರೀತಿಯಲ್ಲಿಯೂ ಉಲ್ಲಂಘಿಸದಂತೆ ನೋಡಿಕೊಳ್ಳಬೇಕಾದುದು ಅತ್ಯಗತ್ಯ ಹಾಗೂ ಅಂತಹ ಯಾವ ಕೃತ್ಯವನ್ನೂ ಎಸಗಬಾರದು.

ಪ್ರಕೃತ, ದೈಹಿಕ/ಮಾನಸಿಕ ಅಸಾಮರ್ಥ್ಯವುಳ್ಳ ವ್ಯಕ್ತಿಗಳು ಸರ್ಕಾರದಿಂದ ದೊರೆಯುವ ನೆರವನ್ನು ಅಥವಾ ಸೌಲಭ್ಯವನ್ನು ಪಡೆದುಕೊಳ್ಳಲು ಅಸಾಮರ್ಥ್ಯದ ಪ್ರಮಾಣಪತ್ರವನ್ನು ಸರಕಾರದ ಅಥವಾ ಖಾಸಗಿ ಸಂಸ್ಥೆಗಳಿಗೆ ಸಲ್ಲಿಸಬೇಕಾಗುತ್ತದೆ. ಇದೇ ಪ್ರಮಾಣಪತ್ರವನ್ನು, ಕೆಲವು ಸೌಲಭ್ಯಗಳನ್ನು ಪಡೆದುಕೊಳ್ಳಲು ಆರೋಗ್ಯಕ್ಕೆ ಸಂಬಂಧಿಸಿರದ ಹಲವು ವೃತ್ತಿನಿರತರಿಗೂ ಸಲ್ಲಿಸಬೇಕಾಗುತ್ತದೆ. ಉದಾಹರಣೆಗೆ, ರಿಯಾಯತಿ ದರದಲ್ಲಿ ಪ್ರಯಾಣದ ಚೀಟಿಯನ್ನು ಅಥವಾ ಮಾಸಿಕ ಪಾಸುಗಳನ್ನು ಪಡೆಯಲು ರೈಲ್ವೆಯ ಕೌಂಟರುಗಳಲ್ಲಿ ಈ ಪ್ರಮಾಣಪತ್ರವನ್ನು ನೀಡಬೇಕಾಗುತ್ತದೆ. ವ್ಯಕ್ತಿಗಳ ಅಸಾಮರ್ಥ್ಯವನ್ನು ಪ್ರತಿಹಂತದಲ್ಲಿಯೂ ದಾಖಲಿಸಿಕೊಳ್ಳಬೇಕಾಗುವ ಅಂತಹ ಸಂದರ್ಭಗಳಲ್ಲಿ ಯಾವ ನಿಯಮ ಅಥವಾ ನೈತಿಕ ಹೊಣೆಯೂ ಇಲ್ಲದಿರುವ ವ್ಯಕ್ತಿಗಳು ಅಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಯ ಆರೋಗ್ಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೋಡುವ ಅವಕಾಶಗಳಿರುತ್ತವೆ. ಇಂತಹ ಸಂದರ್ಭಗಳು ಅಸಾಮರ್ಥ್ಯವನ್ನು ಹೊಂದಿರುವ ವ್ಯಕ್ತಿಗಳಿಗೆ ಮುಜುಗರ ಉಂಟುಮಾಡಬಹುದು.

ದೈಹಿಕ / ಮಾನಸಿಕ ಅಸಾಮರ್ಥ್ಯವನ್ನುಳ್ಳ ವ್ಯಕ್ತಿಗಳ ಹಾದಿಯಲ್ಲಿ ಬರುವ ಅಪಾರವಾದ ಅಡೆತಡೆಗಳಲ್ಲಿ ಕೆಲವನ್ನು ಇಲ್ಲಿ ನೀಡಲಾಗಿದೆ :

* ಆರೋಗ್ಯದ ವಿಷಯದ ಖಾಸಗಿತನದ ಮೇಲಾಗುವ ಪರಿಣಾಮ. * ವ್ಯಕ್ತಿನಿಷ್ಠವಾದ ರೋಗ ನಿದಾನ. * ಶೇ. 40 ಅಸಾಮರ್ಥ್ಯ ಎಂಬಲ್ಲಿ ಇರುವ ಸಂದಿಗ್ಧತೆ. * ಪ್ರಮಾಣಪತ್ರವನ್ನು ಪಡೆಯುವಲ್ಲಿ ಅನುಸರಿಸಬೇಕಾದ ಉದ್ದುದ್ದದ ಪ್ರಕ್ರಿಯೆಗಳು. * ಪ್ರಾಮಾಣಿತ ಪ್ರಕ್ರಿಯೆಗಳಿಲ್ಲದಿರುವುದು. * ಅವರನ್ನು ನೋಡುವ ದೃಷ್ಟಿ. * ಅವರಿಗೆ ಹಣೆಪಟ್ಟಿಯನ್ನು ಹಚ್ಚುವುದು. * ಅವರ ಸಮಾನಾವಕಾಶಗಳ ಹಕ್ಕನ್ನು ಉಲ್ಲಂಘಿಸುವುದು.

**ಲಾಭಗಳು**

ಪ್ರತಿಯೊಂದು ನಾಣ್ಯಕ್ಕೂ ಎರಡು ಮುಖಗಳಿರುತ್ತವೆ. ಅವೆರಡಕ್ಕೂ ತಮ್ಮದೇ ಆದ ಮೌಲ್ಯವಿರುತ್ತವೆ. ‘ಅಸಾಮರ್ಥ್ಯದ ಪ್ರಮಾಣಪತ್ರ’ವನ್ನು ಪಡೆಯುವ ಮನೋಭಾವವನ್ನು ಕೆಲವರು ಇಷ್ಟಪಡದೆ ಹೋಗಬಹುದು, ಅದೇ ವೇಳೆ ಹಲವರು ಅದರ ಸಹಾಯದಿಂದಲೇ ಬದುಕುತ್ತಿದ್ದಾರೆ. ಈ ಪ್ರಮಾಣ ಪತ್ರವು ಕೇವಲ ಒಂದು ದಾಖಲೆಯಾಗದೆ, ಆ ವ್ಯಕ್ತಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಕಾನೂನುಗಳ ಪ್ರಕಾರ ನೀಡುವ ಕೆಲವೊಂದು ಸೌಲಭ್ಯ, ನೆರವುಗಳನ್ನು ಪಡೆಯಲು ಮತ್ತು ತನಗಿರುವ ಹಕ್ಕುಗಳನ್ನು ಚಲಾಯಿಸಲು ಬಹುಮುಖ್ಯವಾದ ಸಾಧನವಾಗಿರುತ್ತದೆ. ಅವುಗಳೆಂದರೆ –

* ಸರ್ಕಾರಿ ಹಾಗೂ ಖಾಸಗಿ ಕ್ಷೇತ್ರಗಳಲ್ಲಿ ವಿಶೇಷ ಸೌಲಭ್ಯಗಳು. * ರೈಲ್ವೆ ಪ್ರಯಾಣದರಗಳಲ್ಲಿ ಶೇ 75ರವರೆಗಿನ ರಿಯಾಯ್ತಿ * ವಿಮಾನಯಾನದ ದರಗಳಲ್ಲಿ ಶೇ 50ರವರೆಗಿನ ರಿಯಾಯ್ತಿ. * ಆದಾಯ ಕರ ಪಾವತಿಯಲ್ಲಿ 40,000 ರೂಗಳವರೆಗಿನ ರಿಯಾಯತಿ * ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳಿಂದ ಆರ್ಥಿಕ ಸಹಾಯ. * 60 ವರ್ಷ ಮೀರಿದ ವ್ಯಕ್ತಿಗಳಿಗೆ ಆರ್ಥಿಕ ಸಹಾಯ. * ಕಡಿಮೆ ಆದಾಯವಿರುವ ಕುಟುಂಬಗಳಿಗೆ ಆರ್ಥಿಕ ಸಹಾಯ * ಕುಟುಂಬದ ಆಧಾರವಾಗಿರುವಂತಹ ವ್ಯಕ್ತಿಯು ಮೃತಪಟ್ಟರೆ ಅಂತಹ ಕುಟುಂಬಗಳಿಗೆ ಕೌಟುಂಬಿಕ ನೆಲೆಯಲ್ಲಿ ಸೌಲಭ್ಯಗಳು. * ಕುಷ್ಠರೋಗಿಗಳಿಗೆ ಧನಸಹಾಯ * ಸರ್ಕಾರಿ ಯೋಜನೆಗಳ ಸೌಲಭ್ಯಗಳು.

**ಬದಲಾವಣೆಯ ಹೊಸ್ತಿಲಿನಲ್ಲಿ**

ದೈಹಿಕ ಅಥವಾ ಮಾನಸಿಕ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಬಗ್ಗೆ ಯೋಚಿಸುವ ಮತ್ತು ಅವರಿಗೆ ಸಮಾಜದಲ್ಲಿ ಅವಕಾಶಗಳನ್ನು ನೀಡುವ ನಿರ್ಧಾರಕ್ಕೆ ಕೊನೆಗೂ ನಮ್ಮ ದೇಶವು ಬಂದಿದೆ. 1955ರ ‘ವೈಯಕ್ತಿಕ ಅಸಾಮರ್ಥ್ಯಗಳ (ಸಮಾನಾವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ರಕ್ಷಣೆ) ಅಧಿನಿಯಮವು ಅಂಗೀಕೃತವಾದ ಎರಡು ದಶಕಗಳ ನಂತರ ಅದಕ್ಕೆ ಸಂಬಂಧಪಟ್ಟ ನೀತಿನಿಯಮಗಳನ್ನು ಅಂತಿಮಗೊಳಿಸಲಾಗಿದೆ. ಈ ವ್ಯಕ್ತಿಗಳು ತಮ್ಮ ಸಾಮರ್ಥ್ಯವನ್ನು ಸಂಪೂರ್ಣವಾಗಿ ಬಳಸಿಕೊಳ್ಳುವ ಮತ್ತು ಇತರರಿಗೆ ಸಮಾನವಾಗಿ ಹಾಗೂ ಅವರೊಡನೆ ಸಂಪೂರ್ಣವಾಗಿ ಸಮಾಜದಲ್ಲಿ ಭಾಗವಹಿಸುವಂತಹ ವಾತಾವರಣವನ್ನು ನಿರ್ಮಿಸುವಲ್ಲಿ ಇದು ಸಹಾಯಕವಾಗುತ್ತದೆ.

‘ಅಸಾಮರ್ಥ್ಯ’ವೆನ್ನುವುದು ಒಂದು ಮಾನಸಿಕ ಸ್ಥಿತಿ ಮಾತ್ರ ಎನ್ನುವುದು ಹಲವು ಅಧ್ಯಯನಗಳಿಂದ ದೃಢಪಟ್ಟಿದೆ. ಸಮಸ್ಯೆಯಾಗಿರುವುದು ‘ಅಸಾಮರ್ಥ್ಯ’ವುಳ್ಳ ವ್ಯಕ್ತಿಗಳ ‘ಅಸಾಮರ್ಥ್ಯ’ಕ್ಕಿಂತ ಹೆಚ್ಚಾಗಿ ಆ ವ್ಯಕ್ತಿಗಳ ಹಾದಿಯಲ್ಲಿ ಇತರರು ಸೃಷ್ಟಿಸುವ ಅಡೆತಡೆಗಳೇ.

ಎಲ್ಲರನ್ನೂ ಒಳಗೊಳ್ಳುವ ಮತ್ತು ಸುಗಮ್ಯವಾಗಿರುವ ಭಾರತವು ಈಗ ಮೂಡುತ್ತಿದೆ. ❑

# ಲಭ್ಯತೆ – ನಾವು ಕಲ್ಪಿಸಬೇಕಾದ ದಾರಿ



* ಡಾ. ಗೌರವ್ ರಹೇಜಾ

ಒಂದು ದೇಶದ ಪ್ರಗತಿಯನ್ನು ಅಳೆಯಬೇಕಾದ ಮಾನದಂಡಗಳಲ್ಲಿ ಒಂದು – ಅದು ತನ್ನ ಸಮುದಾಯಗಳ ವಿಶೇಷಚೇತನರನ್ನು ಹೇಗೆ ನಡೆಸಿಕೊಳ್ಳುತ್ತದೆಂದು. ಇಡೀ ವಿಶ್ವದ ಮೂರನೇ ಒಂದು ಭಾಗ ವಿಶೇಷಚೇತನರು ಭಾರತದಲ್ಲಿದ್ದಾರೆ. ಅದೇ ರೀತಿ, ವಿಶ್ವದ ಅಂಧರಲ್ಲಿ ಅರ್ಧದಷ್ಟು ಜನ ಭಾರತದಲ್ಲಿದ್ದಾರೆ (ಬಲರಾಮ 2001). ಸ್ಥಿತಿ ಹೀಗಿರುವಾಗ, ನಾವು ವಿಶೇಷಚೇತನರನ್ನು ನೋಡುವ ರೀತಿ ಬರಿಯ ಅನುಕಂಪಾಧಾರಿತವಾಗದೆ, ಅವರೆಲ್ಲರನ್ನೂ ನಮ್ಮೊಂದಿಗೆ ಒಟ್ಟಿಗೇ ಇರುವ ಒಂದು ಸಾಮಾಜಿಕ ಮಾದರಿಯಾಗಿ ನೋಡಬೇಕಾಗಿದೆ. ಮುಂದುವರೆದ ದೇಶ ಎಂಬ ಹಣೆಪಟ್ಟಿ ದೊರಕಿಸಿಕೊಳ್ಳುವ ರೇಖೆಯತ್ತ ಓಡುತ್ತಿರುವ ಭಾರತಕ್ಕೆ, ಮೂಲಭೂತ ಸೌಕರ್ಯ ಮತ್ತು ಮಾಹಿತಿಗಳನ್ನು ಒಳಗೊಂಡಂತೆ ಒಂದು ಮಾದರಿಯನ್ನು ನಾವು ಹಾಕಿಕೊಳ್ಳುವುದು ತುಂಬಾ ಮುಖ್ಯವಾಗಿದೆ.

ವಿಶೇಷಚೇತನರ ಬಗ್ಗೆ ಚರ್ಚೆ, ಅವರ ಮೂಲಭೂತ ಅಗತ್ಯಗಳೇನು ಎನ್ನುವುದರ ಮೇಲೆ ಗಮನ ಹರಿಸಿ ಮುಂದುವರೆದಿದೆಯೇ ಹೊರತು ಮಾನವರ ಘನತೆಯನ್ನು ಸಾಂಸ್ಕೃತಿಕ, ಆರ್ಥಿಕ ಮತ್ತು ಸಾಮಾಜಿಕ ಸ್ತರಗಳಲ್ಲಿ ನೋಡುವುದರಲ್ಲಿ ಇಲ್ಲ.

‘ವಿಶೇಷಚೇತನ’ ಎನ್ನುವ ಪದ ನಮ್ಮ ನಿಮ್ಮೆಲ್ಲರಲ್ಲಿರುವ ವ್ಯತ್ಯಾಸಗಳನ್ನು ಪ್ರಕಾಶಿಸುವುದರ ಬದಲಾಗಿ, ಎಲ್ಲ ಜೀವಿಗಳಲ್ಲಿರುವ ವೈವಿಧ್ಯತೆಯನ್ನು ಸಂಭ್ರಮಿಸುವ ಹಾಗಾಗಬೇಕು ಮತ್ತು ನಾವೆಲ್ಲರೂ ಇರುವ ಈ ಜಗತ್ತು ಮತ್ತು ನಾವು ನಿರ್ಮಿಸಿರುವ ವಾತಾವರಣ, ಈ ವೈವಿಧ್ಯತೆಯನ್ನು ಹೇಗೆ ಒಟ್ಟಿಗೆ ತರಬಹುದು ಎಂಬುದಕ್ಕೆ ಒತ್ತು ಕೊಟ್ಟು, ತಮ್ಮನ್ನು ಕಡೆಗಣಿಸಲಾಗಿದೆ ಎಂಬ ಭಾವ ವಿಶೇಷಚೇತನರಲ್ಲಿ ಬರದಂತೆ ನೋಡಿಕೊಳ್ಳಬೇಕು. ರವೀಂದ್ರನಾಥ ಟ್ಯಾಗೋರರು ಹೇಳಿದಂತೆ – ‘ಎಲ್ಲ ವ್ಯತ್ಯಾಸಗಳನ್ನು ತೊಡೆದು ಹಾಕುವುದು ನಮ್ಮ ಮುಂದಿರುವ ಸಮಸ್ಯೆಯಲ್ಲ. ಎಲ್ಲ ವ್ಯತ್ಯಾಸಗಳನ್ನು ಒಂದುಗೂಡಿಸುವುದು ಹೇಗೆ ಎಂಬುದೇ ದೊಡ್ಡ ಸಮಸ್ಯೆ’

ಗುರುದೇವ ರವೀಂದ್ರರು ವ್ಯಕ್ತಪಡಿಸುವ ಈ ಭಾವ, ‘ಲಭ್ಯತೆ’, ಎಂಬುದು ಭಾವನೆಯ ಸ್ತರದಿಂದ, ನಮ್ಮ ದೈನಂದಿನ ಆಗು–ಹೋಗುಗಳಿಗೆ ಹೇಗೆ ಜಾರಿಗೆ ತರಬಹುದು ಎಂಬುದಕ್ಕೆ ದಿಕ್ಸೂಚಿಯಾಗಬಹುದು. ಇದು ಒಬ್ಬ ವಿಶೇಷಚೇತನನು, ಇರುವ ಮೂಲಸೌಕರ್ಯವನ್ನು ಹೇಗೆ ಉಪಯೋಗಿಸಿಕೊಳ್ಳಬಲ್ಲನು ಎನ್ನುವ ಸವಾಲಿಗೆ ಬದಲಾಗಿ, ಅವನನ್ನೂ ಒಳಗೊಂಡಂತೆ ಎಲ್ಲರಿಗೂ ಎಟುಕಬಲ್ಲ ಸಾರ್ವಜನಿಕ ಮೂಲಸೌಕರ್ಯಗಳನ್ನು ಹೇಗೆ ಕಟ್ಟುವುದು ಎನ್ನುವುದರ ಬಗ್ಗೆ ನಮ್ಮನು ಯೋಚಿಸುವಂತೆ ಮಾಡುತ್ತದೆ. ಇದು ನಮ್ಮ ಸಂಶೋಧನಾ ಪ್ರೇರಿತವಾದ ಯೋಜನೆಗಳು, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ‘ಲಭ್ಯತೆ’ಯನ್ನು ಹೇಗೆ ಉತ್ತಮಗೊಳಿಸಬೇಕು ಎನ್ನುವುದರಕಡೆ ನಮ್ಮ ದೃಷ್ಟಿಯನ್ನು ಹಾಯಿಸಲು ಅನುವು ಮಾಡಿಕೊಡಬೇಕು. ಸದ್ಯದ ಭಾರತದಲ್ಲಿ, ದೆಹಲಿ ಮೆಟ್ರೊ ಯೋಜನೆಯಲ್ಲಿ ಈ

> ಭಾರತ
> ಅಭಿವೃದ್ಧಿಯ ಪಥದಲ್ಲಿ ನಡೆದು,
> ನಿಜಕ್ಕೂ
> ತನ್ನ ಎಲ್ಲ ನಾಗರಿಕರಿಗೆ
> ಮೂಲ ಸೌಕರ್ಯಗಳನ್ನು
> ಒದಗಿಸಬೇಕಾಗಿರುವಾಗ,
> ಅದು ವಿಶೇಷಚೇತನರನ್ನೂ
> ಒಳಗೊಂಡತೆ
> ಎಲ್ಲರ ಅನುಕೂಲಕ್ಕೂ
> ಆಗಿ ಬರಬೇಕು.
> ‘ಎಲ್ಲರಿಗೂ ಲಭ್ಯತೆ’
> ಎನ್ನುವ
> ಆಶಯ ಹೊಂದಿರುವ
> ವಿನ್ಯಾಸ
> ಎಲ್ಲ ಹೊಸ ಯೋಜನೆಗಳ
> ಮೂಲ ಮಂತ್ರವಾಗಬೇಕು.

* ಸಹಪ್ರಾಧ್ಯಾಪಕರು, “ಶಿಲ್ಪಶಾಸ್ತ್ರ ಮತ್ತು ಯೋಜನಾ ವಿಭಾಗ’ ಐ.ಐ.ಟಿ. ರೂರ್ಕಿ. Emai : gr.iitroorkee@gmail.com

ನಿಟ್ಟಿನಲ್ಲಿ ಹಾಕಿಕೊಂಡ ಯೋಜನೆಗಳು ನಿಜಕ್ಕೂ ಮೆಚ್ಚುವಂತಹುದು. ಇದು 'ಲಭ್ಯತೆ' ಯನ್ನು ಬರಿಯ ಮೂಲ ಸೌಕರ್ಯದ ಮಟ್ಟಿಗೆ ಮಾತ್ರ ಸೀಮಿತಗೊಳಿಸದೆ, ಮಾಹಿತಿ ಮತ್ತು ಇತರ ಸೇವೆಗಳೂ ವಿಶೇಷಚೇತನರಿಗೆ ಸುಲಭವಾಗಿ ಸಿಗುವಂತೆ ನೋಡಿಕೊಂಡಿತು.

ಮಾನವರಲ್ಲಿ ಸಹಜವಾಗಿರುವ, ನಮ್ಮದೇಹದ ವ್ಯತ್ಯಾಸಗಳು ಆರ್ಥಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಘನತೆಗೆ ಕುಂದು ಬರದಂತೆ ಮತ್ತು ಪೂರಕವಾಗುವಂತೆ ವ್ಯವಸ್ಥೆ ನೋಡಿಕೊಂಡಿದೆ. ಆದರೆ ಇದರ ಬಗ್ಗೆ ನಿರಂತರ ಕಲಿಕೆ ಇರಬೇಕು ಮತ್ತು ಕಾಲ ಕಾಲಕ್ಕೆ ತಕ್ಕಂತೆ ಬದಲಾಯಿಸುತ್ತಾ ಹೋಗುವ ಸಾಧ್ಯತೆಗಳನ್ನು ಒಳಗೊಂಡಿರಬೇಕು.

**ಲಭ್ಯತೆ ಅರಿಯುವ ರೀತಿ ಮತ್ತು – ಮಹತ್ವ**

ಲಭ್ಯತೆ – ಈ ಪದವನ್ನು ಬೇರೆ ಬೇರೆ ಕೋನಗಳಿಂದ ಅರ್ಥೈಸುವುದರ ಮೊದಲು, ನಾವೆಲ್ಲರೂ ನಮ್ಮ ನಮ್ಮ ಮನಸ್ಸುಗಳನ್ನು, ಸಾಮಾಜಿಕ ನಡವಳಿಕೆಗಳನ್ನು ಮತ್ತು ನಮ್ಮ ಭಾವನೆಗಳನ್ನು ಸೂಕ್ಷ್ಮಗೊಳಿಸಿಕೊಂಡರೆ ಸಾಕು ಎನಿಸುತ್ತದೆ.

ಲಭ್ಯತೆ – ಎನ್ನುವುದು ಬರಿಯ ಭೌತಿಕ ವಸ್ತುಗಳಿಗೆ ಸಂಬಂಧಪಟ್ಟಿದ್ದಲ್ಲ. ಅದು ನಮ್ಮ ನಮ್ಮಅರಿವಿನಲ್ಲೂ – ಸಾಮಾಜಿಕವೂ ಮತ್ತು ಸಾಂಸ್ಥಿಕವೂ ಆಗಿರಬೇಕಾಗಿರುತ್ತದೆ. ಇದನ್ನೆ ಸರಳವಾಗಿ ಹೇಳಬೇಕಾದರೆ – ನಾವುಗಳು ದಿನ ನಿತ್ಯ ಮಾಡುವ ವ್ಯವಹಾರಗಳನ್ನು, (ಒಂದು ಕಡೆಯಿಂದ ಇನ್ನೊಂದೆಡೆ ಚಲಿಸುವ, ಕೆಲಸ ಮಾಡುವುದನ್ನು ಒಳಗೊಂಡಂತೆ) ಬೇರೆಯವರ ಸಹಾಯ ಇಲ್ಲದೆ, ಮಾನವನ ಘನತೆಗೆ ಕುಂದು ಬರದಂತೆ ಮಾಡಬಹುದಾದರೆ, ಅದು ನಮ್ಮ ಆದರ್ಶವಾಗಬೇಕು. ಈ ಪ್ರಶ್ನೆಯನ್ನು ನಾವು ಹಾಕಿಕೊಂಡಾಗ, ಉತ್ತರ ಹೌದೆಂದಾದರೆ, ನಾವು ಪರಿಸರವನ್ನು 'ಎಲ್ಲರಿಗೂ ಲಭ್ಯ'



ವಾಗುವ ಹಾಗೆ ಮಾಡಿದ್ದೇವೆ ಎಂದರ್ಥ. ಇಲ್ಲವೆಂದರೆ, ಈ ಅಲಭ್ಯತೆಗೆ ಏನೇನು ಕಾರಣಗಳಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಹೋಗಬೇಕು. ಆಗ ಈ 'ಲಭ್ಯತೆ' ಎನ್ನುವುದು ನಮ್ಮ ಪರಿಸರ ಮತ್ತು ಮಾನವರ ಕ್ರಿಯೆಗಳ ನಡುವೆ ಇರುವ ಸಂಕೀರ್ಣ ಪ್ರಕ್ರಿಯೆ ಎಂದು ಗೋಚರವಾಗುತ್ತದೆ. ಈ ಅಧ್ಯಯನ, ನಮ್ಮ ಪರಿಸರ ನಮ್ಮ ಕ್ರಿಯೆಗಳಿಗೆ ಬಾಧೆ ತರದೇ ಇದ್ದರೆ, 'ಪೂರ್ಣ ಲಭ್ಯ'ವೆಂದು; ಕೆಲವು ಶರಾಗಳೊಡನೆ 'ಲಭ್ಯ' ವಾದರೆ, 'ಅಪೂರ್ಣ ಲಭ್ಯ'ವೆಂದೂ; ಪರಿಸರ 'ಲಭ್ಯತೆ'ಗೆ ಒಂದು ಚೂರೂ ಸಹಾಯ ಒದಗಿಸದಿದ್ದಲ್ಲಿ, 'ಅಲಭ್ಯ'ವೆಂದೂ ಕರೆಯಲಾಗುತ್ತದೆ.

ನಮ್ಮ ಸುತ್ತಮುತ್ತಲಿನ ಪರಿಸರ, ನಮ್ಮ ಸಾಮಾಜಿಕ, ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯದ ವಿಸ್ತೃತ ಅಂಗವೆಂದೇ ನಾವು ತಿಳಿಯಬೇಕು. ಮೂಲ ಸೌಕರ್ಯ ಇಲ್ಲದೇ ಇರುವುದು ಇದರ ಮುಖ್ಯ ಅಂಗವಾಗಿದ್ದರೂ, ನಾವು ವಿಶೇಷಚೇತನರೊಂದಿಗೆ ವ್ಯವಹರಿಸುವ ರೀತಿಯೂ, 'ಲಭ್ಯತೆ' ಯನ್ನು ನೋಡುವ ರೀತಿಯನ್ನು ನಿರ್ಧರಿಸುತ್ತದೆ. ವಿಶೇಷಚೇತನರನ್ನು ಮಾತ್ರ ಗಮನದಲ್ಲಿಟ್ಟು ಮಾಡುವ ಕೆಲಸ ಮಾತ್ರ 'ಲಭ್ಯತೆ'ಗೆ ನಾವು ಮಾಡುವ ಸೇವೆ ಎಂದಾದರೆ ಅದನ್ನು ಅಷ್ಟು ಸರಿಯಾದ ರೀತಿ ಎನ್ನಲಾಗುವುದಿಲ್ಲ.

'ಲಭ್ಯತೆ' ಎನ್ನುವುದು ಎಲ್ಲರಿಗೂ ಸಿಗಬೇಕಾದ ಮತ್ತು ಅದಕ್ಕೆ ಬೇಕಾದ ಬಂಡವಾಳ ಎಲ್ಲರ ಒಳಿತಿಗೆ ಎನ್ನುವ ಭಾವ ಇತ್ತೀಚಿನ ದಿನಗಳಲ್ಲಿ ವ್ಯಕ್ತವಾಗುತ್ತಿದೆ. 1995 ವಿಶೇಷಚೇತನರ ಕುರಿತಾದ ಕಾನೂನು, ಇದಕ್ಕೆ ಬೇಕಾದ ಭದ್ರ ತಳಹದಿಯನ್ನು ಹಾಕಿಕೊಟ್ಟಿದೆ. ಅದರೆ ಆ ಕಾನೂನಿನಲ್ಲಿ ಈ ರೀತಿ ಹೇಳುವ ಮೂಲಕ – 'ಸ್ಥಳೀಯ ಸರ್ಕಾರಗಳು ಮತ್ತು ಅಧಿಕಾರಿಗಳು, ತಮ್ಮಲ್ಲಿರುವ ಆರ್ಥಿಕ ಸಂಪನ್ಮೂಲ ಮತ್ತು ಅಪೇಕ್ಷೆಗಳಿಗೆ ತಕ್ಕಂತೆ, ವಿಶೇಷಚೇತನರಿಗೆ ಬೇಕಾದಂಥ ಮೆಟ್ಟಿಲೇಣಿ ಮುಂತಾದವುಗಳನ್ನು ಒದಗಿಸಬೇಕೆಂದು ನಿರ್ದಿಷ್ಟ ಪಡಿಸುವ ಮೂಲಕ' ಅದರ ಪರಿಧಿಯನ್ನು ಒಂದು ರೀತಿಯಲ್ಲಿ ಸೀಮಿತಗೊಳಿಸಿದೆ ಎಂದೇ ಹೇಳಬೇಕಾಗಿದೆ.

1995 ರ ಈ ಕಾನೂನಿನಲ್ಲಿ, ಶಿಕ್ಷಣ ಮತ್ತು ಸರ್ಕಾರಿ ನೌಕರಿಗಳಲ್ಲಿ 3 ಪ್ರತಿಶತ ಮೀಸಲಾತಿಯನ್ನು ವಿಶೇಷಚೇತನರಿಗೆ ಇರುವುದನ್ನೇ ಮುಖ್ಯವಾಗಿ ಕಾಣಿಸಿದಾಗ, ಈ



ಕಾನೂನಿನ ಒಂದು ಪಾರ್ಶ್ವವನ್ನೇ ನೋಡಿದ ಹಾಗಾಗುತ್ತದೆ. ಶೈಕ್ಷಣಿಕ ಮತ್ತು ಮೂಲಭೂತ ಸೌಕರ್ಯಗಳು ಎಲ್ಲರಿಗೂ ಸಿಗದಿದ್ದಾಗ, ವಿಶೇಷಚೇತನರು ಶಿಕ್ಷಿತರಾಗುವುದಾದರೂ ಹೇಗೆ? ನಾವು ಕೆಲಸ ಮಾಡುವ ಸ್ಥಳಗಳು, ಮೂಲ ಸೌಕರ್ಯದಿಂದ ವಂಚಿತವಾಗಿದಾಗ, ಎಲ್ಲರನ್ನೂ ಒಳಗೊಂಡ ಸಮಾನತೆಯನ್ನು ಸಾಧಿಸುವುದಾದರೂ ಹೇಗೆ?

1995 ರಿಂದ ಈಚೆಗೆ ಇಪ್ಪತ್ತು ವರ್ಷಗಳಾಗುತ್ತಾ ಬಂದಿರುವಾಗ ನಾವು ಈ ಕಾನೂನು ಎಲ್ಲರಿಗೂ ಸಮಾನತೆಯನ್ನು ದೊರಕಿಸುವಲ್ಲಿ ಗಮನ ಸೆಳೆಯುವ ಪ್ರಗತಿ ಸಾಧಿಸಿದೆಯೇ ಎಂಬುದರ ಕುರಿತಾಗಿ ಅಧ್ಯಯನ ನಡೆಯಬೇಕಾಗಿದೆ. ಇದನ್ನು ಪ್ರಮಾಣಿಸಿ ನೋಡಲು ಒಂದು 'ಲಭ್ಯತಾ ಸೂಚ್ಯಾಂಕ'ವನ್ನು ಬೆಳೆಸಬೇಕಾಗಿದೆ. ಇದು, ಸದ್ಯದ ಸ್ಥಿತಿಯನ್ನು ನಿಖರವಾಗಿ ತಿಳಿದುಕೊಳ್ಳಲು ಮತ್ತು ಭವಿಷ್ಯತ್ತನ್ನು ಅಳೆಯಲು ಸಹಾಯವಾಗಬಲ್ಲುದು. 'ಯಾವುದನ್ನು ಅಳೆಯುತ್ತೇವೆಯೋ, ಅದನ್ನು ಸಾಧಿಸಲಾಗುತ್ತದೆ' ಎನ್ನುವ ಜನಪ್ರಿಯ ಹೇಳಿಕೆಯಂತೆ, ಲಭ್ಯತೆಯನ್ನು ಅಳೆಯುವ ಸಮಯ ಹತ್ತಿರ ಬಂದಿದೆ. ಇದು ಮೂಲ ಸೌಕರ್ಯಕ್ಕಂತೂ ನಿಶ್ಚಿತವಾಗಿ ಬೇಕು. – ಸಾರ್ವಜನಿಕ ಕಟ್ಟಡಗಳು, ರಸ್ತೆಗಳು, ಸಂಸ್ಥೆಗಳು, ನಿಲ್ದಾಣಗಳು ಮತ್ತು ಇತರ ಖಾಸಗಿಯಲ್ಲದ ಸ್ಥಳಗಳು – ಇಂಥ ಸ್ಥಳಗಳನ್ನು 'ಲಭ್ಯತೆ ಸೂಚ್ಯಾಂಕ' ದಿಂದ ಪ್ರಮಾಣಿಸುವ ಕೆಲಸ ಪ್ರಾರಂಭವಾಗಬೇಕು. ಆದರೆ ಇದನ್ನು ಮಾಡುವುದಕ್ಕೆ ಪೂರ್ವಭಾವಿಯಾಗಿ, ಸಾಕಷ್ಟು ಸಂಶೋಧನೆ, ಅನುಸಂಧಾನಗಳು ನಡೆದು, ಆ ಸೂಚ್ಯಾಂಕವನ್ನು ಕಾರ್ಯಗತಗೊಳಿಸುವ ಬಗ್ಗೆ ಇಚ್ಛಾಶಕ್ತಿಯನ್ನೂ ತೋರಿಸಬೇಕು.

ಈ ಮುಂದಿನ ಕಾಣಿಸಿದ WINIT ಮಾದರಿ ಈ ಕೆಲಸಕ್ಕೆ ಸಹಾಯವಾಗಬಹುದು. ಒಟ್ಟು ಜನಸಂಖ್ಯೆಯಲ್ಲಿ, ಯಾವ ಹಂತದಲ್ಲಿ, ಯಾರನ್ನು ಒಳಗೊಳ್ಳಬೇಕು ಎನ್ನುವುದರ

ಬಗ್ಗೆ ಮತ್ತು ಮೂಲ ಸೌಕರ್ಯ ಮತ್ತು ಒಟ್ಟು ವ್ಯವಸ್ಥೆಯನ್ನು ಹೇಗೆ ಮಾಡಬೇಕೆಂಬುದ ಬಗ್ಗೆ ಒಂದು ದಿಕ್ಸೂಚಿಯನ್ನು ಒದಗಿಸಬಲ್ಲುದು. ಯಾವ ಸೌಕರ್ಯ, ಸ್ಥಳ ಅಥವಾ ವ್ಯವಸ್ಥೆ ಜನಸಮುದಾಯದ ಯಾವ ಭಾಗಕ್ಕೆ ಉಪಯೋಗಕ್ಕೆ ಬರಬಹುದು ಎಂಬುದನ್ನು ಈ ಮಾದರಿ ವಿವರಿಸಬಹುದು.


ಮೇಲಿನಿಂದ ಕೆಳಗಿನ ಹಂತದ ಯೋಜನೆಯಲ್ಲಿ ಹಾಗೂ ಕೆಳಸ್ತರದಿಂದ ಮೇಲಿನ ಹಂತದವರೆಗೆ ಮಾಡುವ ಯೋಜನೆ – ಈ ಎರಡು ವಿಧಿಗಳಲ್ಲಿಯೂ ಯಾರನ್ನು ಬಿಡಲಾಗುತ್ತದೆಂಬುದನ್ನು ಈ ಮಾದರಿ ತೋರಿಸಬಲ್ಲುದು. 'ಲಭ್ಯತೆ' ಯನ್ನು ಒಂದು ಹಂತದಿಂದ ಇನ್ನೊಂದು ಹಂತಕ್ಕೆ ಯಾವ ರೀತಿ ಲಂಘಿಸಬಹುದು ಎನ್ನುವುದಕ್ಕೂ ಈ ಮಾದರಿ ಒಂದು ಮಾರ್ಗದರ್ಶಿಯಾಗಬಹುದು. ಇದನ್ನು ಭಾರತದಲ್ಲಿ ಈಗ ಅಭಿವೃದ್ಧಿಪಡಿಸುತ್ತಿರುವ 'ಸ್ಮಾರ್ಟ್ ಸಿಟಿ'ಯ ಯೋಜನೆಗಳಲ್ಲೂ ಸಹಾಯಕವಾಗಬಲ್ಲದು.




'ಸ್ಮಾರ್ಟ್ ಸಿಟಿ' ಯ ಮೂಲಕ ಜನಸಂಖ್ಯೆಯ ಯಾವ ಭಾಗಕ್ಕೆ ಹೆಚ್ಚು ಉಪಕಾರವಾಗಿದೆ ಮತ್ತು ಹೇಗೆ? ವಿಕಲಚೇತನರೂ ಈ ಅಭಿವೃದ್ಧಿಯಲ್ಲಿ ಪಾಲ್ಗೊಂಡಿದ್ದಾರೆಯೇ ಮತ್ತು ಭಾಗಿಯಾಗಿದ್ದರೆ ಅವರಿಗೆ ಸಿಗುವ ಸೌಕರ್ಯಗಳಾವುವು – ಇಂಥ ಪ್ರಶ್ನೆಗಳನ್ನು ಕೇಳಬಹುದು. ನಮ್ಮ ನಗರಾಭಿವೃದ್ಧಿ ಪ್ರಕ್ರಿಯೆಗಳಲ್ಲಿ, 'ಲಭ್ಯತೆ' ಯನ್ನು ಮುಖ್ಯ ಕೇಂದ್ರವಾಗಿ ನೋಡುವುದು ತುಂಬಾ ಮುಖ್ಯವಾಗುತ್ತದೆ.

2050 ರವರೆಗೆ ನಡೆದ ಜನಸಂಖ್ಯಾ ಪ್ರಕ್ಷೇಪಗಳನ್ನು ಅಧ್ಯಯನ ಮಾಡಿದಾಗ, ನಮ್ಮ ಜನ ಸಂಖ್ಯೆಯಲ್ಲಿ ವೃದ್ಧರು, ತಾತ್ಕಾಲಿಕ ಅಂಗವೈಕಲ್ಯ ಹೊಂದಿದವರು, ಆಸ್ತಮಾ ಮತ್ತು ಹೃದಯ ರೋಗದಿಂದ ನರಳುವವರ

### WINIT ಮಾದರಿ




(ಆಧಾರ: ಕೀಟ್ಸ್‌ಎಸ್ ಮತ್ತು ಕ್ಲಾರ್ಕ್ ಸನ್ 2004)

ಸಂಖ್ಯೆ ಹೆಚ್ಚಾಗುವುದೆಂದು ತಿಳಿಯುತ್ತದೆ. ಈ ನಿಟ್ಟಿನಲ್ಲಿ, ಕೇಳಲೇಬೇಕಾದ ಪ್ರಶ್ನೆಯೆಂದರೆ – ಇವರೆಲ್ಲರನ್ನೂ ಒಳಗೊಂಡಂತೆ, ನಾವು ಮೂಲ ಸೌಕರ್ಯ ವ್ಯವಸ್ಥೆಯನ್ನು ಮಾಡುತ್ತಿದ್ದೇವೆಯೇ? ಇಲ್ಲವಾದಲ್ಲಿ 'ಅಲಭ್ಯತೆ'ಯಿಂದ ಉಂಟಾಗುವ ಮಾನಸಿಕ ಕ್ಷೋಭೆ ಮುಂತಾವುದುಗಳನ್ನು ಒಳಗೊಂಡಂತೆ, ಅದರ ಒಟ್ಟು ವೆಚ್ಚವನ್ನು ನಾವು ಅಂದಾಜು ಮಾಡಬೇಕಾಗುತ್ತದೆ. ಇಲ್ಲದಿದ್ದಲ್ಲಿ, ದೇಶದ ಒಂದು ಭಾಗದ ಜನರನ್ನು ಸೌಕರ್ಯಗಳಿಂದ ದೂರವಿರಿಸುವ ಮತ್ತು – ಅದರಿಂದ ಹೆಚ್ಚಿದ ಅವಲಂಬನೆ, ಮಾನವನ ಘನತೆಗೆ ಆಗುವ ಸಂಕೋಚನ ಮತ್ತು ಆರ್ಥಿಕ ಅಸಮಾನತೆ – ಇವುಗಳೆದರಿಂದ ಉಂಟಾಗುವ ಸಾಮಾಜಿಕ ವೆಚ್ಚವನ್ನು ಸಮಾಜವೇ ಒಂದಲ್ಲ ಒಂದುರೀತಿ ಭರಿಸಬೇಕಾಗುತ್ತದೆ. 'ಲಭ್ಯತೆ' ಯನ್ನು ಮೊದಲಿನಿಂದಲೇ ಸಿಗುವ ಹೇಗೆ ಮಾಡಿದರೆ, ಹೀಗಾಗುವುದನ್ನು ತಪ್ಪಿಸಬಹುದು.

### ಮುಂದಿನ ದಾರಿ

ನಮ್ಮ ದೇಶದ ಎಲ್ಲ ಪ್ರಜೆಗಳನ್ನು ಒಳಗೊಳ್ಳುತ್ತ, ಎಲ್ಲ ವಾರಸುದಾರರ ಗಂಭೀರ ಗಮನವನ್ನು 'ಲಭ್ಯತೆ' ಬೇಡುತ್ತದೆ. ಸಮುದಾಯ ಭವನಗಳು, ಸಾರ್ವಜನಿಕ ಸಂಸ್ಥೆಗಳು, ಸಾರಿಗೆ ವ್ಯವಸ್ಥೆ



ಮೊದಲಾದುವುಗಳೆಲ್ಲವನ್ನೂ ಸರ್ಕಾರ ಪ್ರಜೆಗಳ ಸಹಾಯದಿಂದ ಮಾಡಬೇಕಾಗಿದೆ. ಈ 'ಲಭ್ಯತೆ' ಎನ್ನುವುದು 'ಕನಿಷ್ಠ ಅನುಸರಣಾ ಪ್ರಮಾಣ'ವನ್ನಾಗಿ ತೆಗೆದುಕೊಳ್ಳದೆ, ನಾವು ಇದುವರೆಗೆ ನಡೆಸಿಕೊಂಡು ಬಂದಿದ್ದ, ಅಭ್ಯಾಸಗಳ ಎಲ್ಲೆಗಳನ್ನು ಮೀರುವ ಒಂದು ಪ್ರಯತ್ನ ಎಂದು ತಿಳಿದುಕೊಳ್ಳಬೇಕಾದರೆ, ನಗರ ವಿನ್ಯಾಸ ಯೋಜನೆಗಳ ಮೌಲ್ಯಮಾಪನದ ಒಂದು ಅವಿಭಾಜ್ಯ ಅಂಗ 'ಲಭ್ಯತೆ'ಯಾಗಬೇಕು. ಈ ನಿಟ್ಟಿನಲ್ಲಿ, ಅಭಿವೃದ್ಧಿ ಅಧಿಕಾರಿಗಳು, ಪುರಸಭಾ ನೌಕರರು ಮತ್ತು ಲೆಕ್ಕ ಪರಿಶೋಧಕರ ಸಾಮರ್ಥ್ಯವನ್ನು ಹೆಚ್ಚಿಸುವ ಕೆಲಸವೂ ಆಗಬೇಕಾಗಿದೆ. ನಮ್ಮ ಪ್ರಧಾನ ಮಂತ್ರಿಗಳು 2015 ರಲ್ಲಿ ಘೋಷಿಸಿದ ಲಭ್ಯ ಭಾರತ ಆಂದೋಲನ (ಸುಗಮ್ಯ ಭಾರತ ಆಂದೋಲನ) ಈ ನಿಟ್ಟಿನಲ್ಲಿ ಒಂದು ಒಳ್ಳೆಯ ಬೆಳವಣಿಗೆ. ಈ ಪ್ರಯತ್ನ, ವಿಶೇಷಚೇತನರಿಗಷ್ಟೇ ಅಲ್ಲದೆ, ಎಲ್ಲರಿಗೂ 'ಲಭ್ಯತೆ' ಒಂದು ಮೂಲಭೂತ ಉದ್ದೇಶ ಆಗಬೇಕು ಎನ್ನುವ ಸದಾಶಯ ಹೊಂದಿದೆ.

ಭಾರತ ಅಭಿವೃದ್ಧಿಯ ಪಥದಲ್ಲಿ ನಡೆದು, ನಿಜಕ್ಕೂ ತನ್ನ ಎಲ್ಲ ನಾಗರಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಬೇಕಾಗಿರುವಾಗ, ಅದು ವಿಶೇಷಚೇತನರನ್ನೂ ಒಳಗೊಂಡಂತೆ ಎಲ್ಲರ ಅನುಕೂಲಕ್ಕೂ ಆಗಿ ಬರಬೇಕು. 'ಎಲ್ಲರಿಗೂ ಲಭ್ಯತೆ' ಎನ್ನುವ ಆಶಯ ಹೊಂದಿರುವ ವಿನ್ಯಾಸ ಎಲ್ಲ ಹೊಸ ಯೋಜನೆಗಳ ಮೂಲ ಮಂತ್ರವಾಗಬೇಕು. 'ಲಭ್ಯತಾ ಸೂಚ್ಯಾಂಕ' ದ ಅಭಿವೃದ್ಧಿ ಮತ್ತು ಅದನ್ನು ಪ್ರಮಾಣವಾಗಿ ಉಪಯೋಗಿಸತಕ್ಕ ಯೋಜನೆಗಳು ನಮ್ಮ ನಗರಾಭಿವೃದ್ಧಿಯಲ್ಲಿ ದೊಡ್ಡ ಪಾತ್ರ ವಹಿಸಬೇಕು. ಇದನ್ನು ಮುಂದೆ, ಪಟ್ಟಣ ಮತ್ತು ಗ್ರಾಮಗಳಲ್ಲಿ ವಿಸ್ತರಿಸಲು ಸಾಧ್ಯವಾಗಬೇಕು. ನಮ್ಮ ಸುತ್ತಲಿನ ಪರಿಸರ, ಮಾಹಿತಿ ಸಮುಚ್ಚಯ ಮತ್ತು ಮೂಲ ಸೌಕರ್ಯಗಳು ಎಲ್ಲರನ್ನೂ, ಹಲವು ತೊಂದರೆಗಳಿರುವವರನ್ನೂ ಸೇರಿದಂತೆ, ಎಲ್ಲರಿಗೂ ಸಕ್ರಿಯರನ್ನಾಗಿಸಬೇಕು. ಇದನ್ನು ಒಟ್ಟಾಗಿ ಮಾಡಿದಾಗ, ಅದು ಒಂದು ವೆಚ್ಚದ ಸಂಗತಿಯಾಗದೇ, ಮುಂದಿನ ಜನಾಂಗಕ್ಕೆ ಮಾಡುವ ಬಂಡವಾಳವಾಗಿ ಪರಿವರ್ತಿತಗೊಳ್ಳುತ್ತದೆ. 'ಸರ್ವರಿಗೂ ಲಭ್ಯತೆ' ನಮ್ಮ ನವ್ಯ ಭಾರತದ ಎಲ್ಲರನ್ನೂ ಒಳಗೊಳ್ಳುವ ಗುರಿಯಾಗಲಿ. ❑

# ವೈಕಲ್ಯ ಮೀರಬೇಕಾದ ಸೌಲಭ್ಯ

* ಶಿವಾನಿ ಗುಪ್ತಾ



ಸುಗಮ್ಯ ಭಾರತ ದೇಶವ್ಯಾಪಿ ಮುಂಚೂಣಿ ಆಂದೋಲನವಾಗಿದ್ದು, ವಿಶೇಷ ಚೇತನ ವ್ಯಕ್ತಿಗಳಿಗೆ ಜಾಗತಿಕ ಸುಗಮ್ಯತೆ ಸುಲಭ ಸಾಧ್ಯವಾಗಿಸುವ ನಿಶ್ಚಿತ ಧ್ಯೇಯದೊಂದಿಗೆ ಸಮಾನ ಅವಕಾಶಗಳ ಮಾಹಿತಿ, ಸ್ವಾವಲಂಬಿಯಾಗಿ ಬದುಕುವ ಅವಕಾಶ ಮತ್ತು ಅವರನ್ನು ಒಳಗೊಳ್ಳುವ ಸಮಾಜದಲ್ಲಿ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಸ್ವಸಾಮರ್ಥ್ಯದಿಂದ ಅವರೂ ಕೂಡ ಭಾಗವಹಿಸುವ ಸದವಕಾಶ ಸೃಷ್ಟಿಸುವ ಮಹದುದ್ದೇಶ ಹೊಂದಿದೆ.

ವಿಶೇಷ ಚೇತನರ ಒಳಗೊಳ್ಳುವಿಕೆಯ ಮೊದಲ ಪೂರ್ವ ಅಗತ್ಯ ಎಂದರೆ ಸುಗಮ ಗಮ್ಯತೆ. ಸುಗಮ್ಯತೆಯಿಂದ ವಿಶೇಷ ಚೇತನ ವ್ಯಕ್ತಿಗಳು ಸ್ವಾವಲಂಬಿಯಾಗಿ, ಸ್ವತಂತ್ರರಾಗಿ ಸಮಾಜದಲ್ಲಿ ಜೀವನ ನಡೆಸಲು ಶಕ್ತರಾಗುವರಲ್ಲದೇ, ತಮ್ಮ ಸಮುದಾಯಗಳಲ್ಲಿ ಸುವಿಹಾರಿಗಳಾಗಿ, ಸುರಕ್ಷಿತರಾಗಿ ಸಹಭಾಗಿತ್ವ ವಹಿಸಬಲ್ಲರು. ವೈಕಲ್ಯ ಮತ್ತು ಸುಗಮ್ಯತೆ ಪರಸ್ಪರ ವಿಲೋಮ ಸಂಬಂಧ ಹೊಂದಿದ್ದು ಸುಗಮ್ಯತೆ ಹೆಚ್ಚಿದಲ್ಲಿ ವೈಕಲ್ಯದ ಮಟ್ಟ ಕುಸಿಯಲಾರಂಭಿಸುತ್ತದೆ. ಸುಗಮ್ಯತೆ ಕೇವಲ ವಿಕಲ ಚೇತನರಿಗೆ ಅಥವಾ ವಯೋವೃದ್ಧರಂತಹ ಗುಂಪುಗಳಿಗೆ ಮಾತ್ರ ಸಹಕಾರಿಯಲ್ಲ; ಬಹುತೇಕ ಎಲ್ಲರಿಗೂ ಲಾಭವಾಗಬಲ್ಲ ಹಕ್ಕು.

ವಿಶೇಷ ಚೇತನರು ಸ್ವತಂತ್ರ ಮತ್ತು ಸ್ವಾವಲಂಬಿಯಾಗಿ ಬದುಕುವ ಆಂದೋಲನ ಹಮ್ಮಿಕೊಂಡು, 'ಯಾವುದೇ ಅಡೆತಡೆಗಳಿಲ್ಲದ ಪಾರಿಸಾರಿಕ ವಾತಾವರಣ' ನಿರ್ಮಿಸುವ ಪ್ರತಿಪಾದನೆಯಲ್ಲಿ ಸುಗಮ್ಯತೆಯ ಬೇರುಗಳು ಚಾಚಿಕೊಂಡಿವೆ. ಕಾಲಕ್ರಮೇಣ ಸುಗಮ್ಯತೆ ವಿಶ್ವ ವಿನ್ಯಾಸವಾಗಿ ರೂಪುಗೊಂಡಿತು.

ಸುಗಮ್ಯತೆಯು ವಿಶ್ವ ಒಪ್ಪುವ ವಿನ್ಯಾಸ, ಅನೇಕ ಪ್ರಕ್ರಿಯೆಗಳನ್ನು ಒಳಗೊಂಡ ಒಂದೇ ಅನುಕರಣೀಯ ಯೋಗ್ಯ ವಿನ್ಯಾಸವಾಗಿಸುವ ಸಂಘಟಿತ ಪ್ರಯತ್ನ. ಎಲ್ಲವನ್ನೂ ಒಳಗೊಂಡ, ಸಮಾನ ಲಾಭ ದಕ್ಕಿಸುವ ಹಾಗೂ ಮಾನವ ನಿರ್ಮಿತ ಅಸಮಾನತೆಗಳಾದ ಲಿಂಗ, ವಯಸ್ಸು, ಪ್ರಾದೇಶಿಕತೆ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ವ್ಯವಸ್ಥೆಗಳಿಗೆ ಹೊಂದಿಕೊಳ್ಳುವ ಒಂದು ವಿನ್ಯಾಸ.

ವಿಶ್ವ ವಿನ್ಯಾಸ, ಮೂಲಭೂತವಾಗಿ ನಮ್ಮ ವೈಚಾರಿಕತೆಯಲ್ಲಿ ಸ್ಥಾನಪಲ್ಲಟವನ್ನು ಅನುಭೂತಿಸುವ ಒಂದು ಕ್ರಿಯೆಯಾಗಿ, ವಿಶೇಷ ಚೇತನರಿಗೆ 'ವಿಶೇಷ'ವಾದ ಸುಗಮ್ಯತೆಯ ವಿನ್ಯಾಸದ ಬದಲು 'ಸಾಮಾನ್ಯ'ವಾದ, ಎಲ್ಲರನ್ನೂ ಒಳಗೊಳ್ಳುವ ವಿನ್ಯಾಸವನ್ನು ರೂಪಿಸುತ್ತದೆ. ಈ 'ಸಾಮಾನ್ಯ' ಸುಗಮ್ಯತೆಯ 'ಕಾಮನ್ ಟು ಆಲ್' ಮಾದರಿಯ ವಿನ್ಯಾಸ, ಕಟ್ಟಡ, ನೀತಿ–ನಿರೂಪಣೆ, ತಂತ್ರಜ್ಞಾನ ಮತ್ತು ಉತ್ಪಾದನೆ ಮೊದಲಾದವು ಯಾವುದೇ ವಿಶೇಷ ಶ್ರಮ ಬಯಸದೇ ಅಥವಾ ವಿಶೇಷ ವಿನ್ಯಾಸದ ಅಳವಡಿಕೆ ಬೇಡದೇ ಮತ್ತು ಇನ್ನಷ್ಟು–ಮತ್ತಷ್ಟು ಉಪಕರಣ ಬಯಸದೇ ಆಸಕ್ತ ಎಲ್ಲ ಬಳಕೆದಾರರಿಗೆ ದಕ್ಕುವ ಹಾಗೆ ಮತ್ತು ಅತ್ಯಂತ ಉಚ್ಚಮಟ್ಟದಲ್ಲಿ ಸ್ವತಂತ್ರರಾಗಿ, ಸುರಕ್ಷಿತರಾಗಿ ಮತ್ತು ಎಲ್ಲರೂ ಬಳಸುವ ಹಾಗೆ ರೂಪುಗೊಳಿಸುತ್ತದೆ.

ಹೀಗೆ ಸುಗಮ್ಯತೆ ಕೇವಲ ವಿಶೇಷ ಚೇತನರಿಗೆ ಮೀಸಲಿಟ್ಟ ವಿನ್ಯಾಸವಾಗಿ ಮಾತ್ರವಲ್ಲದೇ, ಸಾಮಾನ್ಯ ಎಲ್ಲರನ್ನೂ ಗಮನದಲ್ಲಿಟ್ಟುಕೊಂಡ ವಿನ್ಯಾಸವೊಂದು ರೂಪುಗೊಂಡಾಗ, ಖರ್ಚು ಕೂಡ ಹಂಚಿ ಹೋಗಿ, 'ಕಾಸ್ಟ್ ಇಫೆಕ್ಟಿವ್' ಮಾದರಿಯಲ್ಲಿ ವಿಶೇಷ ಚೇತನರಿಗೂ 'ಶೇರ್' ಮಾದರಿಯಲ್ಲಿ ಸುಲಭವಾಗಿ ಕೈಗೆಟಕುವ ದರದಲ್ಲಿ ಸುಗಮ್ಯತೆಯ ಲಾಭ ದಕ್ಕಿಸಬಹುದು.

ಜಾಗತಿಕ ಮಟ್ಟದಲ್ಲಿ ವಿಶ್ವ ಸಂಸ್ಥೆಯ ನಿಗದಿತ ಮಾನದಂಡಗಳ ನಿಯಮಾನುಸಾರ (1983) ವಿಶೇಷ ಚೇತನರಿಗೆ ಸಮಾನ ಅವಕಾಶಗಳನ್ನು ಒದಗಿಸುವ ನಿಟ್ಟಿನಲ್ಲಿ, ಸುಗಮ್ಯವಾಗಿ ಪರಿಸರವನ್ನು ತರೆದಿಡುವ

* ಸಂಸ್ಥಾಪಕರು, ಅಕ್ಸೆಸ್ ಎಬಿಲಿಟಿ. Email : shewany@gmail.com

ದ್ವಾರವಾಗಿ, ಸೂಚ್ಯ ಮತ್ತು ವಾಚ್ಯ ಮಾರ್ಗದರ್ಶಿ ಸೂತ್ರಗಳನ್ನು ಕಲಂ 5 (ಸುಗಮ್ಯತೆ) ಅಡಿ ಚರ್ಚಿಸಲಾಗಿದೆ. ಇತ್ತೀಚಿಗೆ ನಡೆದ ಜಾಗತಿಕ ಸಮಾವೇಶದ ಪ್ರಕಾರ, ವಿಶೇಷ ಚೇತನರ ಹಕ್ಕುಗಳ ಪೈಕಿ (ಸಿಆರ್‌ಪಿಡಿ) ಸುಗಮ್ಯತೆ ಸಾಮಾನ್ಯ ತತ್ವವಾಗಿ ಹಾಗೂ ನಿಗದಿತ ಕಲಂ ಆಗಿಯೂ ಗುರುತಿಸಲ್ಪಟ್ಟಿದೆ. ಹಾಗಾಗಿ, ಸಾಂಪ್ರದಾಯಿಕ ನಿರ್ಣಿತ ಎಲ್ಲ ಕಲಂಗಳು ಅನುಷ್ಠಾನಗೊಳ್ಳುವಾಗ ಸಾಮಾನ್ಯ ತತ್ವವೂ ಸಹ ಸುಗಮ್ಯತೆಯನ್ನು ಖಾತ್ರಿ ಪಡಿಸಬೇಕಿದೆ.

ವಿಶೇಷ ಕಲಂ ಆಗಿ, ಕಲಂ 9 – ಸುಗಮ್ಯತೆ ಈ ಮುಂದಿನ ಕಲಂಗಳ ಜೊತೆ ಒಟ್ಟಾಗಿ ಓದಲ್ಪಡಬೇಕು; ಕಲಂ 21 – ಅಭಿಪ್ರಾಯ ಅಭಿವ್ಯಕ್ತಿಸುವ ಸ್ವಾತಂತ್ರ್ಯ ಮತ್ತು ಮಾಹಿತಿ ಸುಗಮ್ಯತೆ' ಜೊತೆ, ಕಲಂ 20 – ವೈಯಕ್ತಿಕ ಚಲನತ್ವ. ಅಂದಾಗ ಮಾತ್ರ ಸುಗಮ್ಯತೆಯ ಬೇಕು–ಬೇಡಗಳ ಸಮಗ್ರ ಕಲ್ಪನೆ ದೊರಕುವುದು.

ಜಾಗತಿಕ ಸಮಾವೇಶದ ಕಲಂ 4, 'ಸಾಮಾನ್ಯ ಜವಾಬ್ದಾರಿಗಳು' ಅಡಿ, ಎಲ್ಲ ರಾಜ್ಯಗಳಿಗೂ ಸ್ಪಷ್ಟ ನಿರ್ದೇಶನ ನೀಡಲಾಗಿದ್ದು, ಎಲ್ಲ ವಿಶೇಷ ಚೇತನ ನಾಗರಿಕರಿಗೆ ಸುಗಮ್ಯತೆಯನ್ನು ಖಾತ್ರಿ ಪಡಿಸುವುದು ಸೇರಿದಂತೆ, ಸುಗಮ್ಯತೆಯನ್ನು 'ಪ್ರಗತಿಪರ ದೃಷ್ಟಿಕೋನದಿಂದ ಸಾಧಿಸುವ' ಕ್ರಿಯೆಗೆ ಒತ್ತು ನೀಡಿದೆ.

2013–2022 ರ ಏಶಿಯಾ ಮತ್ತು ಪೆಸಿಫಿಕ್ ದಶಕದ 3ನೇ ಗುರಿ ಅಡಿ, ಪ್ರಾದೇಶಿಕ ಮಟ್ಟದಲ್ಲಿ ವಿಶೇಷ ಚೇತನರಿಗೆ ಭೌತಿಕ ಪರಿಸರ, ಸಾರ್ವಜನಿಕ ಸಾರಿಗೆ, ಜ್ಞಾನ, ಮಾಹಿತಿ ಮತ್ತು ಸಂವಹನದ ಸಮರ್ಪಕ ಸುಗಮ್ಯ ಲಭ್ಯತೆಗೆ 'ಫೋಕಸ್' ಮಾಡಲಾಗಿದೆ. ಭಾರತ ಈ ಘೋಷಣೆಯನ್ನು ಒಪ್ಪಿ–ಅಳವಡಿಸಿಕೊಂಡಿದ್ದು, ಸುಗಮ್ಯ ಭಾರತ ಆಂದೋಲನ (ಎಐಸಿ) ಜಾರಿಗೊಳಿಸಿದ್ದು, 3ನೇ ಗುರಿಯ ಸಾಧನೆಗೆ ಬದ್ಧತೆ ಪ್ರದರ್ಶಿಸಿದೆ.

**ಸುಗಮ್ಯ ಭಾರತ ಆಂದೋಲನ**

ಸುಗಮ್ಯ ಭಾರತ ದೇಶವ್ಯಾಪಿ ಮುಂಚೂಣಿ ಆಂದೋಲನವಾಗಿದ್ದು, ವಿಶೇಷ ಚೇತನ ವ್ಯಕ್ತಿಗಳಿಗೆ ಜಾಗತಿಕ ಸುಗಮ್ಯತೆ ಸುಲಭ ಸಾಧ್ಯವಾಗಿಸುವ ನಿಶ್ಚಿತ ಧ್ಯೇಯದೊಂದಿಗೆ ಸಮಾನ ಅವಕಾಶಗಳ



ಮಾಹಿತಿ, ಸ್ವಾವಲಂಬಿಯಾಗಿ ಬದುಕುವ ಅವಕಾಶ ಮತ್ತು ಅವರನ್ನು ಒಳಗೊಳ್ಳುವ ಸಮಾಜದಲ್ಲಿ ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ಸ್ವಸಾಮರ್ಥ್ಯದಿಂದ ಅವರೂ ಕೂಡ ಭಾಗವಹಿಸುವ ಸದವಕಾಶ ಸೃಷ್ಟಿಸುವ ಮಹದುದ್ದೇಶ ಹೊಂದಿದೆ.

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಭಾರತ ಸರ್ಕಾರದ ಅಡಿ, ವಿಶೇಷ ಚೇತನರ ಸಶಕ್ತೀಕರಣ ಇಲಾಖೆ ವತಿಯಿಂದ ಈ ಆಂದೋಲನವನ್ನು ಹಮ್ಮಿಕೊಳ್ಳಲಾಗಿದೆ.

ಮಾನವನಿರ್ಮಿತ ಪರಿಸರದ ಸುಗಮ್ಯತೆ ಸೇರಿದಂತೆ, ಸಾರಿಗೆ ವ್ಯವಸ್ಥೆ, ಮಾಹಿತಿ ಮತ್ತು ಸಂವಹನದ ಪಾರಿಸಾರಿಕ ವ್ಯವಸ್ಥೆಗಳನ್ನು ಬಲವರ್ಧಿಸಿ ವಿಶೇಷ ಚೇತನರ ಕಲ್ಯಾಣಕ್ಕೆ ವಿನಿಯೋಗಿಸುವ ದೂರದೃಷ್ಟಿ ಇದೆ.

ಸುಗಮ್ಯ ಭಾರತ ಆಂದೋಲನ ವಿವಿಧ ಹಂತಗಳ ವ್ಯವಸ್ಥಿತ ಕಾರ್ಯಸಾಧನಾ ತಂತ್ರವಾಗಿದ್ದು, ಈ ಮುಂದಿನ ಮಹತ್ವದ ಭಾಗಗಳನ್ನು ಹೊಂದಿದೆ. ಅ. ಆಂದೋಲನದ ಮುಂದಾಳತ್ವವನ್ನು ಒಪ್ಪಿಕೊಳ್ಳುವುದು ಮತ್ತು ಬಲವರ್ಧಿಸುವುದು. ಬ. ಸಮೂಹಕ್ಕೆ ಅರಿವು ಮೂಡಿಸುವುದು. ಕ. ಕಾರ್ಯಾಗಾರಗಳ ಮೂಲಕ ಕ್ಷಮತೆ ವೃದ್ಧಿಸುವುದು. ಡ. ಸಹಭಾಗಿತ್ವ ಮತ್ತು ಒಳಗೊಳ್ಳುವಿಕೆ (ಕಾನೂನು ಪರಿಮಿತಿಗಳು ಮತ್ತು ಚೌಕಟ್ಟು, ತಂತ್ರಜ್ಞಾನ ಆಧಾರಿತ ಪರಿಹಾರ ಸೂತ್ರಗಳು, ಸಂಪನ್ಮೂಲಗಳ ಕ್ರೋಢೀಕರಣ ಇತ್ಯಾದಿ) ಇ. ಕಾರ್ಪೊರೇಟ್ ಜಗತ್ತಿನ ಪ್ರಯತ್ನಗಳನ್ನು ಒಗ್ಗೂಡಿಸಿ ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದ ಬಲವರ್ಧಿಸುವುದು.

ವಿಶೇಷ ಚೇತನರ ಸಶಕ್ತೀಕರಣ ಇಲಾಖೆ ಈ ಆಂದೋಲನವನ್ನು ಯಶಸ್ವಿ ಅನುಷ್ಠಾನಗೊಳಿಸುವ ಸದುದ್ದೇಶದಿಂದ ವಿವಿಧ ರಾಜ್ಯಗಳೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದೆ.

ಈ ಆಂದೋಲನದ ಯಶಸ್ವಿ ಅನುಷ್ಠಾನದ ತಂತ್ರಗಾರಿಕೆಗೆ ಆಂದೋಲನ 3 ಪತ್ರ ಸಿದ್ಧಪಡಿಸಲಾಗಿದ್ದು, ನಿಗದಿತ 3ನೇ ಗುರಿ (goal 3 of the Incheon Strategy (2013 – 2022) ಸಾಧನೆಗೆ ಅನುರೂಪವಾಗಿರುವಂತೆ 'ಸುಗಮ್ಯ ವಿನ್ಯಾಸ' ಗೊಳಿಸಲಾಗಿದೆ.

ಭಾರತೀಯ ಇತಿಹಾಸದಲ್ಲಿ ಪ್ರಪ್ರಥಮ ಬಾರಿಗೆ ಸುಗಮ್ಯತೆಗೆ ಯೋಗ್ಯ ಮತ್ತು ಅರ್ಹ ಒತ್ತು ನೀಡಲಾಗಿದ್ದು, ಇಡೀ ದೇಶದಲ್ಲಿ ಈ ಆಂದೋಲನಕ್ಕೆ ವ್ಯಾಪಕ ಪ್ರತಿಕ್ರಿಯೆ ಮತ್ತು ಸಹಕಾರ ಲಭಿಸಿದೆ.

ನನ್ನ ಅಭಿಪ್ರಾಯದಲ್ಲಿ ಸುಗಮ್ಯ ಭಾರತ ಆಂದೋಲನ ಭವಿಷ್ಯದ ಭಾರತದಲ್ಲಿ ಸಮಗ್ರ ಸುಗಮ್ಯತೆಯ ಆರಂಭಿಕ ದೃಢ ಹೆಜ್ಜೆಗಳು ಎನ್ನಲಡ್ಡಿಇಲ್ಲ. ಸುಗಮ್ಯ ಭಾರತ ಯೋಜನೆಯ ತಂತ್ರಗಾರಿಕೆ ಮತ್ತು ಆಂದೋಲನದ ಒಳ್ಳೆಯ ಅಂಶಗಳೆಂದರೆ, ದೇಶದಲ್ಲಿ ಸುಗಮ್ಯತೆಯ ಬಗ್ಗೆ ಅತ್ಯುತ್ತಮ ತಿಳಿವಳಿಕೆ ಮತ್ತು ಅರಿವು ಮೂಡಿಸುವಲ್ಲಿ ಸಶಕ್ತವಾಗಿದೆ ಎಂಬುದು. ಜೊತೆಗೆ, ಸುಗಮ್ಯ ಭಾರತ ಆಂದೋಲನ ಕೇವಲ ಭೌತಿಕ ಸುಗಮ್ಯತೆಗೆ ಒತ್ತು ನೀಡದೇ, ಸಮಗ್ರತೆಗೆ ಹೆಚ್ಚು ಮಹತ್ವ ಒದಗಿಸಿದ್ದು ಮಾಹಿತಿ ಮತ್ತು ಸಂವಹನ ಪರಿಸರ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಹೆಜ್ಜೆಗಳನ್ನು ಇರಿಸಿದೆ.

**ಸವಾಲುಗಳು ಮತ್ತು ಕೊರತೆ; ಸಾಮಾನ್ಯ ದೂರದೃಷ್ಟಿ**

* ಸುಗಮ್ಯತೆಯ ವಿನ್ಯಾಸದ ಮಾನದಂಡಗಳು ಮತ್ತು ಕನಿಷ್ಠ ಅವಶ್ಯಕತೆಗಳ ಆಧಾರದ ಮೇಲೆ ಸುಗಮ್ಯತೆ ಅವಲಂಬಿತ ಎಂಬುದು ಸದ್ಯ ಸ್ಪಷ್ಟವಾಗಿಲ್ಲ. ಹೀಗೆ ನಿರ್ಮಿತಿ ಹೊಂದಿದ ಪರಿಸರದಲ್ಲಿ, ಸಾರಿಗೆ ಮೂಲಸೌಕರ್ಯಗಳಲ್ಲಿ ಅಥವಾ ಮಾಹಿತಿ ಮತ್ತು ಸಂವಹನದ ಪಾರಿಸಾರಿಕ ವ್ಯವಸ್ಥೆಯಲ್ಲಿ ಸುಗಮ್ಯತೆಗೆ ಮಾನದಂಡಗಳನ್ನು ನಿಗದಿಪಡಿಸಲಾಗುತ್ತದೆಯೇ? ನಮಗೆ ತಿಳಿದಿರುವಂತೆ ಭಾರತ ಒಂದು ದೇಶವಾಗಿ, ವಿಶೇಷವಾಗಿ ಸಾರಿಗೆ



ಸಂಪರ್ಕದ ಮೂಲಸೌಕರ್ಯಗಳ ಲಭ್ಯತೆ ಮತ್ತು ಸುಗಮ್ಯತೆಯಲ್ಲಿ ಯಾವುದೇ ಅಪರಿಮಿತವಾದ ಸುಗಮ್ಯ ಮಾನದಂಡಗಳಿಗೆ ಒಳಪಟ್ಟಿಲ್ಲ. ಈಗಾಗಲೇ ಇಲ್ಲಿ ಶೀರ್ಷಿಕೆ ಮತ್ತು ಸಂಜ್ಞೆ/ ಸಾಂಕೇತಿಕ ಭಾಷೆಯ ನಿಗದಿತ ಮಾನದಂಡಗಳನ್ನು ಅಭಿವೃದ್ಧಿ ಪಡಿಸಲು ಗುರಿ ನಿಗದಿಯಾಗಿದ್ದು, ಸಾರಿಗೆ ಮೂಲಸೌಕರ್ಯಗಳ ಕ್ಷೇತ್ರದಲ್ಲಿ ನಿರ್ವಾತ ಸೃಷ್ಟಿಯಾಗಿದೆ. ಕಾರಣ, ಥರಹೇವಾರಿ ಮಾರ್ಗದರ್ಶಿ ಸೂತ್ರಗಳು ಈಗಾಗಲೇ ನಿರ್ಮಿತ ಪರಿಸರದಲ್ಲಿ ಸಿದ್ಧಸೂತ್ರದಂತೆ ಅಳವಡಿಸಲ್ಪಟ್ಟಿವೆ. ಆದರೆ, ಅವುಗಳ ಮಧ್ಯೆ ವ್ಯತ್ಯಾಸಗಳಿದ್ದು ಆ ಪೈಕಿ ಒಪ್ಪಿತ ಮಾನದಂಡಗಳಿಲ್ಲದ ಕಾರಣ ಕಟ್ಟುವವರು ಮತ್ತು ಸೌಲಭ್ಯ ಪ್ರದಾತ ಪ್ರಬಂಧಕರ ಮಧ್ಯೆ ಹೇಳಲಾಗದಷ್ಟು ಗೊಂದಲಗಳಿವೆ.

* ಈ ಆಂದೋಲನ ಹೆಚ್ಚಿನ ಬಲದ ಒತ್ತು ನೀಡಿರುವುದು ಸುಗಮ್ಯದ ಲೆಕ್ಕ ತಪಾಸಣೆಗೆ – ಆದರೆ, ನಮ್ಮ ದೇಶದಲ್ಲಿ ಸೂಕ್ತ ತರಬೇತಿ ಹೊಂದಿದ ಸುಗಮ್ಯ ಲೆಕ್ಕ ತಪಾಸಿಗರ ಕೊರತೆ ಇದೆ. ಇದಕ್ಕೂ ಮಿಗಿಲಾಗಿ, ಸುಗಮ್ಯದ ಲೆಕ್ಕ ತಪಾಸಿಗರಾಗಲು ಬಯಸುವವರಿಗೆ ನಮ್ಮ ದೇಶದಲ್ಲಿ ಸದ್ಯ ತರಬೇತಿಯೂ ಶಕ್ಯವಿಲ್ಲದ ಸ್ಥಿತಿ ಇದೆ.

* ಇಡೀ ಆಂದೋಲನದ ಕೇಂದ್ರ ಬಿಂದು ಪಟ್ಟಣ ಪ್ರದೇಶಗಳಾಗಿವೆ. ಮೇಲಾಗಿ, ಗ್ರಾಮೀಣ ಪ್ರದೇಶದಲ್ಲಿ ಸುಗಮ್ಯತೆಯನ್ನು ಬಲಪಡಿಸಲು ಯಾವುದೇ ಗುರಿ ನಿಗದಿಯಾಗಿಲ್ಲ.

* ಈ ಆಂದೋಲನ ಒಟ್ಟಾರೆ ಗಮನ ಕೇಂದ್ರೀಕರಿಸುವುದು ಸರ್ಕಾರಿ ಸ್ವಾಮ್ಯದ ಸೌಕರ್ಯಗಳ ಮೇಲೆ; ಕಟ್ಟಡಗಳಿರಲಿ, ಜಾಲ ತಾಣಗಳಿರಲಿ ಅಥವಾ ಸಾರ್ವಜನಿಕ ಸಾರಿಗೆ ಮೂಲಸೌಕರ್ಯ ವ್ಯವಸ್ಥೆ ಇರಲಿ. ಖಾಸಗಿ ಕ್ಷೇತ್ರ ಒದಗಿಸುತ್ತಿರುವ ಸೇವೆಗಳಾಗಲಿ, ಸೌಕರ್ಯಗಳಾಗಲಿ ಈ ಆಂದೋಲನದ ಸ್ವರೂಪ ಮತ್ತು ವ್ಯಾಪ್ತಿಯಲ್ಲಿ ಜಾಗೆ ಪಡೆದಿಲ್ಲ. ಖಾಸಗಿಯವರು ಸಾರ್ವಜನಿಕರಿಗೆ ಒದಗಿಸುತ್ತಿರುವ ಸೇವೆಗಳನ್ನು ಸರ್ಕಾರವೇ ಗಮನಿಸಬೇಕು ಮತ್ತು ಸುಗಮ್ಯತೆಯನ್ನು ಖಾತ್ರಿ ಪಡಿಸಬೇಕಿದೆ.

* ನಾಗರಿಕರಿಗೆ ಅತ್ಯಂತ ಸೋವಿ ಮತ್ತು ಅನುಕೂಲವಾದ ಸಾರಿಗೆ ಎಂದರೆ ಇಂಟರ್–ಸಿಟಿ ಮತ್ತು ಇಂಟ್ರಾ–ಸಿಟಿ ಬಸ್ ಸಾರಿಗೆ ವ್ಯವಸ್ಥೆ. ಆದರೆ, ರಸ್ತೆಗಳನ್ನು ಅವಲಂಬಿಸಿದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಹೆಚ್ಚು ಸುಲಭ–ಸುಗಮ್ಯವಾಗಿಸುವ ಯಾವುದೇ ಒತ್ತು ನೀಡಿಲ್ಲ. (ಕಾರಣ, ರಸ್ತೆ ಸಾರಿಗೆಯ ಬಹುದೊಡ್ಡ ಪಾಲು ಖಾಸಗಿಯವರ ಸ್ವತ್ತಾಗಿದೆ – ರಸ್ತೆಗಳನ್ನು ಖಾಸಗೀಕರಣ ಮಾಡಲಾಗಿದೆ.)

* ಸಾರ್ವಜನಿಕ ಕ್ಷೇತ್ರದ ಎಲ್ಲ ಮೂಲ ಸೌಕರ್ಯಗಳನ್ನು ಪುನರಪಿ ದುರಸ್ಥಿಗೊಳಿಸಿ ಸುಗಮ್ಯತೆಯನ್ನು ಒಂದು ಹಂತದ ವರೆಗೆ ಖಾತ್ರಿ ಪಡಿಸುವುದು ಈ ಆಂದೋಲನದ ತಂತ್ರ. ಆದರೆ, ಯಾವುದು ಹೊಸತೋ ಉದಾಹರಣೆಗೆ ಕಟ್ಟಡಗಳು, ಸಾರಿಗೆ ಮೂಲಸೌಕರ್ಯ, ಮಾಹಿತಿ ಮತ್ತು ಸಂವಹನ ಸೌಲಭ್ಯ ಮೊದಲಾದವುಗಳ ಸುಗಮ್ಯತೆ ಆರಂಭದಿಂದ ಲೆಕ್ಕಿಸುವ ಪ್ರಾವಧಾನದ ಬಗ್ಗೆ ಯಾವುದೇ ಒತ್ತಿಲ್ಲ.

### ಸುಗಮ್ಯ ಭಾರತ ಆಂದೋಲನದ ಆಚೆ

ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಾಲಯ, ಭಾರತ ಸರ್ಕಾರದ ಅಡಿ, ವಿಶೇಷ ಚೇತನರ ಸಶಕ್ತೀಕರಣ ಇಲಾಖೆ ವತಿಯಿಂದ ಈ ಆಂದೋಲನವನ್ನು ಹಮ್ಮಿಕೊಳ್ಳಲಾಗಿದ್ದು, ಸುಗಮ್ಯತೆಯ ಸಮರ್ಪಕ ಅನುಷ್ಠಾನ ಮತ್ತು ಸಾರ್ಥಕ ನಿರ್ವಹಣೆ ಈ ಇಲಾಖೆಯ ಜವಾಬ್ದಾರಿಯಾಗಿಯೇ ಬಿಂಬಿತವಾಗಿದೆ. ಕಾರಣ, ಸುಗಮ್ಯತೆ ವಿಶೇಷವಾಗಿ ಅಂಗವೈಕಲ್ಯಕ್ಕೆ ಸಂಬಂಧಿಸಿದ ಪ್ರಕರಣವಾಗಿ ಗುರುತಿಸಲ್ಪಟ್ಟಿದೆ.

ಆದರೆ, ಸುಗಮ್ಯತೆ ಎಂಬುದು ಅಕ್ಷರಶಃ ಎರಡು ಅಲುಗಿನ ಕತ್ತಿ ಇದ್ದಂತೆ. ಕಾರಣ, ಫಲಾನುಭವಿಗಳಾಗ ಬಯಸುವ ವೈವಿಧ್ಯಮಯ ಸಮುದಾಯಗಳ ಜನತೆ ಒಂದು ಬದಿಗೆ, ಮತ್ತೊಂದು ಕಡೆ ಗಣನೀಯ ಸಂಖ್ಯೆಯ ವಿವಿಧ ಸಚಿವಾಲಯಗಳು ತಮ್ಮ ಕಾರ್ಯ ನಿರ್ವಹಣೆ ಮತ್ತು ಯೋಜನಾನುಷ್ಠಾನಗಳಲ್ಲಿ ಸುಗಮ್ಯತೆಗೆ ಒತ್ತು ನೀಡಬೇಕಿರುವುದು.

ಹಾಗಾಗಿ, ಸುಗಮ್ಯತೆಯ ಸಮರ್ಪಕ ಅನುಷ್ಠಾನ, ನಿರ್ವಹಣೆ ಮತ್ತು ಮೇಲುಸ್ತುವಾರಿ ಈ ಮುಂದಿನ ಅಂಶಗಳನ್ನು ಬಯಸುತ್ತದೆ :

### ಶಾಸನಾತ್ಮಕ ಸುಧಾರಣೆಗಳು

ವಿಶೇಷ ಚೇತನರ ಹಕ್ಕುಗಳ ಕಾಯ್ದೆ ಸೇರಿದಂತೆ, ಹಲವು ಹಂತದ ಶಾಸನಗಳು ಮತ್ತು ನೀತಿ ಕಟ್ಟಳೆಗಳು ವಿಶೇಷವಾಗಿ ವಿಶೇಷ ಚೇತನರ ಸುಗಮ್ಯತೆಗೆ ವಿಶೇಷ ಒತ್ತು ನೀಡಿ ಅವಕಾಶ ಕಲ್ಪಿಸಬೇಕು. ವಿಶೇಷ ಚೇತನರ ಹಕ್ಕುಗಳ ಕಾಯ್ದೆಯಂತೂ ಈ ಎಲ್ಲವನ್ನೂ ಒಳಗೊಳ್ಳಬೇಕಿದೆ. ಈ ಕಾಯ್ದೆಗಳು – ಕಟ್ಟಡ ನಿಯಮಾವಳಿಗಳು, ನಗರಾಭಿವೃದ್ಧಿ ಮತ್ತು ಗ್ರಾಮಿಣಾಭಿವೃದ್ಧಿ ಕಾನೂನುಗಳು, ಸಾರ್ವಜನಿಕ ಸಾರಿಗೆ ನೀತಿ–ನಿಯಮಾವಳಿಗಳನ್ನು ಒಳಗೊಂಡಂತೆ, ರಸ್ತೆ ಸಾರಿಗೆ, ರೈಲು ಸಾರಿಗೆ, ನಾಗರಿಕ ವಿಮಾನಯಾನ ಮತ್ತು ನೌಕಾಯಾನ, ಅಂತರ್ಜಾಲ ಕಟ್ಟಳೆಗಳು, ಪ್ರಸಾರ ಮತ್ತು ದೂರಸಂಪರ್ಕ ಸಂವಹನ ಕಟ್ಟಳೆಗಳು, ತುರ್ತು ಮತ್ತು ವಿಕೋಪ ನಿರ್ವಹಣೆ ಸಂಬಂಧಿ ಕಾಯ್ದೆಗಳು, ಗೃಹ ಕಾನೂನುಗಳು, ಪ್ರಾಕ್ಯುರ್‌ಮೆಂಟ್ ಕಾನೂನುಗಳು, ಸಾರ್ವಜನಿಕ ಸೇವೆಗಳಿಗೆ ಸಂಬಂಧಿಸಿದ ಹತ್ತು ಹಲವು ಕಾನೂನು, ಉದಾಹರಣೆಗೆ



– ಶಿಕ್ಷಣ, ಆರೋಗ್ಯ, ಪ್ರವಾಸೋದ್ಯಮ, ಪೊಲೀಸ್, ನ್ಯಾಯಾಲಯ, ಕ್ರೀಡೆ ಮತ್ತು ಸಂಸ್ಕೃತಿ.. ಇತ್ಯಾದಿ.

ಈಗಾಗಲೇ ಕೆಲ ರಾಷ್ಟ್ರಗಳು 'ಸುಗಮ್ಯತೆ'ಗೆ ಸಂಬಂಧಿಸಿದ ಸೂಕ್ತ ಕಾನೂನುಗಳನ್ನು ಜಾರಿಗೊಳಿಸಿದ್ದು, ಮತ್ತಷ್ಟು ರಾಷ್ಟ್ರಗಳು ಜಾರಿಗೊಳಿಸುವ ಒಲವು ತೋರಿದ್ದು, ತಮ್ಮ ಸಾರ್ಥಕ ಪ್ರಯತ್ನಗಳನ್ನು ಸಿಆರ್‌ಪಿಡಿಗೆ ಅನುಗುಣವಾಗಿ ರೂಪಿಸಿಕೊಳ್ಳಲು ಉತ್ಸುಕವಾಗಿವೆ. ಅವುಗಳ ಪೈಕಿ ಕೆನಡಾ ಮತ್ತು ಯುರೋಪಿಯನ್ ಯೂನಿಯನ್ ಪ್ರಮುಖವಾದವು. ಫಿಲಿಪೀನ್ಸ್ ಸುಗಮ್ಯತೆಯನ್ನು ಸಮೃದ್ಧಿಸುವ ಕಾಯ್ದೆಯನ್ನು 1983ರಿಂದಲೇ ಜಾರಿಗೆ ತಂದಿದ್ದು, ವಿಶೇಷ ಚೇತನರ ಸರಾಗ ಚಲನೆಗೆ ಇಂಬು ನೀಡುವ ಉದ್ದೇಶದಿಂದ, ಆಯ್ದ ಕೆಲ ಪ್ರಮುಖ ಕಟ್ಟಡಗಳು, ಸಂಸ್ಥೆಗಳು, ಸರ್ಕಾರಿ ಇಲಾಖೆ ಕಚೇರಿಗಳು, ಸಾರ್ವಜನಿಕ ಸಂಪರ್ಕದ ವಿಶೇಷ ಸೇವಾ ಇಲಾಖೆಗಳಲ್ಲಿ ವಿಶೇಷ ಚೇತನರ ಅನುಕೂಲಕ್ಕಾಗಿ ಸೂಕ್ತ ಸೌಲಭ್ಯ, ಸೌಕರ್ಯ ಮತ್ತು ಯಾಂತ್ರಿಕ ವ್ಯವಸ್ಥೆಗಳನ್ನು ಅಳವಡಿಸಿಕೊಳ್ಳಲಾಗಿದೆ.

**ಅನುಕೂಲಕರ ಪಾರಿಸಾರಿಕ ವ್ಯವಸ್ಥೆ ರೂಪಿಸುವುದು**

* ಭಾರತೀಯ ಸಂಜ್ಞಾ ಭಾಷೆಗಳ ಸಂಸ್ಥೆ ಮತ್ತು ರಾಷ್ಟ್ರೀಯ ಒಳಾತ್ಮಕ ಮತ್ತು ಜಾಗತಿಕ ವಿನ್ಯಾಸ ರಾಷ್ಟ್ರೀಯ ಸಂಸ್ಥೆ – ಈ ಎರಡು ತರಬೇತಿ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಸಂಸ್ಥೆಗಳು ಆದಷ್ಟು ಬೇಗ ಕಾರ್ಯಾರಂಭ ಮಾಡಬೇಕು.

* ಸುಗಮ್ಯತೆಯ ವಿವಿಧ ಮುಖಗಳಿಗೆ ಅನುಗುಣವಾಗಿ ಗುಣಮಟ್ಟದ ವಿನ್ಯಾಸಗಳನ್ನು ಅಭಿವೃದ್ಧಿ ಪಡಿಸಿ, ಕನಿಷ್ಠ ಅವಶ್ಯಕತೆಗಳನ್ನು ಪ್ರಾಯೋಗಿಕವಾಗಿ ಪೂರೈಸಬೇಕು.






– ಉದಾಹರಣೆಗೆ ಕಟ್ಟಡ ನಿರ್ಮಾಣ ಮಾನದಂಡಗಳು, ಸರಕು–ಸಾರಿಗೆ ವಾಹನಗಳ ವಿನ್ಯಾಸ, ಸಾರಿಗೆ ಸುಗಮ್ಯ ವರ್ತುಳಗಳ ವಿನ್ಯಾಸದ ಮಾನದಂಡಗಳ ನಿಗದಿ, ಸಾರ್ವಜನಿಕ ಸೇವೆ ಮತ್ತು ಸೌಲಭ್ಯಗಳ ಪ್ರದಾನದಲ್ಲಿ ಸೇವಾ ಮಾನದಂಡಗಳ ನಿಗದಿ, ಪ್ರಸಾರ ಗುಣಮಟ್ಟದ ಖಾತ್ರಿ ಇತ್ಯಾದಿ.

* ವೃತ್ತಿಪರ ಕೋರ್ಸುಗಳಾದ ಕಟ್ಟಡ ವಿನ್ಯಾಸ ಅಭಿಯಾಂತ್ರಿಕತೆ (ಆರ್ಕಿಟೆಕ್ಚರ್), ತಾಂತ್ರಿಕತೆ–ಅಭಿಯಾಂತ್ರಿಕತೆ, ವಿನ್ಯಾಸ, ನಿರ್ವಹಣೆ, ವ್ಯವಹಾರ ಮತ್ತು ಪ್ರಾಕ್ಯುರ್‌ಮೆಂಟ್ ನಿರ್ವಹಣೆ ಇತ್ಯಾದಿಗಳ ಮೂಲಕ ಜಾಗತಿಕ ವಿನ್ಯಾಸ ಮತ್ತು ಸುಗಮ್ಯತೆಯ ವಿಷಯಗಳನ್ನು ಕಡ್ಡಾಯ ಅಧ್ಯಯನ ವಿಷಯಗಳಾಗಿ, ಕನಿಷ್ಠ ಸಾಮಾನ್ಯ (ಮೈನರ್ ಸಬ್ಜೆಕ್ಟ್ಸ್) ವಿಷಯಗಳಾಗಿ ಬೋಧಿಸಿದರೂ ಸರಿ. ಜೊತೆಯಲ್ಲಿ ಹೆಚ್ಚುವರಿಯಾಗಿ ಜಾಗತಿಕ ವಿನ್ಯಾಸಕ್ಕೆ ಸಂಬಂಧಿಸಿದ ವಿಶೇಷ ಕೋರ್ಸುಗಳು ಕಲಿಕೆಗೆ ಲಭ್ಯವಾಗಬೇಕು.

* ಅಭಿವೃದ್ಧಿ ಯೋಜನೆಗಳಾದಿಯಾಗಿ ಸರ್ಕಾರಗಳ ಮಹತ್ವದ ಮುಂಚೂಣಿ ಕಾರ್ಯಕ್ರಮಗಳು ತಮ್ಮ ಮಾರ್ಗಸೂಚಿಗಳಲ್ಲಿ, ನೀತಿ–ನಿಯಮಾವಳಿಗಳಲ್ಲಿ ವಿಶೇಷ ಚೇತನರನ್ನು ಗಮನದಲ್ಲಿರಿಸಿಕೊಂಡು ಅನುಷ್ಠಾನಗೊಳ್ಳಬೇಕು. ಮುಂಗಡ ಪತ್ರದಲ್ಲಿ ನಿಗದಿತ ಹಣ ಮೀಸಲಿರಿಸಬೇಕು. ಜೊತೆಗೆ, ಸುಗಮ್ಯತೆಯನ್ನು ಖಾತ್ರಿ ಪಡಿಸುವಾಗ ಮತ್ತು ಅನುಷ್ಠಾನಗೊಳಿಸುವಾಗ ಗಮನಿಸುವ ಪ್ರಕ್ರಿಯೆಗಳಲ್ಲಿ ಮೀಸಲು ಹಣದ ಸದ್ಬಳಕೆ ಖಾತ್ರಿ ಪಡಿಸಬೇಕು.

* ನೂತನ ಕಟ್ಟಡಗಳನ್ನು ವಾಸಯೋಗ್ಯ ಎಂದು ಪ್ರಮಾಣೀಕರಿಸುವಾಗ ಸುಗಮ್ಯತೆಯ ಎಲ್ಲ ಗುಣಮಟ್ಟ ಮತ್ತು ಮಾನದಂಡಗಳನ್ನು ಅಳವಡಿಸಿಕೊಳ್ಳಲಾಗಿದೆ ಎಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಅಗ್ನಿ ಅವಘಡಗಳಂತಹ ಪರಿಸ್ಥಿತಿಗಳಲ್ಲಿ ಪ್ರಾಣ ಹಾನಿ ತಡೆಗಟ್ಟುವ ಎಲ್ಲ ಸಾರ್ಥಕ ವ್ಯವಸ್ಥೆಗಳನ್ನು ಪ್ರಮಾಣೀಕರಿಸಬೇಕು. ಸದ್ಯ, ಸುಗಮ್ಯತೆ ಮತ್ತು ಅದರಡಿ ಅಗ್ನಿ ಅವಘಡಗಳ ತುರ್ತು ನಿರ್ಗಮನ ವ್ಯವಸ್ಥೆಗಳ ಬಗ್ಗೆ ಯಾವುದೇ ಗಂಭೀರ ಕ್ರಮ ಕೈಗೊಳ್ಳದೇ ಇರುವುದು ಸಾಮಾನ್ಯವಾಗಿದೆ.

**ಸಾರ್ವಜನಿಕ ಖರೀದಿ**

ಅಂದಾಜು, ಯಾವುದೇ ದೇಶಕ್ಕೆ ಹೋಲಿಸಿದರೆ ನಮ್ಮ ದೇಶ ಜಗತ್ತಿನಲ್ಲಿಯೇ ಅತೀ ದೊಡ್ಡ ಖರೀದಿದಾರ. ಭಾರತೀಯ ವರದಿ (OECD report) ಪ್ರಕಾರ, ಸಾರ್ವಜನಿಕ ಖರೀದಿ ದೇಶದ ಒಟ್ಟು ಉತ್ಪನ್ನದ ಶೇ.20 ರಿಂದ ಶೇ.30 ರ ಮಧ್ಯೆ ಹೆಚ್ಚೂ ಕಡಿಮೆ ಆಗುತ್ತಲೇ ಇರುತ್ತದೆ. ಸಾರ್ವಜನಿಕ ಖರೀದಿಯ ಮೂಲಕ ಸುಗಮ್ಯತೆಯನ್ನು ಸಾಧಿಸುವ ಮತ್ತು ಲಭ್ಯತೆಯ ಗುಣಮಟ್ಟವನ್ನು ವೃದ್ಧಿಸುವ ಪ್ರಯತ್ನ ಅಮೆರಿಕ ಮತ್ತು ಯುರೋಪ್ ರಾಷ್ಟ್ರಗಳಲ್ಲಿ ಚಾಲ್ತಿ ಇದೆ.

ಪ್ರಸ್ತುತ ನಮ್ಮ ದೇಶದಲ್ಲಿ ಖರೀದಿ ಸಂಬಂಧಿ ಶಾಸನಗಳು ಮತ್ತು ನಡಾವಳಿಗಳು ಸುಗಮ್ಯತೆಯನ್ನು ಮಾನದಂಡವಾಗಿ ಗುರುತಿಸುವುದೇ ಇಲ್ಲ. ಸಾರ್ವಜನಿಕ ಖರೀದಿ ವ್ಯವಸ್ಥೆಯ ಮೂಲಕ ಖರೀದಿಸಲಾಗುವ ಥರಹೇವಾರಿ ವಸ್ತುಗಳು ಮತ್ತು ಸಾರ್ವಜನಿಕರ ಗಣನೀಯ ಮೊತ್ತ ಖರ್ಚಾಗುತ್ತಿರುವುದನ್ನು ಅವಲೋಕಿಸಿದರೆ, ಹೀಗೆ ಖರೀದಿಸಿದ ವಸ್ತುಗಳು ವಿಶೇಷ ಚೇತನರಿಗೂ ಸುಗಮ್ಯತೆಯ ಅಡಿ ರಾಜ್ಯಗಳು ಕಡ್ಡಾಯವಾಗಿ ದೊರಕಿಸುವ ವ್ಯವಸ್ಥೆ ರೂಪುಗೊಳಿಸಬೇಕಿದೆ.

ಹೀಗೆ, ಖರೀದಿ ಸಂಬಂಧಿ ನೀತಿಗಳು ಸುಗಮ್ಯತೆಯನ್ನು ಪೂರ್ವನಿರ್ಧಾರಿತ ಮಾನದಂಡವಾಗಿ ಅಳವಡಿಸಿಕೊಂಡಿದ್ದೇ ಆದಲ್ಲಿ, ಕೇವಲ ಪ್ರಕ್ರಿಯೆಯ ಮೇಲೆ ಮಾತ್ರ ಧನಾತ್ಮಕ ಪರಿಣಾಮವಲ್ಲ, ಮಾರುಕಟ್ಟೆಯ ಮೇಲೂ ಧನಾತ್ಮಕ ಪರಿಣಾಮ ಉಂಟಾಗಿ,



ಖಾಸಗಿ ಕ್ಷೇತ್ರ ಮತ್ತು ಉತ್ಪಾದನಾ ಕ್ಷೇತ್ರದ ಮೇಲೂ ಗಣನೀಯ ಪರಿಣಾಮ ಉಂಟುಮಾಡಬಹುದು.

### ಖಾಸಗಿ ಕ್ಷೇತ್ರದ ಸೇವೆಗಳು ಮತ್ತು ಸೌಲಭ್ಯಗಳ ಸುಗಮ್ಯತೆ

ಆಳುವ ಸರ್ಕಾರಗಳು ತಮಗಾಗಿ ಮತ್ತು ತಮ್ಮ ಜನರಿಗಾಗಿ ಸೇವೆಗಳನ್ನು ಹಾಗೂ ಸೌಲಭ್ಯಗಳನ್ನು ಹೆಚ್ಚು ಖಾಸಗೀಕರಣ ಗೊಳಿಸುವತ್ತ ಒಲವು ತೋರುತ್ತಿರುವುದರಿಂದ, ಸುಗಮ್ಯತೆಯ ನಿಯಮಾವಳಿಗಳು ಸಮಾನವಾಗಿ ಆ ಕ್ಷೇತ್ರಕ್ಕೂ ಅನ್ವಯವಾಗಬೇಕು. ಪ್ರಸ್ತುತ ನಮ್ಮ ದೇಶ ಭಾರತದಲ್ಲಿ ಖಾಸಗಿ ಕ್ಷೇತ್ರವೂ ಸಹ ಸುಗಮ್ಯತೆಯನ್ನು ಖಾತ್ರಿ ಪಡಿಸಬೇಕು ಎಂಬ ಶಾಸನಬದ್ಧ ಚೌಕಟ್ಟು ಅಥವಾ ನೀತಿ ಜಾರಿಯಲ್ಲಿಲ್ಲ.

ಆದರೆ, ಖಾಸಗಿ ಕ್ಷೇತ್ರ ತಾನು ಒದಗಿಸುವ ಸೇವೆ ಮತ್ತು ಸೇವಾ ಪ್ರದಾತರ ಸೌಲಭ್ಯಗಳಲ್ಲಿ ವಿಶೇಷ ಚೇತನರಿಗೆ ಸುಗಮ್ಯತೆ ಕಲ್ಪಿಸುವ ನಿಟ್ಟಿನಲ್ಲಿ ಸಮಾನತೆ ದರ್ಶಿಸುವ ಬದ್ಧತೆ ಪ್ರದರ್ಶಿಸಬೇಕು. ಅಂತರ್ಜಾಲ ಸೇರಿದಂತೆ ಎಲ್ಲ ಸಾರ್ವಜನಿಕ ಸೇವೆಗಳು ಎಲ್ಲ ಬಗೆಯ ವಿಶೇಷ ಚೇತನರಿಗೆ ಸುಗಮ್ಯವಾಗಿ ಲಭ್ಯವಾಗುವಂತಿರಬೇಕು.

### ಸಲಹೆಗಳು

* ಸಾರ್ವಜನಿಕ ಖರೀದಿಯ ಯಾಂತ್ರಿಕ ವ್ಯವಸ್ಥೆಯಲ್ಲಿ ಖಾಸಗಿ ಕ್ಷೇತ್ರವೂ ಸುಗಮ್ಯತೆಯ ಪರಿಧಿಯಲ್ಲಿ ಜೋಡಣೆ–ಯಾಗಿ ಕಾರ್ಯನಿರ್ವಹಿಸುವಂತೆ ಮಾರ್ಗಸೂಚಿ ಸಿದ್ಧಗೊಳ್ಳಬೇಕಿದೆ. ಉದಾಹರಣೆಗೆ, ಇಡೀ ದೇಶಾದ್ಯಂತ ಸರ್ಕಾರ ಸಾರ್ವಜನಿಕರ ಹಣದಲ್ಲಿ ಹೊತ್ತೊಯ್ಯುವ ಯಂತ್ರ 'ಎಲಿವೇಟರ್'ಗಳನ್ನು ಖರೀದಿಸಲು ಮುಂದಾಗುತ್ತದೆ ಎಂದಿಟ್ಟುಕೊಳ್ಳೋಣ. ಆಗ ಆ ಎಲ್ಲ ಎಲಿವೇಟರ್‌ಗಳು ಸುಗಮ್ಯ ಗುಣಮಟ್ಟ ಹೊಂದಿರುವುದನ್ನು ಖಾತ್ರಿ ಪಡಿಸುವುದನ್ನು ಕಡ್ಡಾಯ ಗೊಳಿಸುವುದು. ಹಾಗಾದಾಗ, ಅತೀ ಹೆಚ್ಚಿನ ಪ್ರಮಾಣದ ಖರೀದಿಯನ್ನು ಅನುಲಕ್ಷಿಸಿ, ಖಾಸಗಿ ಕ್ಷೇತ್ರದ ಎಲಿವೇಟರ್‌ಗಳ ತಯಾರಕರೂ ಸಹ ಸುಗಮ್ಯ ಸಾಧನ ಮಾನದಂಡಗಳನ್ನುಳ್ಳ ಹೊತ್ತೊಯ್ಯುವ ಯಂತ್ರಗಳನ್ನು ತಯಾರಿಸಲು ಬೇಷರತ್ ಮುಂದೆ ಬರಬಹುದು.

* ಖಾಸಗಿ ಕ್ಷೇತ್ರ ಒದಗಿಸುವ ಎಲ್ಲ ಸಾರ್ವಜನಿಕ ಸೇವೆ ಮತ್ತು ಸೌಲಭ್ಯಗಳಿಗೆ ಸರ್ಕಾರದಿಂದ ಮೊದಲು ಪರವಾನಿಗೆ ಪಡೆಯುವುದನ್ನು ಕಡ್ಡಾಯಗೊಳಿಸುವುದು. ಪರವಾನಿಗೆ ನೀಡುವ ಹಂತದಲ್ಲಿಯೇ ಸುಗಮ್ಯ ವ್ಯವಸ್ಥೆ ಕಡ್ಡಾಯವಾಗಿ ಅಳವಡಿಸಿಕೊಂಡಿರುವುದನ್ನು ಪರಿಶೀಲಿಸುವುದಾದಲ್ಲಿ ಅನುಷ್ಠಾನ ಸುಲಭವಾಗುತ್ತದೆ. ಉದಾಹರಣೆಗೆ, ಖಾಸಗಿ ಬಸ್ ಸಂಚಾಲಕರಿಗೆ ನಿಗದಿತ ಮಾರ್ಗಗಳಲ್ಲಿ ಸಾರಿಗೆ ಪರವಾನಿಗೆ ನೀಡುವಾಗ ವಿಶೇಷ ಚೇತನರ ಸರಾಗ ಪ್ರಯಾಣವನ್ನು ಖಾತ್ರಿ ಪಡಿಸುವ ಸದುದ್ದೇಶದಿಂದ 'ಸುಗಮ್ಯ' ಪ್ರಯಾಣಕ್ಕೆ ನಿಗದಿತ ಮಾನದಂಡ ಹಾಗೂ ನಿಯಮಾವಳಿ ರೂಪಿಸಿ 'ಒಪ್ಪಿದಲ್ಲಿ ಮಾತ್ರ ಲೈಸೆನ್ಸ್', ಪ್ರಯಾಣಿಕ ಸ್ನೇಹಿಯಾಗಿ ಅನುಷ್ಠಾನ ಗೊಳಿಸಿದಲ್ಲಿ ಮಾತ್ರ ಪರವಾನಿಗೆ ಮತ್ತು 'ಪರ್ಮಿಟ್ ರಿನ್ಯುವಲ್'; ಜೊತೆಗೆ ಖಾಸಗಿ ಬಸ್‌ನ ನಿರ್ವಾಹಕ ಮತ್ತು ಚಾಲಕರಿಗೂ ವಿಶೇಷ ಚೇತನ ಪ್ರಯಾಣಿಕರ ಬಗ್ಗೆ, ಸುಗಮ್ಯ ಸಾರಿಗೆಯ ಜವಾಬ್ದಾರಿಯ ಬಗ್ಗೆ ಸೂಕ್ತ ತರಬೇತಿ, ತಿಳಿವಳಿಕೆ ಒದಗಿಸುವುದು. ಆಗ, ಧನಾತ್ಮಕ ಪರಿಣಾಮ ಎಂಬಂತೆ ಖಾಸಗಿ ಬಸ್ ನಿರ್ಮಿಸುವ ಕಂಪೆನಿಗಳೂ ಸಹ ವಿಶೇಷ ಚೇತನ ಪ್ರಯಾಣಿಕರ ಬೇಕು–ಬೇಡಗಳನ್ನು ಗಮನಿಸಿ ಸುಗಮ್ಯ ಪ್ರಯಾಣಕ್ಕೆ ಅನುವಾಗುವ ರೀತಿಯಲ್ಲಿ ವಿನ್ಯಾಸ ಮಾಡಲು ಮುಂದಾಗುತ್ತವೆ.




* ಸುಗಮ್ಯತೆಯನ್ನು ಖಾತ್ರಿ ಪಡಿಸಿ–ಕೊಳ್ಳುವ ಉದ್ದೇಶದಿಂದಲೂ ಪ್ರಮಾಣ ಪತ್ರ ಕಡ್ಡಾಯಗೊಳಿಸಬಹುದು. ಈ ಪ್ರಮಾಣ ಪತ್ರವನ್ನು ಸರ್ಕಾರವೇ ನೀಡಬೇಕಾದುದರಿಂದ, ಅತ್ಯುತ್ತಮ ಅನುಷ್ಠಾನ ಆಧರಿಸಿ 'ರೇಟಿಂಗ್ ವ್ಯವಸ್ಥೆ' ಕೂಡ ಜಾರಿ ಗೊಳಿಸಬಹುದು. ಉದಾಹರಣೆಗೆ, ಪ್ರವಾಸೋದ್ಯಮ ಇಲಾಖೆ ಪ್ರವಾಸಿ ಸ್ನೇಹಿ ವ್ಯವಸ್ಥೆಗಳನ್ನು ಪರಿಶೀಲಿಸಿ ಪ್ರವಾಸಿ ತಾಣಗಳಲ್ಲಿನ ಹೊಟೇಲ್‌ಗಳಿಗೆ ಮಾನ್ಯತೆ ಮತ್ತು ರೇಟಿಂಗ್ ನೀಡುವ ತೆರದಿ (ಉದಾ: ಟೆರ್ರಿ ಗ್ರೀನ್ ರೇಟಿಂಗ್ ವ್ಯವಸ್ಥೆ) ಸುಗಮ್ಯಕ್ಕೂ ಈ ಅನುಶಾಸನ ಜಾರಿಗೊಳಿಸಬಹುದು. ಈ ಪ್ರಮಾಣ ಪತ್ರ ಪ್ರದಾನ ಸುಗಮ್ಯ ವ್ಯವಸ್ಥೆಯಲ್ಲಿ ಧನಾತ್ಮಕ ಬದಲಾವಣೆಗಳಿಗೆ ನಾಂದಿ ಹಾಡುತ್ತದೆ. ಕಾರಣ, ಪ್ರಮಾಣ ಪತ್ರ ನೀಡುವಾಗ ಸುಗಮ್ಯಕ್ಕೆ ನೀಡಿದ ಮಹತ್ವ ಅಥವಾ ರೇಟಿಂಗ್ ಆಧರಿಸಿ ಹೊಸ ಹೊಸ ಪ್ರಯೋಗ ಮತ್ತು ಮಾದರಿಗಳನ್ನೂ ಪ್ರಚುರ ಪಡಿಸಲು ಆರೋಗ್ಯಪೂರ್ಣ ಸ್ಪರ್ಧೆ ಏರ್ಪಡಿಸಿದಂತಾಗುತ್ತದೆ. ಇಲ್ಲದೇ ಹೋದರೆ, ಖಾಸಗಿ ಕ್ಷೇತ್ರದವರು ಸುಗಮ್ಯವನ್ನು ಪ್ರಜ್ಞಾಪೂರ್ವಕವಾಗಿ ಅಲಕ್ಷಿಸಬಹುದು!

* ಸುಗಮ್ಯತೆ ಒಂದು ಕಡ್ಡಾಯ ಅಳವಡಿಕೆಯಾಗಿಸಿ ಗುಣಮಟ್ಟ ಖಾತ್ರಿ 'ಚೆಕ್' ಮತ್ತು ಯುಕ್ತ ವ್ಯವಸ್ಥೆಯೊಂದನ್ನು ರೂಪುಗೊಳಿಸುವ ಮನೋಸ್ಥಿತಿ ಇಲ್ಲಿ ನಿರ್ಮಾಣವಾಗಬೇಕು.

ಕಾರಣ, ವಿಶೇಷ ಚೇತನರೊಂದಿಗೆ ನಮಗೆ ಸರಿಯಾಗಿ ನಡೆದುಕೊಳ್ಳಲಾಗದಿದ್ದರೆ ಅಂಗವೈಕಲ್ಯವಿರುವುದು ಅವರಿಗಲ್ಲ; ಸಮಾಜಕ್ಕೆ. ❑

# ವಿಶೇಷಚೇತನರಿಗೆ ಸಮಾನ ಅವಕಾಶ; ಹಕ್ಕುಗಳ ಸಂರಕ್ಷಣೆ

* ಪದ್ಮನಾಭ ಶಿಖರನಹಳ್ಳಿ



**ವಿಶೇಷಚೇತನರಿಗೆ ದೈನಂದಿನ ಜೀವನ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರ ನ್ಯೂನತೆಯ ಪ್ರಮಾಣ ಆಧರಿಸಿ ಮಾಸಿಕವಾಗಿ ರೂ. 600/- ಮತ್ತು ರೂ. 1200/- ಮಾಸಾಶನ ನೀಡುವ ಮೂಲಕ ಸಾಮಾಜಿಕ ಭದ್ರತಾ ಕ್ರಮಗಳನ್ನು ಕೈಗೊಂಡಿದೆ.**

ವಿಶೇಷಚೇತನ ವ್ಯಕ್ತಿಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಪೂರಕವಾಗಿ ಸಮಾನ ಅವಕಾಶಗಳನ್ನು ನೀಡಿ, ಹಕ್ಕುಗಳನ್ನು ಪ್ರತಿಪಾದಿಸಿ ಪೂರ್ಣ ಭಾಗವಹಿಸುವಿಕೆಗೆ ಕಾಯ್ದೆಬದ್ಧವಾದ ವಿಧಾನಗಳ ಮೂಲಕ ಸುವರ್ಣ ಅವಕಾಶ ಕಲ್ಪಿಸುವಲ್ಲಿ 1995 ರ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಪಾತ್ರ ಅತ್ಯಂತ ಪ್ರಮುಖವಾಗಿದೆ. 1996 ಜನವರಿ ತಿಂಗಳಿನ 1 ನೇ ತಾರೀಖಿನಂದು ರಾಷ್ಟ್ರಪತಿಯವರ ಅನುಮೋದನೆಯೊಂದಿಗೆ ಪ್ರಕಟವಾದ ಈ ಅಧಿನಿಯಮವು ಸಂಕ್ಷಿಪ್ತವಾಗಿ 14 ಅಧ್ಯಾಯಗಳಲ್ಲಿ 74 ಪರಿಚ್ಛೇದಗಳ ಮೂಲಕ ವಿಶೇಷಚೇತನರಿಗೆ ನೀಡಲಾಗಿರುವ ಹಕ್ಕುಗಳನ್ನು ಪ್ರತಿಪಾದಿಸಿದೆ. ಅನುಕಂಪ ತೋರದೆ ವಿಶೇಷಚೇತನರಿಗೂ ಸಮಾನ ಅವಕಾಶಗಳನ್ನು ನೀಡಬೇಕೆಂಬ ಮೂಲ ಧ್ಯೇಯೋದ್ದೇಶಗಳನ್ನು ಹೊಂದಿರುವ ಈ ಅಧಿನಿಯಮದ ಸಂಕ್ಷಿಪ್ತ ಪರಿಚಯವನ್ನು ಕೆಳಕಂಡಂತೆ ಪಟ್ಟಿ ಮಾಡಲಾಗಿದೆ.

### ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ

1995 ರ ಅಧಿನಿಯಮದ ಪ್ರಕಾರ ಅಂಗವಿಕಲತೆ ಎಂದರೆ,

1. ಅಂಧತ್ವ
2. ಮಂದದೃಷ್ಟಿ
3. ಕುಷ್ಠರೋಗ ನಿವಾರಿತರು
4. ಶ್ರವಣ ದೋಷವುಳ್ಳವರು
5. ಚಲನಚಲನ ಅಂಗವಿಕಲತೆ ಹೊಂದಿರುವವರು
6. ಬುದ್ಧಿ ಮಾಂದ್ಯತೆ
7. ಮಾನಸಿಕ ಅಸ್ವಸ್ಥತೆ

ಈ ದೋಷಗಳನ್ನು ಹೊಂದಿರಬಹುದಾದ ನ್ಯೂನತೆ ಮತ್ತು ಪ್ರಮಾಣದ ಬಗ್ಗೆ ಅಧ್ಯಾಯ 01 ರ 2ನೇ ಪರಿಚ್ಛೇದದಲ್ಲಿ ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಪಟ್ಟಿ ಮಾಡಿರುವ ನ್ಯೂನತೆಯ ಪ್ರಮಾಣವು ಶೇಕಡ 40 ಕ್ಕಿಂತ ಕಡಿಮೆ ಇರದಂತೆ ಬಳಲುತ್ತಿರುವ ವ್ಯಕ್ತಿಯನ್ನು "ಅಂಗವಿಕಲ ವ್ಯಕ್ತಿ" ಎಂದು ಹೇಳಲಾಗುತ್ತದೆ. ಸದರಿ ನ್ಯೂನತೆಯನ್ನು ಗುಣಪಡಿಸಲಾಗದಂತಹ ಶಾಶ್ವತ ಪ್ರಸಂಗಗಳನ್ನು ಮಾತ್ರ ಅಂಗವಿಕಲ ವ್ಯಕ್ತಿ ಎಂದು ಗುರುತಿಸಿ ಕಾಯ್ದೆಬದ್ಧವಾದ ಅವಕಾಶಗಳಿಗೆ ಪರಿಗಣಿಸಲಾಗುವುದು. ಅಧ್ಯಾಯ 2 ಮತ್ತು 3 ರಲ್ಲಿ ಕೇಂದ್ರ ಮತ್ತು ರಾಜ್ಯ ಸಮನ್ವಯ ಸಮಿತಿಗಳ ರಚನೆ, ಸದಸ್ಯರ ಆಯ್ಕೆ ಮತ್ತು ಸದರಿ ಸಮಿತಿಗಳ ಕಾರ್ಯ ವಿಧಾನದ ಬಗ್ಗೆ 3 ರಿಂದ 24 ರ ಪರಿಚ್ಛೇದಗಳಲ್ಲಿ ಸಂಕ್ಷಿಪ್ತ ನಿರ್ದೇಶನಗಳನ್ನು ನೀಡಲಾಗಿದೆ.

### ವಿಶೇಷಚೇತನ ಸ್ನೇಹಿ ನೀತಿ ನಿರೂಪಣೆ; ಕರ್ನಾಟಕ ಸರ್ಕಾರದ ಪ್ರಯತ್ನಗಳು

❍ ಅಂಗವಿಕಲತೆ ಉಂಟಾಗುವುದನ್ನು ಪ್ರಾರಂಭದಲ್ಲೇ ತಡೆಗಟ್ಟಲು ಕಾಯ್ದೆಯಲ್ಲಿ ನಿಬಂಧಿಸಿರುವಂತೆ ಪ್ರಸವ ಪೂರ್ವ,



* ಸಹಾಯಕ ಆಯುಕ್ತರು, ಕರ್ನಾಟಕ ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಚೇರಿ, ಬೆಂಗಳೂರು. E-mail : scdkarnataka@gmail.com

ಪ್ರಸವ ಸಮಯ ಮತ್ತು ಪ್ರಸವದ ನಂತರ ಮಕ್ಕಳ ಮತ್ತು ತಾಯಿಯ ಆರೋಗ್ಯದ ಬಗ್ಗೆ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಾಥಮಿಕ ಆರೋಗ್ಯ ಕೇಂದ್ರಗಳ ವೈದ್ಯರು, ಶುಶ್ರೂಷಕಿಯರು, ಅಂಗನವಾಡಿ ಕಾರ್ಯಕರ್ತೆಯರ ಮೂಲಕ ಸಾರ್ವಜನಿಕರಿಗೆ ಜಾಗೃತಿ ಕಾರ್ಯಕ್ರಮಗಳ ಮೂಲಕ ಅರಿವು ಮೂಡಿಸುವುದಲ್ಲದೆ ಪೋಲಿಯೊ ಹನಿ ನೀಡುವಂತಹ ವೈದ್ಯಕೀಯ ಸೌಲಭ್ಯಗಳು, ಪೌಷ್ಠಿಕ ಆಹಾರಗಳ ವಿತರಣೆ ಮತ್ತು ವಿಕಲತೆಗೆ ಕಾರಣವಾಗಬಹುದಾದ ರಕ್ತ ಸಂಬಂಧದಲ್ಲಿನ ಮದುವೆಗಳನ್ನು ಸಾಮಾಜಿಕ ಅರಿವು ಮೂಡಿಸುವ ಮೂಲಕ 'ಅಂಗವಿಕಲತೆ ಅಪಾಯ ಸಂಭವ' ದ ಪ್ರಕರಣಗಳನ್ನು ತಪ್ಪಿಸಲು ಪ್ರಯತ್ನಿಸಲಾಗುತ್ತಿದೆ.

❍ ವಿಶೇಷಚೇತನ ಮಕ್ಕಳಿಗೆ "ಕಡ್ಡಾಯ ಶಿಕ್ಷಣ ಹಕ್ಕು" ಕಾಯ್ದೆಯಡಿಯಲ್ಲಿ ಶಿಕ್ಷಣ ನೀಡಲು ಸಾಕಷ್ಟು ಪೂರಕ ಕ್ರಮಗಳನ್ನು ಅನುಸರಿಸಲಾಗುತ್ತಿದೆ. ಯಾವುದೇ ಶಾಲೆಯಲ್ಲಿ ವಿಶೇಷಚೇತನ ಮಕ್ಕಳಿಗೆ ಪ್ರವೇಶವನ್ನು ನಿರಾಕರಿಸುವಂತಿಲ್ಲವೆಂದು ನಿರ್ದೇಶಿಸಲಾಗಿದೆ. ಈ ಪ್ರಯತ್ನದ ಭಾಗವಾಗಿ 2015–16 ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ 1 ರಿಂದ 10 ನೇ ತರಗತಿಯವರೆಗೆ ಸುಮಾರು 1,25,000 ಕ್ಕೂ ಹೆಚ್ಚು ವಿಶೇಷಚೇತನ ಮಕ್ಕಳು ಸರ್ಕಾರಿ ಶಾಲೆಗಳಲ್ಲಿ ದಾಖಲಾಗಿ ಸಮನ್ವಯ ಶಿಕ್ಷಣ ಪಡೆಯುತ್ತಿದ್ದಾರೆ. ನಿರಾಕರಣೆಯಂತಹ ಪ್ರಸಂಗಗಳನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಪಡೆಯಬಹುದು. ಮಕ್ಕಳ ವಿಶೇಷತೆಗನುಗುಣವಾಗಿ ಬೋಧಿಸಲು ಸೇವಾ ನಿರತ ಶಿಕ್ಷಕರಿಗೆ ಸರ್ವ ಶಿಕ್ಷಣ ಅಭಿಯಾನ ಹಾಗೂ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ ಬ್ರೈಲ್ ತರಬೇತಿ, ಸನ್ನೆ ಭಾಷಾ ತರಬೇತಿ ಹಾಗೂ ಬದಿರಾಂಧತೆಯುಳ್ಳ ಮಕ್ಕಳಿಗೆ ಬೋಧಿಸಲು





ಸ್ಪರ್ಶ ಸನ್ನೆ ಭಾಷಾ ತರಬೇತಿಯನ್ನು ನೀಡಲಾಗುತ್ತಿದೆ. ಉಚಿತವಾಗಿ ಬ್ರೈಲ್ ಪುಸ್ತಕಗಳು, ದಪ್ಪ ಅಕ್ಷರದ ಪುಸ್ತಕಗಳು, ಸಾಧನ ಸಲಕರಣೆಗಳು, ಬೋಧನಾ ಕಲಿಕೋಪಕರಣಗಳನ್ನು ನೀಡಲಾಗುತ್ತಿದೆ. ಈ ಸಂಬಂಧ ಹೆಚ್ಚಿನ ಮಾಹಿತಿಯನ್ನು www.schooleducation.kar.nic.in ಮೂಲಕ ಪಡೆಯಬಹುದು. ಸರ್ವ ಶಿಕ್ಷಣ ಅಭಿಯಾನವಷ್ಟೇ ಅಲ್ಲದೆ ವಿಶೇಷಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಮೂಲಕ 8 ಅಂಧರ, ಕಿವುಡ ಮತ್ತು ಮೂಕ ವಿಶೇಷ ಸರ್ಕಾರಿ ಶಾಲೆಗಳ ಮೂಲಕ ಅಗತ್ಯ ಶೈಕ್ಷಣಿಕ ಅವಕಾಶಗಳನ್ನು ನೀಡಲಾಗಿದೆ.

❍ ಕರ್ನಾಟಕ ಸರ್ಕಾರವು ಹೊರಡಿಸಿರುವ ಆದೇಶದಲ್ಲಿ ಎ ಮತ್ತು ಬಿ ವೃಂದದಲ್ಲಿ ಹುದ್ದೆಗಳಿಗೆ ನೇಮಕಾತಿ ಮಾಡುವಾಗ ಶೇಕಡ 3% ರಷ್ಟು ಹುದ್ದೆಗಳನ್ನು ಹಾಗೂ ಸಿ ಮತ್ತು ಡಿ ವೃಂದದ ಹುದ್ದೆಗಳನ್ನು ತುಂಬುವಾಗ ಶೇಕಡ 5% ರಷ್ಟನ್ನು ವಿಶೇಷಚೇತನರಿಗೆ ಮೀಸಲಿಡಬೇಕೆಂದು ಆದೇಶಿಸಲಾಗಿದೆ. ಎಲ್ಲಾ ಇಲಾಖೆಗಳ ಹುದ್ದೆಗಳನ್ನು ಗುರುತಿಸುವ ಸಮಿತಿಯಲ್ಲಿ ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರು ಖಾಯಂ ಸದಸ್ಯರಾಗಿರುತ್ತಾರೆ.

ದೃಷ್ಟಿ ಹೀನತೆ ಅಥವಾ ಕಡಿಮೆ ದೃಷ್ಟಿ, ಶ್ರವಣ ದೋಷವುಳ್ಳವರು ಹಾಗೂ ದೈಹಿಕ ನ್ಯೂನತೆ ಅಥವಾ ಸೆರೆಬ್ರಲ್ ಪಾಲ್ಸಿ ನ್ಯೂನತೆ ಇರುವವರಿಗೆ 20 ಬಿಂದುಗಳಂತೆ ವಿಭಾಗಿಸಿದ 100 ಹುದ್ದೆಗಳನ್ನು ತುಂಬಲು ಬಿಂದುಗಳ ನಿರ್ದಿಷ್ಟತೆಯನ್ನು ಗುರುತಿಸಲಾಗಿದೆ. ಈ ಪ್ರಕಾರ ಎ ಮತ್ತು ಬಿ ವೃಂದಕ್ಕೆ 4, 44 ಹಾಗೂ 84 ನೇ ಬಿಂದುಗಳಲ್ಲಿಯೂ ಮತ್ತು ಸಿ ಮತ್ತು ಡಿ ವೃಂದಕ್ಕೆ 4,24,44,64 ಹಾಗೂ 84 ನೇ ಬಿಂದುಗಳನ್ನು ಗುರುತಿಸಿ ಸದರಿ ಬಿಂದುಗಳಲ್ಲಿ ನಿರ್ದಿಷ್ಟಪಡಿಸಿದ ನ್ಯೂನ್ಯತೆಯುಳ್ಳ ಅರ್ಹ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳಲು ನಿರ್ದೇಶಿಸಲಾಗಿದೆ. ವಿಶೇಷಚೇತನ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ನಂತರದ ನೇಮಕಾತಿಯಲ್ಲಿ ಈ ಹಿಂದಿನ ಖಾಲಿ ಹುದ್ದೆಗೆ ಅರ್ಹ ವಿಶೇಷಚೇತನ ಅಭ್ಯರ್ಥಿಗಳನ್ನೇ ನೇಮಕಾತಿ ಮಾಡಿಕೊಳ್ಳುವಂತೆ ಹಾಗೊಂದು ವೇಳೆ ನಿರ್ದಿಷ್ಟಪಡಿಸಿದ ನ್ಯೂನತೆಯ ಬಿಂದುಗಳನುಸಾರ ಅಭ್ಯರ್ಥಿಗಳು ಲಭ್ಯವಾಗದಿದ್ದಲ್ಲಿ ಲಭ್ಯ ಇತರೆ ವಿಶೇಷಯುಳ್ಳ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವಂತೆ ಮತ್ತು ವಿಶೇಷಚೇತನ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಅಂಗವಿಕಲತೆಯನ್ನು ಹೊರತುಪಡಿಸಿ ಇತರೆ ಸಮಾನ್ಯ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳಲು ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ.

❍ ವಿಶೇಷಚೇತನರಿಗೆ ಉದ್ಯೋಗ ಒದಗಿಸಿಕೊಡಲು ಕರ್ನಾಟಕ ಸರ್ಕಾರವು ಯಾವುದೇ ಕೈಗಾರಿಕೆಗಳನ್ನು ಸ್ಥಾಪಿಸಲು ಹಾಗೂ ಎಲ್ಲಾ ಕೈಗಾರಿಕೋದ್ಯಮ ಸಂಸ್ಥೆಗಳಲ್ಲಿ ಶೇಕಡ 5 ರ ಮೀಸಲಾತಿಯಲ್ಲಿ ವಿಶೇಷಚೇತನರನ್ನು ನೇಮಿಸಿಕೊಳ್ಳುವಂತೆ ಮಾರ್ಗಸೂಚಿ ನೀಡಿದೆ. ನೇಮಕಾತಿ ಮಾಡಿಕೊಳ್ಳುವಾಗ ವಿಶೇಷಚೇತನರಿಗೆ ಇತರೆ ಅಭ್ಯರ್ಥಿಗಳಿಗಿಂತ ಕನಿಷ್ಠ 10 ವರ್ಷಗಳ ವಯೋಮಾನದ ವಿನಾಯಿತಿ ನೀಡುವಂತೆ ಆದೇಶಿಸಲಾಗಿದೆ.

❍ ಅಗತ್ಯವಿರುವ ವಿಶೇಷಚೇತನರಿಗೆ ಸಾಧನ ಸಲಕರಣೆಗಳನ್ನು ಪ್ರತಿ ವರ್ಷ

ನೀಡಲಾಗುತ್ತಿದೆ. ವಿಶೇಷಚೇತನರು ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆಯ ಮೂಲಕ ಎಲ್ಲಾ ವಯೋಮಾನದವರಿಗೆ ಈ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಸರ್ವ ಶಿಕ್ಷಣ ಅಭಿಯಾನ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿಯಲ್ಲಿ 6 ರಿಂದ 16 ರ ವಯೋಮಾನದ ವಿಶೇಷಚೇತನ ಮಕ್ಕಳಿಗೆ ಅಗತ್ಯ ಸಾಧನ ಸಲಕರಣೆಗಳನ್ನು ನೀಡಲಾಗುತ್ತಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿಯಲ್ಲಿ ವಾರ್ಷಿಕವಾಗಿ ಖರ್ಚು ಮಾಡುವ ಒಟ್ಟು ಹಣದಲ್ಲಿ ಶೇಕಡ 3 ರಷ್ಟು ಅನುದಾನವನ್ನು ವಿಶೇಷಚೇತನರನ್ನು ದೈಹಿಕವಾಗಿ ಮತ್ತು ಆರ್ಥಿಕವಾಗಿ ಸಬಲೀಕರಿಸಲು ಖರ್ಚು ಮಾಡಲಾಗುತ್ತಿದೆ. ಈ ವಿಷಯವಾಗಿ ಅಗತ್ಯ ಮಾಹಿತಿಯನ್ನು ಆಯಾ ತಾಲ್ಲೂಕಿನ ತಾಲ್ಲೂಕಾ ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳು, ತಹಶೀಲ್ದಾರ್‌ರವರು ಹಾಗೂ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜವಾಬ್ದಾರರಾಗಿರುವ ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳವರನ್ನು ಭೇಟಿ ಮಾಡಿ ಮಾಹಿತಿ ಪಡೆಯಬಹುದು.

❍ ಪರಿಚ್ಛೇದದ 43 ನೇ ಕಾಯ್ದೆಯಲ್ಲಿ ನಿರ್ದೇಶಿಸಿರುವಂತೆ ಭೂಮಿ, ಮನೆ, ವ್ಯಾಪಾರದ ಸಂಸ್ಥೆ, ವಿಶೇಷ ಮನರಂಜನೆ ಕೇಂದ್ರಗಳ ಸ್ಥಾಪನೆ, ಸಂಶೋಧನಾ ಕೇಂದ್ರಗಳ ಸ್ಥಾಪನೆ ಹಾಗೂ ವಿಶೇಷಚೇತನ ಉದ್ಯಮಿಗಳಿಗೆ ಕಾರ್ಖಾನೆಗಳ ಸ್ಥಾಪನೆಯಲ್ಲಿ ವಿಶೇಷಚೇತನರಿಗೆ ಪ್ರಾಧಾನ್ಯತೆ ನೀಡಲು ಕ್ರಮ ಕೈಗೊಳ್ಳಲಾಗಿದೆ. ಸಂಬಂಧಿಸಿದ ಇಲಾಖೆಗಳ ಶಾಖಾ ಕಛೇರಿಗಳನ್ನು ಸ್ಥಳೀಯವಾಗಿ ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆದುಕೊಳ್ಳಬಹುದು.





❍ ಯಾವುದೇ ಸಾರಿಗೆ ವಾಹನದಲ್ಲಿ ವಿಶೇಷಚೇತನರಿಗೆ ಆಸನಗಳನ್ನು ಮೀಸಲಿಡಲು ಆದೇಶ ನೀಡಲಾಗಿದೆ. ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣಿಸುವ ವಿಶೇಷಚೇತನರಿಗೆ ರಿಯಾಯಿತಿ ದರದಲ್ಲಿ / ಉಚಿತವಾಗಿ ಬಸ್ ಪಾಸ್‌ಗಳನ್ನು ನೀಡಲಾಗಿದೆ.

ಯಾವುದೇ ಸಾರ್ವಜನಿಕ ಕಟ್ಟಡಗಳ ನಿರ್ಮಾಣದಲ್ಲಿ ವಿಶೇಷಚೇತನ ಸ್ನೇಹಿ ವಾತಾವರಣ ನಿರ್ಮಿಸುವ ಭಾಗವಾಗಿ ಹಿಡಿಕೆಗಳೊಂದಿಗೆ ಇಳಿಜಾರು ನಿರ್ಮಾಣ, ಗಾಲಿ ಕುರ್ಚಿಗಳ ವ್ಯವಸ್ಥೆ, ವಿಶೇಷಚೇತನ ಸ್ನೇಹಿ ಶೌಚಾಲಯಗಳು, ಲಿಫ್ಟ್, ಎಲಿವೇಟರ್ ಮತ್ತು ಎ.ಟಿ.ಎಂ ಗಳಲ್ಲಿ ಬ್ರೈಲ್ ಮತ್ತು ಶಬ್ದ ಸಂಕೇತಗಳನ್ನು ಕಲ್ಪಿಸಲಾಗಿದೆ. ಇಂತಹ ಸೌಲಭ್ಯಗಳ ವ್ಯವಸ್ಥೆ ಮಾಡದಿರುವ ಅಥವಾ ಕಲ್ಪಿಸದಿರುವ ಬಗ್ಗೆ ದೂರುಗಳನ್ನು ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಆಯುಕ್ತರಿಗೆ ಸಲ್ಲಿಸಬಹುದು.

❍ 47 ರ ಕಾಯ್ದೆಯ ನಿರ್ದೇಶನದಂತೆ ಸರ್ಕಾರಿ ಉದ್ಯೋಗದಲ್ಲಿ ವಿಶೇಷಚೇತನರಿಗೆ ಮೀಸಲಾತಿ ನೀಡುವುದಷ್ಟೇ ಅಲ್ಲ. ಸೇವೆಯಲ್ಲಿರುವಾಗ ಉಂಟಾಗುವ ಶಾಶ್ವತ ಅಂಗವಿಕಲ ನೌಕರರನ್ನು ಅಂಗವಿಕಲತೆಯ ಕಾರಣ ನೀಡಿ ಸೇವೆಯಿಂದ ತೆಗೆದು ಹಾಕುವಂತಿಲ್ಲವೆಂದು ಮತ್ತು ಸದರಿ ವಿಶೇಷಚೇತನರ ದರ್ಜೆಯನ್ನು ಇಳಿಸದೆ ಅವರಿಗೆ ಸೂಕ್ತವೆನಿಸುವ ಕೆಲಸ ನೀಡಬೇಕು.

ಒಂದು ವೇಳೆ ಸೂಕ್ತ ಕೆಲಸದ ಹೊಂದಾಣಿಕೆ ಮಾಡಲು ಸಾಧ್ಯವಾಗದಿದ್ದಲ್ಲಿ ಸದರಿ ವಿಶೇಷಚೇತನ ನೌಕರರ ಸೇವಾವಧಿ ಇರುವವರೆಗೂ ಸಂಖ್ಯಾತಿರಿಕ್ತ ಹುದ್ದೆಯನ್ನು ಸೃಜಿಸುವಂತೆ ಆದೇಶ ನೀಡಲಾಗಿದೆ.

❍ ವಿಶೇಷಚೇತನರಿಗೆ ದೈನಂದಿನ ಜೀವನ ನಿರ್ವಹಣೆಗಾಗಿ ಕರ್ನಾಟಕ ಸರ್ಕಾರದ ಕಂದಾಯ ಇಲಾಖೆಯ ಮೂಲಕ ಶೇಕಡ 40 ರಿಂದ 75 ರವರೆಗಿನ ನ್ಯೂನತೆಯ ಪ್ರಮಾಣ ಹೊಂದಿರುವವರಿಗೆ ಮಾಸಿಕವಾಗಿ ರೂ. 600/- ಗಳು ಮತ್ತು ಶೇಕಡ 75 ಕ್ಕಿಂತ ಹೆಚ್ಚಿನ ನ್ಯೂನತೆ ಇರುವ ವಿಶೇಷಚೇತನರಿಗೆ ಮಾಸಿಕವಾಗಿ ರೂ. 1200/- ಗಳ ಮಾಸಾಶನ ನೀಡುವ ಮೂಲಕ ಸಾಮಾಜಿಕ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅರ್ಹ ವಿಶೇಷಚೇತನರಿಗೆ ಸಕಾಲಿಕವಾಗಿ ಮಾಸಾಶನ ದೊರಕದಿರುವ ಮತ್ತು ವಿಶೇಷಚೇತನರ ಹೆಸರಿನಲ್ಲಿ ಸದರಿ ಸೌಲಭ್ಯವನ್ನು ದುರುಪಯೋಗಪಡಿಸಿ-ಕೊಳ್ಳುವಂತಹ ಪ್ರಕರಣಗಳನ್ನು ಅಂಗವಿಕಲರ ಅಧಿನಿಯಮದ 59 ನೇ ಕಲಂ ನಡಿಯಲ್ಲಿ ಪ್ರಕರಣ ದಾಖಲಿಸಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುತ್ತಿದೆ.

### ಅಂಗವಿಕಲತೆಯ ನಿರ್ಧರಣೆ ಮತ್ತು ಶಾಶ್ವತ ಅಂಗವಿಕಲತೆಯ ಪ್ರಮಾಣ ಪತ್ರ ನೀಡುವುದು.

ಕಾಯ್ದೆಯಲ್ಲಿ ನಿರ್ಬಂಧಿಸಿರುವ ಸೌಲಭ್ಯಗಳನ್ನು ವಿಶೇಷಚೇತನರಿಗೆ ನೀಡಲು ಅರ್ಹ ವಿಶೇಷಚೇತನರನ್ನು ಗುರುತಿಸುವುದು ಮುಖ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಕಾಯ್ದೆಯನ್ನು ಅನುಸರಿಸಿ ಶಾಶ್ವತ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡಲು ನಮೂನೆ-1 ರಲ್ಲಿ ನೀಡಲು ಕರ್ನಾಟಕ ಸರ್ಕಾರವು ಏಪ್ರಿಲ್ 2014 ರ ತಿಂಗಳಿನಲ್ಲಿ ಅಗತ್ಯ ನಿಯಮಗಳನ್ನು ಆದೇಶ ಸಂಖ್ಯೆ ಡಬ್ಲ್ಯುಸಿಡಿ 172 ಪಿ.ಹೆಚ್.ಪಿ 98 ರಲ್ಲಿ ರಚಿಸಿದೆ.

ಈ ದಿಸೆಯಲ್ಲಿ ಅಂಧತ್ವ, ಕಡಿಮೆ ದೃಷ್ಟಿ, ಶ್ರವಣದೋಷ ಬುದ್ಧಿ ಮಾಂದ್ಯತೆ ಮತ್ತು ಮಾನಸಿಕ ವಿಕಲತೆ ಕ್ಷೇತ್ರದಲ್ಲಿ ಪರಿಣಿತರಾದ 03 ಮಂದಿ ವೈದ್ಯಕೀಯ ಪರಿಣಿತರ ಮಂಡಳಿಯನ್ನು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಹಂತದ ದವಾಖಾನೆಗಳಲ್ಲಿ ರಚಿಸಲಾಗಿದೆ.

ಮಂಡಳಿಯ ಸದಸ್ಯರು ಅರ್ಜಿದಾರರನ್ನು ಖುದ್ದು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ಭವಿಷ್ಯದಲ್ಲಿ ಅಂಗವಿಕಲತೆಯ ಪ್ರಮಾಣದಲ್ಲಿ ವ್ಯತ್ಯಯವಾಗಲು ಅವಕಾಶ ಇಲ್ಲದಿರುವ ಸಂದರ್ಭಗಳಲ್ಲಿ ಶಾಶ್ವತ ಅಂಗವಿಕಲತೆಯ ಪ್ರಮಾಣ ಪತ್ರವನ್ನು ವಿತರಿಸಲು ಕ್ರಮ ಮಾಡಲಾಗಿದೆ. ಕರ್ನಾಟಕ ರಾಜ್ಯದಲ್ಲಿ 2011 ರ ಜನಗಣತಿಯ ಪ್ರಕಾರ 13,24,205 ಮಂದಿ ಅಂಗವಿಕಲರನ್ನು ಗುರುತಿಸಲಾಗಿದ್ದು, ಬಹುತೇಕ ಎಲ್ಲರಿಗೂ ಅಂಗವಿಕಲತೆಯ ಪ್ರಮಾಣ ಪತ್ರಗಳನ್ನು ವಿತರಿಸಲಾಗಿದೆ.



### ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಆಯುಕ್ತರ ನೇಮಕ, ಕರ್ತವ್ಯಗಳು

ವಿಶೇಷಚೇತನರಿಗೆ ಕಾಯ್ದೆಯಲ್ಲಿ ನಿರ್ದೇಶಿಸಿದ ಸೌಲಭ್ಯಗಳನ್ನು ಒದಗಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ಹಂತದಲ್ಲಿ ಮುಖ್ಯ ಮತ್ತು ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರನ್ನು ನೇಮಿಸಲು ಅಧಿನಿಯಮದ 57 ಮತ್ತು 60 ನೇ ಕಲಂನಲ್ಲಿ ನಿರ್ದೇಶನ ನೀಡಲಾಗಿದೆ.

ಈ ಪ್ರಕಾರ ಕರ್ನಾಟಕ ರಾಜ್ಯದಲ್ಲಿ 1998 ರಿಂದ ಈ ವರೆಗೆ ಒಟ್ಟು 13 ಮಂದಿ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ಆಯುಕ್ತರಾಗಿ ಕರ್ತವ್ಯ ನಿರ್ವಹಿಸಿದ್ದಾರೆ.

ಪ್ರಸ್ತುತ ರಾಜ್ಯ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಕೆ.ಎಸ್. ರಾಜಣ್ಣ ರವರು ಶೇಕಡ 80 ರಷ್ಟು ದೈಹಿಕ ವಿಶೇಷಚೇತನರಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಕೊಡಮಾಡುವ ಹಲವು ಪ್ರಶಸ್ತಿಗಳನ್ನು ಪಡೆದಿರುತ್ತಾರೆ.

ಅಂಗವಿಕಲ ವ್ಯಕ್ತಿಗಳ ಆಯುಕ್ತರನ್ನಾಗಿ ಅಂಗವಿಕಲರನ್ನೇ ಪ್ರಪ್ರಥಮವಾಗಿ ನೇಮಕ ಮಾಡಿದ ಕೀರ್ತಿ ಕರ್ನಾಟಕ ರಾಜ್ಯ ಸರ್ಕಾರಕ್ಕೆ ಸಲ್ಲುತ್ತದೆ. ಆಯುಕ್ತರು ನಿರ್ವಹಿಸುತ್ತಿರುವ ಕರ್ತವ್ಯಗಳ ಸಂಕ್ಷಿಪ್ತ ವಿವರವನ್ನು ಮುಂದಿನಂತೆ ಪಟ್ಟಿ ಮಾಡಲಾಗಿದೆ.

❍ ವಿಶೇಷಚೇತನ ವ್ಯಕ್ತಿಗಳ ಪ್ರಯೋಜನಕ್ಕಾಗಿ ಸರ್ಕಾರದಿಂದ ಅನುಷ್ಠಾನ ಮಾಡುವ ಕಾರ್ಯಕ್ರಮ ಮತ್ತು ಯೋಜನೆಗಳ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರದ ಇತರೆ ಇಲಾಖೆಗಳೊಂದಿಗೆ ಸಮಾಲೋಚನೆ ಮಾಡಿ ಸೂಕ್ತ ಸಲಹೆ ಮತ್ತು ಸೂಚನೆಗಳನ್ನು ನೀಡುವುದು.

❍ ವಿಶೇಷಚೇತನರಿಗಾಗಿ ಹಂಚುವ ನಿಧಿಯ ಬಳಕೆಯ ಮೇಲ್ವಿಚಾರಣೆ ಮಾಡುವುದು.

❍ ವಿಶೇಷಚೇತನರ ಹಕ್ಕು ಮತ್ತು ಪ್ರಯೋಜನಗಳನ್ನು ಸಂರಕ್ಷಿಸುವುದಕ್ಕೆ ಕ್ರಮ ಮಾಡುವುದು.

❍ ವಿಶೇಷಚೇತನ ವ್ಯಕ್ತಿಗಳ ಹಕ್ಕುಗಳನ್ನು ಕಸಿದುಕೊಳ್ಳುವ ದೂರುಗಳನ್ನು ಭಾರತೀಯ ದಂಡ ಸಂಹಿತೆಯ 193 ಮತ್ತು




228 ರ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ನ್ಯಾಯಿಕ ನಿರ್ಣಯ ಮಾಡುವುದು.

❍ ಅಂಗವಿಕಲರ ಅಧಿನಿಯಮದ ಕಛೇರಿಯ ಕಾರ್ಯ ನಿರ್ವಹಣೆಯ ಬಗ್ಗೆ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸುವುದು.

❍ ಸಿವಿಲ್ ನ್ಯಾಯಾಲಯದ ಅಧಿಕಾರವನ್ನು ಹೊಂದಿರುವ ಆಯುಕ್ತರು ಯಾವುದೇ ಸಾಕ್ಷಿಗಳನ್ನು ಕರೆಸುವ, ಹಾಜರಿಗೆ ಒತ್ತಾಯಿಸುವ, ಅಗತ್ಯ ದಸ್ತಾವೇಜುಗಳನ್ನು ಶೋಧಿಸಲು ಹಾಜರುಪಡಿಸುವಂತೆ ಸೂಚಿಸುವ, ಯಾವುದೇ ಕಛೇರಿಯಿಂದ ಸಾರ್ವಜನಿಕ ದಾಖಲೆಯನ್ನು ಪಡೆಯುವ ಮತ್ತು ಸಾಕ್ಷಿಗಳನ್ನು ಅಥವಾ ದಸ್ತಾವೇಜುಗಳನ್ನು ಪರೀಕ್ಷಿಸಲು ಆಯೋಗಗಳನ್ನು ಹೊರಡಿಸುವ ಅಧಿಕಾರವನ್ನು ಹೊಂದಿರುತ್ತಾರೆ.

### ಕಾರ್ಯ ನಿರ್ವಹಣೆಯ ಯಶಸ್ವಿ ಪ್ರಸಂಗಗಳು

* ಸರ್ಕಾರಿ ಸೇವೆಗಳಲ್ಲಿ ವಿಶೇಷ ಚೇತನರಿಗೆ ನೇಮಕಾತಿ ಮತ್ತು ಸೇವಾ ನಿರತ ನೌಕರರ ಮೇಲೆ ನಡೆಯುವ ಕಿರುಕುಳದಂತಹ ಸುಮಾರು 500 ಕ್ಕೂ ಹೆಚ್ಚು ಪ್ರಕರಣಗಳನ್ನು ದೂರಿನ ಮೇಲೆ ಮತ್ತು ಸ್ವ ಇಚ್ಛಾ ಪ್ರಕರಣವಾಗಿ ದಾಖಲಿಸಿಕೊಂಡು ಸೂಕ್ತ ನ್ಯಾಯ ನಿರ್ಣಯ ಮಾಡಲಾಗಿದೆ.

* ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ಇತರೆ ಸರ್ಕಾರಿ ಸಂಸ್ಥೆಗಳು ಭೂಮಿ ಮತ್ತು ಮನೆ ಹಂಚಿಕೆ ಮಾಡಬೇಕಾದ ಸಂದರ್ಭದಲ್ಲಿ ವಿಶೇಷಚೇತನರಿಗೆ ನಿಯಮಕ್ಕೆ ವಿರುದ್ಧವಾಗಿ ಶೇಕಡ 1 ರಷ್ಟು ನೀಡಲಾಗಿದ್ದ ಮೀಸಲಾತಿಯನ್ನು ಶೇಕಡ 3 ರಷ್ಟನ್ನು ನೀಡುವಂತೆ ಆದೇಶ ನೀಡಿ ಅನುಪಾಲನೆಯಾಗಿರುವ ಬಗ್ಗೆ ದೃಢಪಡಿಸಿಕೊಳ್ಳಲಾಗಿದೆ.

(42ನೇ ಪುಟಕ್ಕೆ)

ಕರುಣ

# ಸಂವಹನ ಸಾಕ್ಷಾತ್ಕಾರ

* ಸಾವಿತ್ರಿ ಎಸ್. ಆರ್.




**ಎಲ್ಲಾ ಬೆಳವಣಿಗೆಗಳಂತೆ ಮಕ್ಕಳಲ್ಲಿ ಮಾತು ಹಾಗೂ ಭಾಷೆಯ ಬೆಳವಣಿಗೆಯೂ ಆಗುತ್ತದೆ. ಕೆಲವು ಮಕ್ಕಳಲ್ಲಿ ಅನೇಕ ಕಾರಣಗಳಿಂದ ಭಾಷೆಯ ಬೆಳವಣಿಗೆ ಸಮರ್ಪಕವಾಗಿ ಆಗುವುದಿಲ್ಲ. ಉದಾಹರಣೆಗೆ ಕಿವಿ ಕೇಳಿಸದೆ ಇರುವುದು, ಬುದ್ಧಿ ಮಾಂದ್ಯತೆ, ತಂತನತೆ (ಆಟಿಸಮ್), ಸೀಳು ತುಟಿ ಹಾಗೂ ಅಂಗುಳ, ನರಗಳ ದೋಷ, ಕಲಿಕಾ ನ್ಯೂನತೆ (ಲರ್ನಿಂಗ್ ಡಿಸೆಬಿಲಿಟಿ) ಇತ್ಯಾದಿ.**

ಮೈಸೂರಿನಲ್ಲಿ ಆಗಸ್ಟ್ 9, 1965 ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಲೋಗೂಪೆಡಿಕ್ಸ್ ಹೆಸರಿನಲ್ಲಿ ಪ್ರಾರಂಭವಾದ ಸಂಸ್ಥೆಯು ಅಕ್ಟೋಬರ್ 10 1966ರಲ್ಲಿ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯಾಗಿ ಮಾರ್ಪಟ್ಟು ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಡಿ ಸ್ಥಾಪಿತವಾಯಿತು. ಅಂದು ಸಸಿಯಾಗಿ ಸ್ಥಾಪಿತವಾದ ಸಂಸ್ಥೆಯು ಇಂದು ಮರವಾಗಿ ಬೆಳೆದಿದೆ.

ಈ ಸಂಸ್ಥೆಯ ಮುಖ್ಯ ಉದ್ದೇಶಗಳು ನಾಲ್ಕು. ಸಂವಹನ ಮತ್ತು ಅದರ ದೋಷಗಳ ಬಗ್ಗೆ (1) ಮಾನವ ಸಂಪನ್ಮೂಲವನ್ನು ರೂಪಿಸುವುದು, (2) ಸಂಶೋಧನೆ ಕೈಗೊಳ್ಳುವುದು, (3) ಸಂವಹನ ದೋಷಗಳಿರುವವರಿಗೆ ಚಿಕಿತ್ಸೆ ಮಾಡುವುದು, ಹಾಗೂ (4) ಸಂವಹನ ದೋಷಗಳ ಬಗ್ಗೆ ಜನರಿಗೆ ಅರಿವು ಮೂಡಿಸುವುದು.

1966 ರಲ್ಲಿ ಸ್ನಾತಕೋತ್ತರ ತರಬೇತಿಯಿಂದ ಪ್ರಾರಂಭವಾದ ಸಂಸ್ಥೆಯು ಇಂದು 17 ವಿವಿಧ ತರಬೇತಿಗಳನ್ನು ನೀಡುತ್ತಿದೆ. ಹತ್ತು ವಿದ್ಯಾರ್ಥಿಗಳಿಂದ ಪ್ರಾರಂಭವಾದ ಸಂಸ್ಥೆಯು ಇಂದು 440 ವಿದ್ಯಾರ್ಥಿಗಳನ್ನು ಹೊಂದಿದೆ. ಅಂದು ಶೂನ್ಯದಿಂದ ಆರಂಭವಾದ ಸಂಸ್ಥೆಯು ಇಂದು ವರ್ಷಕ್ಕೆ ಸರಾಸರಿ 80 ಸಂಶೋಧನಾ ಪ್ರಬಂಧಗಳನ್ನು ಪ್ರಕಟ ಮಾಡುತ್ತಿದೆ. ಅಂದು ಪ್ರತಿ ದಿನ 4–5 ಸಂವಹನ ದೋಷವುಳ್ಳ ರೋಗಿಗಳನ್ನು ಚಿಕಿತ್ಸೆ ಮಾಡುತ್ತಿದ್ದ ಸಂಸ್ಥೆಯು ಇಂದು ಸರಾಸರಿ 250–300 ರೋಗಿಗಳಿಗೆ ಚಿಕಿತ್ಸೆ ಉಪಚಾರ ನೀಡುತ್ತಿದೆ.

ಸಂವಹನ ದೋಷಗಳೆಂದರೆ ಮಾತು, ಭಾಷೆ ಹಾಗೂ ಕಿವಿಯ ತೊಂದರೆಗಳು. ಉಗ್ಗು, ಧ್ವನಿಯ ದೋಷಗಳು, ಹಾಗೂ ಉಚ್ಚರಣಾ ದೋಷಗಳು ಮಾತಿನ ತೊಂದರೆಗಳು.

**ಕಾರಣ**

ಮಾತಿನ ತೊಂದರೆಗಳಿಗೆ ಅನೇಕ ನರ ಸಂಬಂಧಿ, ಮಾತನಾಡುವ ಅಂಗ ಸಂಬಂಧಿ, ಹಾಗೂ ಅನುಕರಣೆಗಳು ಕಾರಣವಾಗಿರಬಹುದು. ಎಲ್ಲಾ ಬೆಳವಣಿಗೆಗಳಂತೆ ಮಕ್ಕಳಲ್ಲಿ ಮಾತು ಹಾಗೂ ಭಾಷೆಯ ಬೆಳವಣಿಗೆಯೂ ಆಗುತ್ತದೆ.ಕೆಲವು ಮಕ್ಕಳಲ್ಲಿ ಅನೇಕ ಕಾರಣಗಳಿಂದ ಭಾಷೆಯ ಬೆಳವಣಿಗೆ ಸಮರ್ಪಕವಾಗಿ ಆಗುವುದಿಲ್ಲ.



ಉದಾಹರಣೆಗೆ ಕಿವಿ ಕೇಳಿಸದೆ ಇರುವುದು, ಬುದ್ಧಿ ಮಾಂದ್ಯತೆ, ತಂತನತೆ (ಆಟಿಸಮ್), ಸೀಳು ತುಟಿ ಹಾಗೂ ಅಂಗುಳ, ನರಗಳ ದೋಷ, ಕಲಿಕಾ ನ್ಯೂನತೆ (ಲರ್ನಿಂಗ್ ಡಿಸೆಬಿಲಿಟಿ) ಇತ್ಯಾದಿ. ಇದಲ್ಲದೆ ಪಾರ್ಶ್ವ ವಾಯು, ವೃದ್ಧಾಪ್ಯದಲ್ಲಿ ಮರೆವು ಹಾಗೂ ಅನೇಕ ನರ ಸಂಬಂಧಿ ದೋಷಗಳಿಂದ,

* ನಿರ್ದೇಶಕರು, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ, ಮೈಸೂರು, 570006. Email : director@aiishmysore.in



ಮೆದುಳಿಗೆ ಪೆಟ್ಟು ಬಿದ್ದಾಗ ಕಲಿತ ಭಾಷೆ ನಾಶವಾಗುತ್ತದೆ.

ಕಿವಿಗೆ ಸಂಬಂಧಿಸಿದ ತೊಂದರೆಗಳು ಹೊರಗಿವಿ, ಮಧ್ಯ ಕಿವಿ, ಒಳಗಿವಿ, ಎಂಟನೆಯ ನರ ಅಥವಾ ಮೆದುಳಿನ ದೋಷಗಳಿಂದ ಉಂಟಾಗುತ್ತದೆ. ಉದಾಹರಣೆಗೆ ಹೊರಗಿವಿಯಲ್ಲಿ ಗುಗ್ಗೆ, ಅಥವಾ ಹೊರಗಿವಿಯೇ ಇಲ್ಲದಿರುವುದು ಕಿವುಡುತನಕ್ಕೆ ಕಾರಣವಾಗುತ್ತದೆ. ಅಂತೆಯೇ ಮಧ್ಯ ಕಿವಿಯಲ್ಲಿ ಮೂರು ಸೂಕ್ಷ್ಮವಾದ ಮೂಳೆಗಳಿವೆ. ಇವುಗಳಿಗೆ ಯಾವುದೇ ತೊಂದರೆಯಾದಾಗ ಅಥವಾ ಕೀವು ಇದ್ದಾಗ ಕಿವುಡುತನ ಉಂಟಾಗುತ್ತದೆ. ಒಳಗಿವಿಯಲ್ಲಿ ಹೇರ್ ಸೆಲ್‌ಗಳಲ್ಲಿ ತೊಂದರೆಯಾದಾಗ ಕಿವುಡು ಉಂಟಾಗುತ್ತದೆ. ಆಂತೆಯೇ ಎಂಟನೆಯ ನರಕ್ಕೆ ಅಥವಾ ಮೆದುಳಿಗೆ ಪೆಟ್ಟಾದಾಗ ಕಿವಿ ಸರಿಯಾಗಿ ಕೇಳಿಸುವುದಿಲ್ಲ.

ಸಂಸ್ಥೆಯಲ್ಲಿ ಅಭ್ಯಾಸ ಮಾಡುವ ವಿದ್ಯಾರ್ಥಿಗಳಿಗೆ ಸಂವಹನ, ಅದರ ದೋಷಗಳ ತಪಾಸಣೆ ಮತ್ತು ಚಿಕಿತ್ಸೆಯ ಬಗ್ಗೆ ತರಬೇತಿ ನೀಡಲಾಗುತ್ತದೆ.

ಈ ಎಲ್ಲ ಸಂವಹನ ದೋಷಗಳ ತಪಾಸಣೆ ಮತ್ತು ಚಿಕಿತ್ಸೆಯನ್ನು ಸಂಸ್ಥೆಯಲ್ಲಿ ಕ್ಲಿನಿಕಲ್ ಸರ್ವಿಸ್ ವಿಭಾಗದಲ್ಲಿ ಮಾಡಲಾಗುತ್ತದೆ. ಸಂಸ್ಥೆಯಲ್ಲಿ 13 ವಿಶೇಷ ಚಿಕಿತ್ಸಾ ವಿಭಾಗಳಿವೆ. ಉದಾಹರಣೆಗೆ ಉಗ್ಗು, ಧ್ವನಿ, ತಂತನತೆ, ಕೇಳಿಸಿಕೊಳ್ಳುವ ತರಬೇತಿ, ಸೀಳು ತುಟಿ ಹಾಗೂ ಅಂಗುಳ, ನರಗಳ ದೋಷ, ಕಲಿಕಾ ನ್ಯೂನತೆ ಇತ್ಯಾದಿ ದೋಷಗಳ ಪರೀಕ್ಷೆ ಹಾಗೂ ಚಿಕಿತ್ಸೆ ನೀಡಲಾಗುತ್ತದೆ.ಈಗ ದಿನನಿತ್ಯ ಸರಾಸರಿ 600 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆ.

ಇದಲ್ಲದೇ ಸಂಸ್ಥೆಯು ಭಾರತದಾದ್ಯಂತ 11 ವೈದ್ಯಕೀಯ ಸಂಸ್ಥೆಗಳೊಂದಿಗೆ ಟೆಲಿ ಸಂಪರ್ಕ ಹೊಂದಿದೆ. ಈ ಸಂಸ್ಥೆಗಳು –

(1) ಇಂದಿರಾ ಗಾಂಧಿ ಮೆಡಿಕಲ್ ಕಾಲೇಜ್, ಶಿಮ್ಲಾ, ಹಿಮಾಚಲ ಪ್ರದೇಶ,

(2) ಡಾ. ರಾಮ ಮನೋಹರ್ ಲೋಹಿಯಾ ಆಸ್ಪತ್ರೆ, ದೆಹಲಿ

(3) ಜಿಪ್ಮರ್, ಪುದುಚೆರಿ

(4) ರೀಜನಲ್ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ಸ್, ಇಂಫಾಲಾ, ಮಣಿಪುರ

(5) ಎಐಐಪಿಎಂಆರ್, ಮುಂಬೈ

(6) ಸಿಎಸ್‌ಎಮ್‌ಎಮ್‌ಯು, ಲಕ್ನೊ, ಉತ್ತರ ಪ್ರದೇಶ

(7) ಜವಹರಲಾಲ್ ನೆಹರೂ ಮೆಡಿಕಲ್ ಕಾಲೇಜ್, ಅಜ್ಮೇರ್, ರಾಜಸ್ಥಾನ

(8) ರಾಜೇಂದ್ರ ಮೆಡಿಕಲ್ ಕಾಲೇಜ್, ರಾಂಚಿ, ಜಾರ್ಖಂಡ

(9) ನೇತಾಜಿ ಸುಭಾಶ್ ಚಂದ್ರ ಬೋಸ್ ಮೆಡಿಕಲ್ ಕಾಲೇಜ್, ಜಬಲ್ಪುರ, ಮಧ್ಯ ಪ್ರದೇಶ,

(10) ಎಸ್‌ಸಿಬಿ ಮೆಡಿಕಲ್ ಕಾಲೇಜ್, ಕಟಕ್, ಒಡಿಶಾ, ಹಾಗೂ



(11) ಜೆ ಎಲ್ ಎನ್ ಮೆಡಿಕಲ್ ಕಾಲೇಜ್, ಭಾಗಲ್ಪುರ, ಬಿಹಾರ.

ಸಂವಹನ ದೋಷವುಳ್ಳ ರೋಗಿಗಳು ಈ ಸಂಸ್ಥೆಗಳ ಮೋಲಕ ತಪಾಸಣೆ ಹಾಗೂ ಚಿಕಿತ್ಸೆ ಪಡೆಯಬಹುದು. ಇದಲ್ಲದೇ ಸ್ಕೈಪ್ ಮೂಲಕವೂ ರೋಗಿಗಳು ತಪಾಸಣೆ ಹಾಗೂ ಚಿಕಿತ್ಸೆ ಪಡೆಯಬಹುದು.

ಸಂಸ್ಥೆಯು 2011ರಿಂದ ನವಜಾತ ಶಿಶುಗಳ ಸಂವಹನ ಪರೀಕ್ಷೆಯನ್ನು ಕೈಗೊಂಡಿದೆ. ಈ ಪರೀಕ್ಷೆಯು ಭಾರತದ ಏಳು ರಾಜ್ಯಗಳಲ್ಲಿ (ಮೇಲೆ ತಿಳಿಸಿದ ಅಜ್ಮೀರ್, ರಾಂಚಿ, ಇಂಫಾಲ, ಜಬಲ್ಪುರ, ಜಿಪ್ಮರ್, ಕಟಕ್ ನಲ್ಲಿರುವ ಮೆಡಿಕಲ್ ಕಾಲೇಜುಗಳಲ್ಲಿ ಹಾಗೂ ಮೈಸೂರಿನಲ್ಲಿರುವ 16 ಆಸ್ಪತ್ರೆಗಳಲ್ಲಿ) ನಡೆಯುತ್ತಿದೆ.

ಇದಲ್ಲದೇ ಶಾಲಾ ಮಕ್ಕಳ, ಕಾರ್ಮಿಕರ, ವೃದ್ಧರ ತಪಾಸಣೆಯೂ ನಡೆಯುತ್ತಿದೆ. ಸಂಸ್ಥೆಯ ಸೇವೆಯು 4 ಹಳ್ಳಿಗಳಿಗೆ (ಅಕ್ಕಿಹೆಬ್ಬಾಳು, ಸಾಗರ, ಹುಲ್ಲಹಳ್ಳಿ, ಗುಂಬಳ್ಳಿ) ವಿಸ್ತೃತಗೊಂಡಿದೆ.

ಸಂಸ್ಥೆಯು ಶ್ರವಣ ದೋಷ, ಬುದ್ಧಿಮಾಂದ್ಯತೆ, ತಂತನತೆ ಇರುವ ಮಕ್ಕಳಿಗಾಗಿ ಶಾಲಾಪೂರ್ವ ತರಬೇತಿಗೆ ಅವಕಾಶ ಮಾಡಿಕೊಡುತ್ತದೆ. ಸದ್ಯ 240 ಮಕ್ಕಳು ಇದರ ಉಪಯೋಗ ಪಡೆದುಕೊಂಡಿದ್ದಾರೆ. ಸಂವಹನಾ ದೋಷವುಳ್ಳ ವ್ಯಕ್ತಿಗಳು ಸಂಸ್ಥೆಯನ್ನು ಈ ಮುಂದಿನ ವಿಳಾಸದಲ್ಲಿ ಸಂಪರ್ಕಿಸಬಹುದು.

*** ನಿರ್ದೇಶಕರು**
**ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ,**
**ಮಾನಸಗಂಗೋತ್ರಿ, ಮೈಸೂರು, 570006**
**ಟೆಲಿಫೋನ್: 0821 – 2502100**
**ಫಾಕ್ಸ್: 0821 2510515**
**ಟೋಲ್ ಫ್ರೀ ನಂಬರ್: 18004255218**

❑



# ಕತ್ತಲಿನಿಂದ ಪ್ರಕಾಶಮಾನಕ್ಕೆ

* ಮೋಹನ್ ಕೆ.



ಸ್ಪರ್ಶ ಜ್ಞಾನದಿಂದ ಮಕ್ಕಳು ನೃತ್ಯವನ್ನು ಕಲಿಯುತ್ತಾರೆ. ನೃತ್ಯಗುಂಪು ಆಸ್ಟ್ರೇಲಿಯಾ, ಯುಎಸ್ಎ, ಇಟಲಿ ಮುಂತಾದ ವಿದೇಶಗಳಲ್ಲಿ ಕೂಡ ಪ್ರದರ್ಶನ ನೀಡಿ ಪ್ರಶಂಸೆಗೆ ಪಾತ್ರವಾಗಿದೆ. ಅಲ್ಲದೆ ಅಥ್ಲೆಟಿಕ್, ಕ್ರಿಕೆಟ್, ಚೆಸ್ ಮುಂತಾದ ಎಲ್ಲಾ ಕ್ರೀಡೆಗಳಲ್ಲಿ ದೃಷ್ಟಿ ಮಾಂದ್ಯ ಮಕ್ಕಳು ಭಾಗವಹಿಸುತ್ತಾರೆ.

"ಅಂಧರು ದೇಶಕ್ಕೆ ಹೊರೆಯಲ್ಲ, ಅವರಿಗೂ ಬದುಕುವ ದಾರಿ ಇದೆ" ಎಂದು ತಿಳಿಸುವ ಮಹತ್ವಪೂರ್ಣ ಆಶಾಕಿರಣದೊಂದಿಗೆ 1969ರಲ್ಲಿ ಬೆಂಗಳೂರಿನ ಶ್ರೀ ರಮಣ ಮಹರ್ಷಿ ಅಂಧರ ತರಬೇತಿ ಸಂಸ್ಥೆ ಪ್ರಾರಂಭವಾಯಿತು. ಶ್ರೀ ಟಿ.ವಿ. ಶ್ರೀನಿವಾಸನ್ ಈ ಸಂಸ್ಥೆಯ ರೂವಾರಿ.

ಆರಂಭದಲ್ಲಿ ಓರ್ವ ವಿದ್ಯಾರ್ಥಿಯಿಂದ ಪ್ರಾರಂಭವಾದ ಈ ಸಂಸ್ಥೆ ಇಂದಿಗೆ ಮುನ್ನೂರಕ್ಕಿಂತ ಹೆಚ್ಚಿನ ಅಂಧ ಮಕ್ಕಳ ಪಾಲಿಗೆ ಆಶಾಕಿರಣವಾಗಿ ಬೆಳಕಿಗೆ ಬಂದಿವೆ. ಅಲ್ಲದೆ ಸುಮಾರು 15000 ಅಂಗವಿಕಲರು ವೃತ್ತಿ ತರಬೇತಿಯನ್ನು ಪಡೆಯುವುದರ ಮೂಲಕ ಜೀವನ ನಡೆಸಲು ತೊಡಗಿದ್ದಾರೆ.

ಈ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ, ಶಿಕ್ಷಣ ನೀಡುವುದರ ಮೂಲಕ ಕತ್ತಲಿನಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಪ್ರಯತ್ನ ಮಾಡಲಾಗುತ್ತಿದೆ.

ಎಲ್.ಕೆ.ಜಿ. ಯಿಂದ 10ನೇ ತರಗತಿಯವರೆಗೆ ಅಂಧ ಮಕ್ಕಳಿಗೆ ಉಚಿತ ವಸತಿಯುತ ಶಾಲೆ ನಡೆಯುತ್ತಿದೆ. ಹೈನುಗಾರಿಕೆ, ತೋಟಗಾರಿಕೆ, ಗಣಕಯಂತ್ರ ತರಬೇತಿ ಹಾಗೂ ಕಾಗದದ ಪೆಟ್ಟಿಗೆಯಲ್ಲಿ ವೃತ್ತಿ ತರಬೇತಿಯನ್ನು ನೀಡಲಾಗುತ್ತಿದೆ. ಪದವಿ ಪೂರ್ವ ಶಿಕ್ಷಣದ ನಂತರ ಶಿಕ್ಷಕರ ತರಬೇತಿಯನ್ನು ಹಾಗೂ ಬಿ. ಇಡಿ (ವಿಶೇಷ ಶಿಕ್ಷಣ) ನೀಡಲಾಗುತ್ತಿದೆ.ಕ್ರೀಡೆ, ಭರತನಾಟ್ಯ, ನೃತ್ಯ, ಸಂಗೀತ, ಕಂಪ್ಯೂಟರ್ ತರಬೇತಿ, ಹೈನುಗಾರಿಕೆ ಹೀಗೆ ವಿವಿಧ ತರಬೇತಿ ನೀಡಲಾಗುತ್ತದೆ. ಅಲ್ಲದೆ ಮನೆಯಲ್ಲಿ ಅಡಿಗೆ ಮಾಡಲು ಅನುಕೂಲವಾಗುವಂತೆ ಹೋಮ್ ಮ್ಯಾಜೇಜ್‌ಮೆಂಟ್ ಹಾಗೂ ಇತರ ಸಹಾಯಕ ತರಬೇತಿಯನ್ನು ನೀಡಲಾಗುತ್ತಿದೆ. ಅಲ್ಲದೆ ಇಲ್ಲಿನ ಮಕ್ಕಳು ಕಲಿತು ವಿವಿಧೆಡೆಗಳಲ್ಲಿ ದೊಡ್ಡ ದೊಡ್ಡ ಹುದ್ದೆಗಳನ್ನು ಅಲಂಕರಿಸಿರುತ್ತಾರೆ. ಒಂದರಿಂದ ಹತ್ತನೇ ತರಗತಿಯವರೆಗೂ ಉಚಿತ ಊಟ, ವಸತಿ ಹಾಗೂ ಶಿಕ್ಷಣ ತರಬೇತಿಯ ಅವಕಾಶವಿರುತ್ತದೆ. ಸಂಗೀತ ಹಾಗೂ ನೃತ್ಯ ತರಬೇತಿಯನ್ನು ವಿಶೇಷವಾಗಿ ನೀಡಲಾಗುತ್ತಿದೆ.

ಸ್ಪರ್ಶ ಜ್ಞಾನದಿಂದ ಮಕ್ಕಳು ನೃತ್ಯವನ್ನು ಕಲಿಯುತ್ತಾರೆ. ನೃತ್ಯಗುಂಪು ಆಸ್ಟ್ರೇಲಿಯಾ, ಯುಎಸ್ಎ, ಇಟಲಿ ಮುಂತಾದ ವಿದೇಶಗಳಲ್ಲಿ ಕೂಡ ಪ್ರದರ್ಶನ ನೀಡಿ ಪ್ರಶಂಸೆಗೆ ಪಾತ್ರವಾಗಿದೆ. ಅಲ್ಲದೆ ಅಥ್ಲೆಟಿಕ್, ಕ್ರಿಕೆಟ್, ಚೆಸ್ ಮುಂತಾದ ಎಲ್ಲಾ ಕ್ರೀಡೆಗಳಲ್ಲಿ ದೃಷ್ಟಿ ಮಾಂದ್ಯ ಮಕ್ಕಳು ದೃಢ ವಿಶ್ವಾಸದಿಂದ ಭಾಗವಹಿಸುತ್ತಿದ್ದಾರೆ. ವಿಶೇಷವಾಗಿ ವಿಜ್ಞಾನ ಹಾಗೂ ಗಣಿತ ಶಿಕ್ಷಣವನ್ನು ನೀಡಲಾಗುತ್ತಿದೆ.

1986ರಲ್ಲಿ ಶ್ರೀ ತಿರುಮೂರ್ತಿ ರೂರಲ್ ಡೆವಲಪ್‌ಮೆಂಟ್ ಸೆಂಟರ್ ಎಂಬ ಸಂಸ್ಥೆಯನ್ನು ಬೆಂಗಳೂರಿನ ಜಕ್ಕಸಂದ್ರದಲ್ಲಿ ಸ್ಥಾಪಿಸಿದ್ದು, ಇಲ್ಲಿ ಎಲ್ಲಾ ರೀತಿಯ ಅಂಗವಿಕಲರಿಗೂ (ದೈಹಿಕ ಅಂಗವಿಕಲರು, ಬುದ್ಧಿ ಮಾಂದ್ಯರು, ಕಿವಿ ಮತ್ತು ಮಾತಿನ ತೊಂದರೆ ಇರುವವರು) ಬದುಕಲು ದಾರಿ ತೋರಿಸುವ ನಿಟ್ಟಿನಲ್ಲಿ ತರಬೇತಿ ನೀಡಲಾಗುತ್ತಿದೆ. ಕೃಷಿ, ತೋಟಗಾರಿಕೆ, ಹೈನುಗಾರಿಕೆ, ರೇಷ್ಮೆ ಬೆಳೆ, ಮೀನು ಸಾಕಣಿಕೆ, ಟೈಲರಿಂಗ್ ಹೀಗೆ ಜೀವನ ನಿರ್ವಹಣೆಗೆ ಅನುಕೂಲವಾಗುವ ಎಲ್ಲಾ ರೀತಿಯ ಅಂಗವಿಕಲರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಇದರಿಂದ ಸುಮಾರು

* ಸಮನ್ವಯಕರು, ಶ್ರೀ ರಮಣ ಮಹರ್ಷಿ ಅಂಧರ ತರಬೇತಿ ಸಂಸ್ಥೆ, ಬೆಂಗಳೂರು.



15000 ಅಂಗವಿಕಲರು ತರಬೇತಿ ಪಡೆದಿರುತ್ತಾರೆ.

ಈ ಅಕಾಡೆಮಿಯ ಶಾಖೆಗಳು ಮಂಡ್ಯ ಜಿಲ್ಲೆಯ ಮಳವಳ್ಳಿ, ಮದ್ದೂರು, ಕೆ. ಆರ್. ಪೇಟೆ, ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕನಕಪುರ, ರಾಮನಗರ ಹಾಗೂ ಚನ್ನಪಟ್ಟಣ ತಾಲ್ಲೂಕುಗಳಲ್ಲಿ ಇವೆ. ಇಲ್ಲಿ ಸಮುದಾಯ ಆಧಾರಿತ ಪುನಶ್ಚೇತನ ಸೇವೆಯನ್ನು ನೀಡಲಾಗುತ್ತಿದೆ.

ಇಲ್ಲಿ ಮುಖ್ಯವಾಗಿ ಆರೋಗ್ಯ, ವಿದ್ಯಾಭ್ಯಾಸ, ಆರ್ಥಿಕ, ಅಂಕವಿಕಲತೆಯ ಬಗ್ಗೆ ತಿಳಿವಳಿಕೆ ಮತ್ತು ತಡೆಗಟ್ಟುವಿಕೆ ಸೇವೆಯನ್ನು ನೀಡಲಾಗುತ್ತಿದೆ.

**ಶ್ರೀ ರಮಣ ಮಹರ್ಷಿ ಅಂಧರ ಪರಿಷತ್ತಿನ ಕೆಲವು ಮೈಲಿಗಲ್ಲುಗಳು**

* 1969ರಲ್ಲಿ ಶ್ರೀ ರಮಣ ಮಹರ್ಷಿ ಅಂಧರ ಪರಿಷತ್ತಿನ ಸ್ಥಾಪನೆ.
* 1971 ರಲ್ಲಿ ವೃತ್ತಿಪರ ತರಬೇತಿ ಕಾರ್ಯಕ್ರಮದ ಉದ್ಘಾಟನೆ.
* 1980ರಲ್ಲಿ ವಯಸ್ಕರಿಗೆ ಹೈನುಗಾರಿಕೆ ತರಬೇತಿ ಕಾರ್ಯಕ್ರಮ.
* 1985ರಲ್ಲಿ ಕನಕಪುರ ತಾಲ್ಲೂಕಿನ ಜಕ್ಕಸಂದ್ರ ಗ್ರಾಮದಲ್ಲಿ ಕೃಷಿ ಆಧಾರಿತ ತರಬೇತಿ ಸಂಸ್ಥೆ ತಿರುಮೂರ್ತಿ ಗ್ರಾಮಾಭಿವೃದ್ಧಿ ಸಂಸ್ಥೆ (ಟಿ.ಆರ್.ಡಿ.ಸಿ.) ಸ್ಥಾಪನೆ.
* 1986ರಲ್ಲಿ ಆರ್ಥಿಕವಾಗಿ ಹಿಂದುಳಿದ ಕೊಳಗೇರಿ ಮಕ್ಕಳ ಶಿಕ್ಷಣಕ್ಕಾಗಿ ರೂಪೇನ ಅಗ್ರಹಾರ ಶಾಲೆ, ಮಡಿವಾಳದಲ್ಲಿ ಪ್ರಾರಂಭ.
* 1989ರಲ್ಲಿ ಅಂಧರಿಗಾಗಿ ಶಾಲೆಯ ಆವರಣದಲ್ಲಿ ಕಂಪ್ಯೂಟರ್ ತರಬೇತಿ ಕಾರ್ಯಕ್ರಮ ಆರಂಭ.
* 1990ರಲ್ಲಿ ವಿವಿಧ ಅಂಗವಿಕಲತೆಯಿರುವ ಜನರಿಗೆ ಪುನರುತ್ಥಾನ ಕಾರ್ಯಕ್ರಮ 'ಸೌರಭ' ಕನಕಪುರ ತಾಲ್ಲೂಕಿನ 4 ಹೋಬಳಿಗಳಲ್ಲಿ ಪ್ರಾರಂಭವಾಯಿತು. (140 ಗ್ರಾಮಗಳು).
* 1991ರಲ್ಲಿ ಪಟ್ಟಣದ ಕೊಳಗೇರಿ ಮಕ್ಕಳಿಗಾಗಿ ಶಿಕ್ಷಣ ಕಾರ್ಯಕ್ರಮ 'ಸೌಲಭ್ಯ' ಬೆಂಗಳೂರಿನಲ್ಲಿ ಪ್ರಾರಂಭವಾಯಿತು.
* 1994ರಲ್ಲಿ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಗ್ರಾಮದಲ್ಲಿ ಗ್ರಾಮೋದ್ಧಾರ ಕಾರ್ಯಕ್ರಮ "ಗ್ರಾಮರಕ್ಷೆ" ಯ ಪ್ರಾರಂಭ 200 ಕೂಡ ಕೃಷಿ ಕಾರ್ಮಿಕರು ಹಾಗೂ ಆರ್ಥಿಕ ದುರ್ಬಲರನ್ನು ಗುರುತಿಸಿ ಅವರ ಉದ್ಧಾರಕ್ಕಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.
* 1995ರಲ್ಲಿ ಇನ್ನೆರಡು ಆರ್ಥಿಕ ಮೂಲ ಯೋಜನೆಗಳು 'ಉದ್ಯೋಗ' 'ವಿಶ್ವ' ಪ್ರಾರಂಭ. ಸುಮಾರು 70 ಮಂದಿ ಅಂಗವಿಕಲರಿಗೆ ಆರ್ಥಿಕ ಸ್ವಾತಂತ್ರ್ಯದ ಅವಕಾಶ.
* 1995ರಲ್ಲಿ ಸಂಸ್ಥೆ 25 ವರ್ಷಗಳನ್ನು ಸಮರ್ಥವಾಗಿ ಕಳೆದಿದ್ದಕ್ಕೆ ಬೆಳ್ಳಿ ಹಬ್ಬವನ್ನು ಆಚರಿಸಿತು. ಅಂಗವಿಕಲರು ಹಾಗೂ ದುರ್ಬಲರ ಏಳಿಗೆಗಾಗಿ ಹೆಚ್ಚು ಪ್ರಗತಿ ಸಾಧಿಸಲು ಈ ವರ್ಷವನ್ನು ಮೀಸಲಾಗಿಡಲಾಯಿತು.



* 1996ರಲ್ಲಿ ಮಳವಳ್ಳಿ ತಾಲ್ಲೂಕಿನ 75 ಗ್ರಾಮಗಳನ್ನೊಳಗೊಂಡ ಸುಮಾರು 250 ವಿವಿಧ ವಿಶೇಷಚೇತನರಿಗಾಗಿ ಸಹಭಾಗಿತ್ವದ ಮೂಲದ ಒಂದು ಹೊಸ ಪುನರುದ್ಧಾರ ಕಾರ್ಯಕ್ರಮ **ಸಮುದಾಯ**ವನ್ನು ಪ್ರಾರಂಭಿಸಲಾಯಿತು.
* 1997ರಲ್ಲಿ ಸಹಭಾಗಿತ್ವದ ಮೂಲ ಪುನರುದ್ಧಾರ ಕಾರ್ಯಕ್ರಮದ ಇನ್ನೊಂದು ಹೊಸ ವಿಸ್ತರಣೆ ಸಮನ್ವಯವನ್ನು ಆರಂಭಿಸಲಾಯಿತು. ಕನಕಪುರ ತಾಲ್ಲೂಕಿನ ಕೋಡಿಹಳ್ಳಿಯ 75 ಗ್ರಾಮಗಳನ್ನು ಒಳಗೊಂಡಿತ್ತು.
* 1999 ರಲ್ಲಿ ಸಹಭಾಗಿತ್ವದ ಮೂಲದ ಪುನರುದ್ಧಾರ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಲಾಯಿತು. (ಅವಧಿ ಸುಮಾರು ಮೂರು ತಿಂಗಳಿನಿಂದ ಆರು ತಿಂಗಳು) ಇಲ್ಲಿ ಕೌಶಲ್ಯಗಳನ್ನು ಹೇಳಿಕೊಡಲಾಗುತ್ತಿತ್ತು.
* 1999ರಲ್ಲಿ ಭಾರತದ ರಾಷ್ಟ್ರೀಯ ಪುನರ್ವಸತಿ ಮಂಡಳಿ (ಸಾಮಾಜಿಕ



ನ್ಯಾಯ ಮತ್ತು ಸಶಸ್ತ್ರೀಕರಣ ಮಂತ್ರಾಲಯ) ಸಹಯೋಗದೊಂದಿಗೆ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯಲ್ಲಿ ಸಾಮಾನ್ಯ ಶಿಕ್ಷಕರಿಗೆ ಶಿಕ್ಷಕರ ತರಬೇತಿಯನ್ನು ಪ್ರಾರಂಭಿಸಲಾಯಿತು.

* ರಾಷ್ಟ್ರೀಯ ಪುನರ್ವಸತಿ ಮಂಡಲಿ ಸಹಯೋಗದೊಂದಿಗೆ 2 ವರ್ಷದ ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ ತರಬೇತಿ ಪ್ರಾರಂಭಿಸಲಾಯಿತು.
* 2000ರಲ್ಲಿ ಡಿ.ಪಿ.ಇ.ಪಿ. ಶಾಲೆಗಳ ಐ.ಇ.ಡಿ. ಉಪಾಧ್ಯಾಯರುಗಳಿಗೆ 45 ದಿನಗಳ ಸಮನ್ವಯ ಶಿಕ್ಷಣ ತರಬೇತಿಯನ್ನು ಪ್ರಾರಂಭಿಸಲಾಯಿತು.
* 2000ರಲ್ಲಿ ರಾಷ್ಟ್ರೀಯ ಪುನರ್ವಸತಿ ಮಂಡಲಿ ಹಾಗೂ ಮಧ್ಯ ಪ್ರದೇಶ ಭೋಜ್ ವಿಶ್ವ ವಿದ್ಯಾಲಯದ ಸಹಯೋಗದೊಂದಿಗೆ ಬಿ.ಇಡಿ ವಿಶೇಷ ಶಿಕ್ಷಣ ಅಧ್ಯಯನ ಕೇಂದ್ರ ಪ್ರಾರಂಭಿಸಲಾಯಿತು.
* 2000ರಲ್ಲಿ ರಾಷ್ಟ್ರೀಯ ಪುನರ್ವಸತಿ ಮಂಡಳಿ ಹಾಗೂ ಮಧ್ಯ ಪ್ರದೇಶ ಭೋಜ್ ವಿಶ್ವ ವಿದ್ಯಾಲಯದ ಸಹಯೋಗದೊಂದಿಗೆ ಪಿ.ಜಿ.ಪಿ.ಡಿ. ಪ್ರಾರಂಭಿಸಲಾಯಿತು.
* 2003ರಲ್ಲಿ ಬೆಂಗಳೂರು ವಿಶ್ವ ವಿದ್ಯಾಲಯದ ಪಿ.ಜಿ. ಡಿಪ್ಲೊಮಾ ಇನ್ ಸಿ.ಬಿ.ಆರ್‌ನ ಅಧ್ಯಯನ ಕೇಂದ್ರ ಪ್ರಾರಂಭಿಸಲಾಯಿತು. ❑

## ವಿಶೇಷಚೇತನರಿಗೆ ಸಮಾನ ಅವಕಾಶ; ಹಕ್ಕುಗಳ ಸಂರಕ್ಷಣೆ

**(37ನೇ ಪುಟದಿಂದ)**

* ವಿಶೇಷಚೇತನ ವಿದ್ಯಾರ್ಥಿಗಳಿಗೆ ನ್ಯೂನತೆಗೆ ಅನುಗುಣವಾಗಿ ಭಾಷಾ ವಿನಾಯಿತಿ ಮತ್ತು ಕೆಲವು ವಿಷಯ ವಿನಾಯಿತಿಗಳನ್ನು ಕಲ್ಪಿಸಿಕೊಡುವಂತೆ ಸಲಹೆ ನೀಡಲಾಗಿದ್ದು ಕ್ರಮ ಮಾಡಲು ಅಗತ್ಯ ಸಂಪನ್ಮೂಲ ನೆರವು ನೀಡಲಾಗಿದೆ. ಉದಾಹರಣೆಗೆ ಮೈಸೂರಿನ ಗಂಗೂಬಾಯಿ ಹಾನಗಲ್ ಸಂಗೀತ ವಿಶ್ವವಿದ್ಯಾಲಯದಲ್ಲಿ ಕುಮಾರಿ ಪ್ರಿಯದರ್ಶಿನಿ ಎಂಬ ವಿದ್ಯಾರ್ಥಿನಿಗೆ ಬಿ.ಎ (ಸಂಗೀತ) ವಿಷಯದಲ್ಲಿ ಭಾಷಾ ವಿನಾಯಿತಿ ನೀಡದ ಪ್ರಕರಣವನ್ನು ಖುದ್ದಾಗಿ ಸದರಿ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ವಿಚಾರಣೆ ನಡೆಸಿ ಸೂಕ್ತ ಆದೇಶ ನೀಡಲಾಯಿತು. ರಾಜ್ಯ ಅಂಗವಿಕಲ ವ್ಯಕ್ತಿಗಳ ಅಧಿನಿಯಮದ ನ್ಯಾಯಾಲಯವು ಅರ್ಜಿದಾರರು ಇರುವಲ್ಲಿಗೇ ಹೋಗಿ ಸಮಸ್ಯೆಯನ್ನು ಬಗೆಹರಿಸಿದ ರಾಜ್ಯದ ಮೊದಲ ಪ್ರಕರಣ ಇದಾಗಿರುತ್ತದೆ.

* ಚಿಕ್ಕಬಳ್ಳಾಪುರ ಶೈಕ್ಷಣಿಕ ಜಿಲ್ಲೆಯ ಚಿಂತಾಮಣಿ ತಾಲ್ಲೂಕಿನಲ್ಲಿ ನಕಲಿ ಅಂಗವಿಕಲ ಪ್ರಮಾಣ ಪತ್ರದ ಮೂಲಕ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ 17 ಮಂದಿ ಶಿಕ್ಷಕರನ್ನು ಸೇವೆಯಿಂದ ವಜಾಗೊಳಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಕ್ರಮ ಮಾಡಲಾಗಿದೆ. ಇದೇ ರೀತಿ ಬೆಂಗಳೂರು ಕಿದ್ವಾಯಿ ಆಸ್ಪತ್ರೆಯಲ್ಲಿ ಅಂಗವಿಕಲ 8 ಮಂದಿ ಸೇವಾ ನಿರತ ನೌಕರರುಗಳನ್ನು ಪುನರ್ ವೈದ್ಯಕೀಯ ಪರಿಶೀಲನೆಗೆ ಒಳಪಡಿಸಿ ಸದರಿ ಅಂಗವಿಕಲ ವ್ಯಕ್ತಿಗಳ ಪ್ರಮಾಣ ಪತ್ರ ಪಡೆಯುವಲ್ಲಿ ಅನರ್ಹರಾಗಿರುವುದನ್ನು ದೃಢಪಡಿಸಿಕೊಂಡು ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಆರೋಗ್ಯ ಇಲಾಖೆಗೆ ಸೂಚಿಸಲಾಗಿದೆ.

* ಕೋಲಾರ ಜಿಲ್ಲೆಯಲ್ಲಿ ವಿಶೇಷ ಚೇತನರಿಗೆ ನೀಡಲಾಗುವ ಅನುದಾನವು ದುರುಪಯೋಗವಾಗಿರುವುದನ್ನು ಪತ್ತೆಹಚ್ಚಿ ಆರೋಪಿತ ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಶಿಫಾರಸು ಮಾಡಲಾಗಿದೆ.

**ಗ್ರಾಮೀಣ ಪುನರ್ವಸತಿ ಕಾರ್ಯಕ್ರಮ (ಸಮುದಾಯ ಆಧಾರಿತ ಪುನರ್ವಸತಿ):** ಇದು ರಾಜ್ಯ ಸರ್ಕಾರದ ಒಂದು ಮಹತ್ವ ಪೂರ್ಣ ಯೋಜನೆಯಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಇಡೀ ವಿಶ್ವದಲ್ಲಿ ವಿಶೇಷಚೇತನರ ನಡುವೆ ಯಾವ ರೀತಿ ಕಾರ್ಯನಿರ್ವಹಿಸಬಹುದು ಎಂಬ ಮಾರ್ಗಸೂಚಿಯನ್ನು 2011–12ರಲ್ಲಿ ಹೊರಡಿಸಿದೆ. ಕರ್ನಾಟಕ ರಾಜ್ಯ ತುಂಬಾ ಮುಂಚಿತವಾಗೇ ಈ ಹಿಂದೆ 1999 ರಲ್ಲಿ ಈ ಕಾರ್ಯಕ್ರಮವನ್ನು ಜಾರಿಗೆ ತಂದಿತ್ತು.



ಇದೇ ಉದ್ದೇಶದ ಯೋಜನೆಯನ್ನು ವಿಶೇಷಚೇತನರ ಮುಖಾಂತರವೇ ಅನುಷ್ಠಾನಗೊಳಿಸಲು ಮತ್ತೆ ಸಣ್ಣ ಪುಟ್ಟ ಬದಲಾವಣೆ ಮುಖಾಂತರ ಗ್ರಾಮೀಣ ಪುನರ್ವಸತಿ ಯೋಜನೆ ಜಾರಿಗೆ ಬಂದಿತು. ಗ್ರಾಮ ಪಂಚಾಯಿತಿಗಳಲ್ಲಿ ಒಬ್ಬ ವಿಶೇಷಚೇತನ ಗ್ರಾಮೀಣ ಪುನರ್ವಸತಿ ಕಾರ್ಯಕರ್ತನಾಗಿ ಕೆಲಸ ನಿರ್ವಹಿಸುತ್ತಿದ್ದು, ತಾಲ್ಲೂಕು ಮಟ್ಟದಲ್ಲಿ ಒಬ್ಬ ವಿಶೇಷಚೇತನ ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತನಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಈ ಕಾರ್ಯಕ್ರಮದ ಅನುಷ್ಠಾನಕ್ಕೆ ತಾಲೂಕು ಅನುಷ್ಠಾನ ಸಮಿತಿ ಮತ್ತು ಜಿಲ್ಲಾ ಉಸ್ತುವಾರಿ ಸಮಿತಿಗಳು ಇವೆ. ಇದರ ಮಾರ್ಗಸೂಚಿ ತುಂಬಾ ಸ್ಪಷ್ಟವಾಗಿದೆ. ಈ ಯೋಜನೆ ಪಟ್ಟಣ ಪ್ರದೇಶಕ್ಕೆ ವಿಸ್ತರಣೆ ಆಗಲು ರಾಜ್ಯ ಸಮನ್ವಯ ಸಮಿತಿ ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ಇದು ದೊಡ್ಡ ಪ್ರಮಾಣದ ವಿಶೇಷಚೇತನರ ಮಾನವ ಸಂಪನ್ಮೂಲವಾಗಿದ್ದು, ಈ ಪುನರ್ವಸತಿ ಕಾರ್ಯಕರ್ತರಿಗೆ ಸರಿಯಾಗಿ ಕಾಲಕಾಲಕ್ಕೆ ತರಬೇತಿ, ಮಾರ್ಗದರ್ಶನ ಮತ್ತು ಅನುಪಾಲನೆ ಮಾಡಿ ತಾಲ್ಲೂಕು ಅನುಷ್ಠಾನ ಸಮಿತಿ ಮತ್ತು ಜಿಲ್ಲಾ ಉಸ್ತುವಾರಿ ಸಮಿತಿಗಳು ಸರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡುವುದು ಮತ್ತು ಈ ಕಾರ್ಯಕರ್ತರ ಮುಖಾಂತರ ಲಭ್ಯವಿರುವ ದೊಡ್ಡ ಪ್ರಮಾಣದ ತಾಂತ್ರಿಕ ಮತ್ತು ಹಣಕಾಸು ಸಂಪನ್ಮೂಲವನ್ನು ವಿಶೇಷಚೇತನರ ಪುನರ್ವಸತಿಗೆ ಬಳಸುವ ಹೊಣೆಗಾರಿಕೆ ಇದೆ. ❑

# ಸಾಮಾನ್ಯರೊಡನೆ ವಿಶಿಷ್ಟರ ಕೆಲಸ – ಸಾಧ್ಯ



* ಅನುರಾಧ ಎನ್.

"ಸಾಧ್ಯ" ಉಪಕ್ರಮದ ಮೂಲಕ ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವ 39 ವ್ಯಕ್ತಿಗಳು ಹಾಗೂ 4 ವಿಶೇಷ ಶಿಕ್ಷಕರೂ ಸೇರಿದಂತೆ ಒಟ್ಟು 43 ವ್ಯಕ್ತಿಗಳಿಗೆ ಮುಖ್ಯವಾಹಿನಿ ಉದ್ದಿಮೆಗಳಲ್ಲಿ ಉದ್ಯೋಗ ನಿರ್ವಹಿಸಲು ಅವಕಾಶ ನೀಡಲಾಗಿದೆ. ಈ ಪ್ರಯೋಗವು ಮೈಸೂರಿನ ಹೊರಗಿನ ಪ್ರದೇಶಗಳಲ್ಲಿರುವವರನ್ನೂ ಪ್ರೇರೇಪಿಸಿದೆ.

ನಮ್ಮ ದೇಶದಲ್ಲಿ ಯುವಕರಿಗೆ ಕೆಲಸ ದೊರೆಯುವುದು ಒಂದು ಬೃಹತ್ ಸಮಸ್ಯೆ. ಅವರು, ಸುಶಿಕ್ಷಿತರಾಗಿರಲಿ ಅಥವಾ ಅನಕ್ಷರಸ್ಥರಾಗಿರಲಿ, ಅರ್ಹತೆಯಿರುವವರಾಗಿರಲಿ ಅಥವಾ ಇಲ್ಲದಿರಲಿ, ಕೌಶಲ್ಯವಿರುವವರಾಗಿರಲಿ ಅಥವಾ ಇಲ್ಲದಿರಲಿ, ನ್ಯೂನತೆ ಇರುವವರಾಗಿರಲಿ ಅಥವಾ ಇಲ್ಲದಿರಲಿ, ಕೆಲಸ ದೊರೆಯಲು ಸೂಕ್ತವಾದ ಕಾರಣಗಳು ಕಂಡು ಬರುತ್ತಿಲ್ಲ. ಕೆಲಸದ ವಿಷಯಕ್ಕೆ ಬಂದಾಗ, ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವ ವ್ಯಕ್ತಿಗಳು ಸಾಲಿನ ಕೊನೆಯಲ್ಲಿ ಇರುತ್ತಾರೆ. ಇವರ ಅಗತ್ಯ ಮುಖ್ಯವಲ್ಲ ಎಂದು ಪರಿಗಣಿಸಲಾಗುತ್ತಿದೆ. ಇದಕ್ಕೆ ಕಾರಣ, ಇವರ ಸಾಮರ್ಥ್ಯಗಳು ಮತ್ತು ಅಸಾಮರ್ಥ್ಯಗಳ ಬಗ್ಗೆ ಜನಸಾಮಾನ್ಯರಿಗೆ ಅರಿವಿಲ್ಲದಿರುವುದು.

ಇತ್ತೀಚೆಗೆ ಪೋಷಕರು ಮತ್ತು ಈ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ವ್ಯಕ್ತಿಗಳು ನಡೆಸಿದ ಸಂಶೋಧನೆ ಮತ್ತು ಅಧ್ಯಯನಗಳಿಂದ, ಈ ಮಕ್ಕಳಿಗೂ, ವ್ಯವಸ್ಥಿತವಾಗಿ ತರಬೇತಿ ನೀಡಿದಲ್ಲಿ ಇವರೂ ಉಪಯುಕ್ತರಾಗುವರು ಎಂದು ಕಂಡುಬಂದಿದೆ.

ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವ ಮಕ್ಕಳ ಪೋಷಕರು, ತಮ್ಮ ಮಕ್ಕಳು ಮುಖ್ಯವಾಹಿನಿಯಲ್ಲಿ ಸೇರುವಂತಾಗಲು, ಸತತವಾಗಿ ವಿಶ್ಲೇಷಣೆಗಳನ್ನು ನಡೆಸಿ, ವಿಚಾರ ವಿಮರ್ಶೆಗಳನ್ನು ನಡೆಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಮೈಸೂರಿನಲ್ಲಿ ಆರಂಭವಾಗಿದ್ದೇ "ಸಾಧ್ಯ". ಇದು ಬುದ್ಧಿಶಕ್ತಿ ನ್ಯೂನತೆಯುಳ್ಳವರಿಗೆ ಸಮನ್ವಯ ವಾತಾವರಣದ ಉದ್ಯೋಗಾವಕಾಶ ಕಲ್ಪಿಸುವ ಉಪಕ್ರಮವಾಗಿದೆ.

**"ಸಾಧ್ಯ" ಹೇಗೆ ಜನಿಸಿತು**

ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವ ನನ್ನ ಮಗ ನಿಶಾಂತನ ಬರವಿನಿಂದಾಗಿ, ಪೋಷಕರ ಸಂಸ್ಥೆಯ ಮೂಲಕ ಈ ಮಕ್ಕಳಿಗೆ ಇರುವ ಸಾಮಾಜಿಕ ಮತ್ತು ಕಾನೂನು ಸಂಬಂಧಿತ ಸಮಸ್ಯೆಗಳ ಬಗ್ಗೆ, ಅರಿವು ಮೂಡಿಸಿಕೊಳ್ಳುವ ಅವಕಾಶ ದೊರೆಯಿತು.

ಈ ಮಕ್ಕಳು ಉದ್ಯೋಗ ಲಭಿಸಿಕೊಳ್ಳುವ ಹಕ್ಕು ಮತ್ತು ಸರ್ಕಾರ ಮತ್ತು ಸಾರ್ವಜನಿಕ ಕ್ಷೇತ್ರಗಳಲ್ಲಿ ಇವರಿಗಾಗಿ ಉದ್ಯೋಗವನ್ನು 3% ರಷ್ಟು ಮೀಸಲಾಗಿರಿಸುವುದು, ಇವೆಲ್ಲವೂ ಸೂಕ್ತ ರೀತಿಯಲ್ಲಿ ಪರಿಣಾಮಕಾರಿಯಾಗಿ ಕಾರ್ಯಗತವಾಗಿಲ್ಲ. ಈ ವ್ಯಕ್ತಿಗಳು ಅನೇಕ ವೃತ್ತಿಗಳಲ್ಲಿ ತರಬೇತಿ ಹೊಂದಿದ್ದರೂ ಸಹ, ಅವರ ಸಾಮರ್ಥ್ಯಗಳನ್ನು ಸರಿಯಾಗಿ ಉಪಯೋಗಪಡಿಸಿಕೊಂಡಿಲ್ಲ ಎಂಬುದು ಚಿಂತೆಯ ವಿಷಯವಾಗಿದೆ.

ಈ ವಿಷಯಗಳ ಬಗ್ಗೆ ದೀರ್ಘವಾಗಿ ಆಲೋಚಿಸಿದ ನಂತರ, ವೇದ್ಯವಾದ ವಿಚಾರಗಳೆಂದರೆ :

* ಸಂಸ್ಥಾಪಕರು, ಮೈಸೂರು ಜಿಲ್ಲಾ (ಬುದ್ಧಿಮಾಂದ್ಯರ ಅಭಿವೃದ್ಧಿ) ಪೋಷಕರ ಸಂಘ.

1. ಹಲವಾರು ಉದ್ದಿಮೆಗಳಲ್ಲಿ ಕೌಶಲ್ಯ / ನುರಿತ ಕೆಲಸಗಾರರ ಕೊರತೆ ಕಂಡುಬರುತ್ತಿದೆ.

2. ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವ ನಮ್ಮ ಮಕ್ಕಳು, ವಿಶೇಷ ಶಾಲೆಗಳಲ್ಲಿ ಮತ್ತು ವೃತ್ತಿ ತರಬೇತಿ ಕೇಂದ್ರಗಳಲ್ಲಿ ದೀರ್ಘಕಾಲ ಹಲವಾರು ಕೌಶಲ್ಯಗಳನ್ನು ಕರಗತ ಮಾಡಿಕೊಂಡಿರುತ್ತಾರೆ.

3. ಈ ಮಕ್ಕಳು ಒಂದು ತರಬೇತಿ ಕೇಂದ್ರದಲ್ಲಿ 6 ವರ್ಷಗಳಿಗಿಂತಲೂ ಹೆಚ್ಚು ಸಮಯ ಇರಬಾರದು ಎಂಬ ಕಾನೂನು ಜಾರಿಗೆ ಬಂದಿತು. ಕೌಶಲ್ಯಗಳಲ್ಲಿ ಪಾರ್ಶ್ವ ತರಬೇತಿ ಪಡೆದ ಮಕ್ಕಳು ಎಲ್ಲಿಗೆ ಹೋಗಬೇಕು? ಹೆಚ್ಚಿನ ಸಂದರ್ಭಗಳಲ್ಲಿ ಇವರು ಒಂದು ಕೇಂದ್ರದಿಂದ ಮತ್ತೊಂದು ಕೇಂದ್ರಕ್ಕೆ ವರ್ಗಾವಣೆಯಾಗುತ್ತಲೇ ಇರುತ್ತಾರೆ. ಅನೇಕ ವೇಳೆ, ಮನೆಯಲ್ಲಿಯೇ ಉಳಿದು, ಕೌಶಲ್ಯಗಳನ್ನು ಮರೆತು, ಕುಟುಂಬಕ್ಕೆ ಭಾರವಾಗಿ ಜೀವಿಸುತ್ತಾರೆ.

4. ಪ್ರಸ್ತುತ ಕಂಡುಬರುವ ವೃತ್ತಿ ತರಬೇತಿ ಕೇಂದ್ರಗಳಲ್ಲಿ ಮಕ್ಕಳಿಗೆ ನೀಡುವ ವಿದ್ಯಾರ್ಥಿವೇತನ ಬಹಳ ಕಡಿಮೆಯಿರುತ್ತದೆ ಅಥವಾ ವೇತನ ನೀಡುವುದೇ ಇಲ್ಲ. ಇದು, ಅವರ ವರಮಾನವನ್ನೂ ಹೇಗೆ ಹೆಚ್ಚುವರಿ ಮಾಡಿ, ಜೀವನವನ್ನು ಉತ್ತಮಗೊಳಿಸುವುದು? ಎಂಬ ಪ್ರಶ್ನೆಗೆ ದಾರಿಯಾಗಿದೆ.

5. ಒಂದು ವೇಳೆ ಸೌಮ್ಯ / ಸ್ವಲ್ಪ ಹೆಚ್ಚಿನ ಮಟ್ಟದ ಬುದ್ಧಿಶಕ್ತಿಯಿರುವ ವ್ಯಕ್ತಿಗೆ ಮುಖ್ಯ ವಾಹಿನಿಯಲ್ಲಿ ಉದ್ದಿಮೆಗಳಲ್ಲಿ, ಹೋಟೆಲ್‌ಗಳಲ್ಲಿ ಕೊಠಡಿಗಳನ್ನು ಅಣಿ ಮಾಡುವುದು ಇಂತಹ ಉದ್ಯೋಗ ದೊರಕಿದರೆ ಸಹ, ಅಲ್ಲಿಯ ವಾತಾವರಣ ಸರಿಹೊಂದದೆ, ಸಹೋದ್ಯೋಗಿಗಳ ಕೀಟಲೆಗೆ ಗುರಿಯಾಗಿ, ಉದ್ಯೋಗವನ್ನು ತ್ಯಜಿಸುವರು.

6. ಹಲವು ಉದ್ದಿಮೆಗಾರರು, ತಮ್ಮಲ್ಲಿ ಮಕ್ಕಳು ಮಾಡುವಂತಹ ಕೆಲಸಗಳನ್ನು ವೃತ್ತಿಕೇಂದ್ರಗಳಿಗೇ ತಲುಪಿಸಿ, ಮಕ್ಕಳು ಅವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಮಾಡಿ, ವೇತನವನ್ನು ನೀಡುತ್ತಾರೆ. ಆದರೆ, ಇಲ್ಲಿ ಹಲವು ಅಡಚಣೆಗಳು ಕಂಡುಬಂದವು. ಅಂದರೆ, ವಸ್ತುಗಳನ್ನು ಒಂದೆಡೆಯಿಂದ ಮತ್ತೊಂದೆಡೆಗೆ ಸಾಗಿಸುವುದು, ಹಲವು ವಸ್ತುಗಳು ಕಾಣದೇ ಹೋಗುವುದು, ಕೆಲಸದಲ್ಲಿ ಕಂಡುಬರಬೇಕಾದ ನಿಜವಾದ ಗುಣಮಟ್ಟಕ್ಕಿಂತ ಇವರ ಕೆಲಸದಲ್ಲಿ ವ್ಯತ್ಯಾಸವಿರುವುದು ಇತ್ಯಾದಿ.

ಇವುಗಳನ್ನು ಪರಿಗಣನೆಗೆ ತಂದುಕೊಂಡು, ತಜ್ಞರೊಡನೆ, ಇದರ ಬಗ್ಗೆ ವಿಶ್ಲೇಷಣೆ ಮತ್ತು ವಿಮರ್ಶೆಗಳನ್ನು ನಡೆಸಲಾಯಿತು. ಶ್ರೀ ಎಸ್. ಭಾನುಚಂದ್ರನ್, ಸ್ಟ್ರಾಟಜಿ ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್, ಇವರ ಸಲಹೆಯ ಪ್ರಕಾರ, ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜೀಸ್ ಪ್ರೈ. ಲಿ. ಸಂಸ್ಥೆಯ ಅಧಿಕಾರಿಗಳನ್ನು ಭೇಟಿಮಾಡಿ, ನಮ್ಮಮಕ್ಕಳಿಗೆ ಸುಲಭವಾಗಿ ಮೂಡುವಂತಹ ಕೆಲಸಗಳನ್ನು ನೀಡುವುದರ ಮೂಲಕ, ಅವರಲ್ಲಿ ಬೇಡಿಕೆ ಆಧಾರಿತ ಕೌಶಲ್ಯ ತರಬೇತಿ ನೀಡಿದಂತಾಗಿ, ಅರ್ಥವತ್ತಾದ ಉದ್ಯೋಗದಲ್ಲಿ ತೊಡಗಿಕೊಳ್ಳಲು ಅನುಕೂಲವಾಗುತ್ತದೆ, ಹಾಗೂ ಸೂಕ್ತ ವೇತನ ಪಡೆಯುವಂತಾಗುತ್ತದೆ ಎಂದು ಕೇಳಿಕೊಳ್ಳಲಾಯಿತು. ವಿನ್ಯಾಸ ಸಂಸ್ಥೆಯ ಉದ್ದಿಮೆಗಾರರಾದ ಶ್ರೀ ನರೇಂದ್ರ ನಾರಾಯಣ್‌ರವರು, ನಿಮ್ಹಾನ್ಸ್‌ನಲ್ಲಿ ಮನಃಶಾಸ್ತ್ರಜ್ಞರಾಗಿ ಕೆಲಸ ಮಾಡುತ್ತಿದ್ದ ಡಾ॥ ಎಚ್.ಎಸ್. ನಾರಾಯಣ್‌ರವರ ಪುತ್ರರು. ಇವರು ತಮ್ಮ ತಂದೆಯವರು, ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವವರು ಸಮಾಜದಲ್ಲಿ ಹೇಗೆ ಉಪಯುಕ್ತರನ್ನಾಗಿ ಮಾಡಬೇಕು ಎಂಬುದರ ಬಗ್ಗೆ ವಿಚಾರ ಮಾಡುತ್ತಿರುವುದನ್ನೂ ಬಾಲ್ಯದಿಂದಲೂ ಕಂಡು ಬೆಳೆದವರು. ಶ್ರೀ ನರೇಂದ್ರ ನಾರಾಯಣ್‌ರವರೂ ಸಹ, ತಮ್ಮ ತಂದೆಯವರಿಗೆ ಮಾಡುವ ಸಮರ್ಪಣೆಯಂತೆ, ಈ ವ್ಯಕ್ತಿಗಳ ಉಪಯುಕ್ತತೆಯ ಬಗ್ಗೆ ಪ್ರಯೋಗ ನಡೆಸಲು ನಿರ್ಧರಿಸಿದರು. ಶ್ರೀ ರಾಘವೇಂದ್ರ ಮಧ್ಯಸ್ಥ ಎಂಬ ವಿಶೇಷ ಶಿಕ್ಷಕರೂ ಸೇರಿದಂತೆ, ಒಂದು ಗುಂಪಿನ ಮಕ್ಕಳಿಗೆ ಉದ್ಯೋಗವನ್ನು ನೀಡಿ, ಅವರನ್ನು ವಿಶೇಷ ವ್ಯಕ್ತಿಗಳೆಂದು ಬೇರ್ಪಡಿಸದೆ, ಸಮನ್ವಯ ವಾತಾವರಣದಲ್ಲಿರಿಸಿದರು. ಪ್ರತಿದಿನವೂ ಅವರು ಮಾಡುವ ಕೆಲಸಗಳಲ್ಲಿ ಸೂಕ್ತ ಬದಲಾವಣೆಗಳನ್ನು ತಂದು, ಆ ವ್ಯಕ್ತಿಗಳು, ಕ್ರಮೇಣ ಸಾಮಾನ್ಯ ಉದ್ಯೋಗಿಗಳೊಡನೆ ಕೆಲಸ ಮಾಡುವಂತೆ ಸಮಗ್ರಗೊಳಿಸಿದರು.

ಆರು ವರ್ಷಗಳ ನಂತರ, ಮತ್ತೆರಡು ಉದ್ದಿಮೆಗಳು – ಕೇಯಿನ್ಸ್ ಟೆಕ್ನಾಲಜೀಸ್ ಪ್ರೈ. ಲಿ ಮತ್ತು ರಂಗ್‌ಸನ್ಸ್ ಎಲೆಕ್ಟ್ರಾನಿಕ್ಸ್ ಪ್ರೈ. ಲಿ. – ಇದು ರಂಗ್‌ರಾವ್ ಮತ್ತು ಸನ್ಸ್ ಗ್ರೂಪ್ ಆಫ್ ಕಂಪೆನೀಸ್‌ನ ಒಂದು ವಿಭಾಗ – ಈ ಪ್ರಯೋಗವನ್ನು ತಮ್ಮ ಉದ್ದಿಮೆಗಳಲ್ಲೂ ನಡೆಸಲು ಮುಂದೆ ಬಂದವು. ಈ ಉದ್ದಿಮೆಗಳು, ಇನ್ನೂ 23 ವಿಶೇಷ ವ್ಯಕ್ತಿಗಳು ಹಾಗೂ 3 ವಿಶೇಷ ಶಿಕ್ಷಕರಿಗೆ ಸಮಗ್ರ ಉದ್ಯೋಗ ಅವಕಾಶವನ್ನೂ ಏರ್ಪಡಿಸಿವೆ. ಸೌಮ್ಯ ಮಟ್ಟಕ್ಕಿಂತಲೂ ಸ್ವಲ್ಪ ಹೆಚ್ಚಿನ ಬುದ್ಧಿಶಕ್ತಿಯಿರುವ 6 ವ್ಯಕ್ತಿಗಳಿಗೆ, ವಿಶೇಷ ಶಿಕ್ಷಕರಿಲ್ಲದೆಯೆ, ಇಂಜಿನಿಯರಿಂಗ್ ಪ್ಲಾಸ್ಟಿಕ್ ಪ್ರೈ. ಲಿ. ಸಂಸ್ಥೆಯು ತಮ್ಮಲ್ಲಿ ಉದ್ಯೋಗ ನೀಡಿದೆ.

ಸಾಧ್ಯ ಉಪಕ್ರಮದಿಂದ ಒಟ್ಟು ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವ 39 ವ್ಯಕ್ತಿಗಳು ಹಾಗೂ 4 ವಿಶೇಷ ಶಿಕ್ಷಕರೂ ಸೇರಿದಂತೆ ಒಟ್ಟು 43 ವ್ಯಕ್ತಿಗಳಿಗೆ ಮುಖ್ಯವಾಹಿನಿ ಉದ್ದಿಮೆಗಳಲ್ಲಿ ಉದ್ಯೋಗ ನಿರ್ವಹಿಸಲು ಅವಕಾಶ ನೀಡಲಾಗಿದೆ. ಈ ಪ್ರಯೋಗವು ಮೈಸೂರಿನ ಹೊರಗಿನ ಪ್ರದೇಶಗಳಲ್ಲಿರುವವರನ್ನೂ ಪ್ರೇರೇಪಿಸಿದೆ. ವಿನ್ಯಾಸ್ ಇನ್ನೋವೇಟಿವ್ ಟೆಕ್ನಾಲಜೀಸ್ ಪ್ರೈ. ಲಿ.ಮ ಗ್ರಾಹಕರಲ್ಲಿ ಒಬ್ಬರಾದ ಶ್ರೀಮತಿ ಅನಿತ ಎಂಬುವರು ಈ ವಿಧಾನವನ್ನು ಇರಾಖ್‌ನಲ್ಲಿ ಕೂಡ ಪ್ರಾರಂಭಿಸಿದ್ದಾರೆ. ಇದರ ಬಗ್ಗೆ ಗಲ್ಫ್ ಮೀಡಿಯಾ ತನ್ನ ಸುದ್ದಿಯನ್ನು ತಿಳಿಸಲಾಗಿ, ವೆಬ್‌ಸೈಟ್‌ನಲ್ಲಿ ಈಗಲೂ ಕಂಡುಬರುತ್ತದೆ. ಅಮೆರಿಕದಲ್ಲಿರುವ ಗ್ರಾಹಕರೂ ಸಹ ಮಾದರಿಯನ್ನು ಅನುಕರಿಸಲು ಪ್ರೇರೇಪಿತಗೊಂಡಿದ್ದಾರೆ. ನಮ್ಮ ಪಕ್ಕದಲ್ಲೇ ಇರುವ ಬೆಂಗಳೂರಿನ ಎಸ್.ಎ.ಪಿ. ಆಟಿಸಂ ಇರುವ ವ್ಯಕ್ತಿಗಳ ಒಂದು ತಂಡವನ್ನು ತಜ್ಞರಾದ ಶ್ರೀಮತಿ ಜಯಶ್ರೀ ರಮೇಶ್ ಮತ್ತು ಎನೇಬಲ್ ಇಂಡಿಯಾದ ಶಾಂತಿ ಇವರ ನೇತೃತ್ವದಲ್ಲಿ, ಸೇರಿಸಿಕೊಳ್ಳಲಾಯಿತು. ಕ್ರಮೇಣ, ಮುಖ್ಯವಾಹಿನಿಯಲ್ಲಿ ವ್ಯಕ್ತಿಗತವಾಗಿ ಉದ್ಯೋಗಗಳಲ್ಲಿರಿಸುವುದನ್ನು, ಗುಂಪಿನಲ್ಲಿ ತಂಡದಂತೆ, ಉದ್ಯೋಗಗಲ್ಲಿರಿಸುವುದಕ್ಕೆ ಮಾರ್ಪಾಟು ಮಾಡಲಾಯಿತು. ಹೀಗೆ, ಬುದ್ಧಿಶಕ್ತಿಯಲ್ಲಿ ನ್ಯೂನತೆಯಿರುವ ವ್ಯಕ್ತಿಗಳೂ ಸಹ, ಇತರರಂತೆ, ಯಶಸ್ವಿಯಾಗಿ ಉದ್ಯೋಗಗಳಲ್ಲಿ ತೊಡಗಿಕೊಂಡು, ಅವರಂತೆಯೇ ವೇತನ ಮತ್ತು ಇತರ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ. ಹೀಗೆ, ಸಾಧ್ಯ – ಅನುಪಮ ರೀತಿಯ ಮುಖ್ಯವಾಹಿನಿಯಲ್ಲಿ ಉದ್ಯೋಗದಲ್ಲಿ ತೊಡಗಿಕೊಳ್ಳುವ ಪ್ರಯೋಗವು ಮೈಸೂರಿನಲ್ಲಿ ಜನಿಸಿ, ವಿಕಾಸಗೊಳ್ಳುತ್ತಿದೆ. ❑

# ಶತಕೋಟಿ ದಾಟಿದ ಆಧಾರ್

ಭಾರತದ ವಿಶಿಷ್ಟ ಗುರುತು ಪ್ರಾಧಿಕಾರವು ನೂರು ಕೋಟಿ ಆಧಾರ್ ಕಾರ್ಡ್‌ಗಳನ್ನು ನಿರೂಪಿಸಿ ದಾಖಲೆ ಮಾಡಿದೆ. ಕಳೆದ ಐದೂವರೆ ವರ್ಷಗಳಿಂದ ಅಂದರೆ 2010ರಿಂದ ಆಧಾರ್ ಕಾರ್ಡುಗಳನ್ನು ವಿತರಿಸಲಾಗುತ್ತಿದ್ದು, ಏಪ್ರಿಲ್ 4, 2016 ರಂದು ನೂರನೇ ಕೋಟಿ ಆಧಾರ್ ಕಾರ್ಡ್‌ನ್ನು ನಿರೂಪಿಸಿದ ಸಾಧನೆ ಮಾಡಲಾಗಿದೆ. ವಿವಿಧ ಆರ್ಥಿಕ ಸಹಾಯ ಧನ ಫಲಾನುಭವಿ ಮತ್ತು ಸೇವೆಗಳನ್ನು ನಿರ್ದಿಷ್ಟ ಗುಂಪಿಗೆ ಹಸ್ತಾಂತರಿಸುವ ನಿಟ್ಟಿನಲ್ಲಿ ರೂಪಿಸಲಾದ ಐತಿಹಾಸಿಕ ಆಧಾರ್ ಕಾಯಿದೆ 2016 ಸೂಚನಾ ಪತ್ರ ಜಾರಿಗೊಂಡ ಕೆಲವೇ ದಿನಗಳಲ್ಲಿ ಈ ಸಾಧನೆ ಮಾಡಿರುವುದು ಗಮನಾರ್ಹ. 2015ರ ಜನಸಂಖ್ಯೆ ಪ್ರಮಾಣ ಪರಿಗಣಿಸಿದಾಗ 18 ವರ್ಷ ವಯೋಮಿತಿಯ ಶೇ. 93 ರಷ್ಟು ಜನಸಂಖ್ಯೆ ಆಧಾರ್ ಕಾರ್ಡಿನ ವ್ಯಾಪ್ತಿಗೆ ಒಳಪಟ್ಟಿರುವುದು ವ್ಯಕ್ತವಾಗಿದೆ. ಪ್ರಸ್ತುತ ಹದಿಮೂರು ರಾಜ್ಯಗಳಲ್ಲಿ ಶೇ. 90 ರಷ್ಟು ಜನರು ಆಧಾರ್ ಕಾರ್ಡ್ ಪಡೆದುಕೊಂಡಿದ್ದಾರೆ. 13 ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಧಾರ್ ನೀಡಿಕೆ ಪ್ರಮಾಣ ಶೇ. 75 – 90 ರಷ್ಟಿದೆ.

**ಆಧಾರ್ ಮುಖ್ಯ ಅಂಶಗಳು**

* ನೂರು ಕೋಟಿ ದಾಟಿದ ಆಧಾರ್ ಕಾರ್ಡ್
* ದೇಶದ 73.96 ಕೋಟಿ (93%) ವಯಸ್ಕರು ಆಧಾರ್ ಕಾರ್ಡ್ ಪಡೆದಿದ್ದಾರೆ.
* 5–18 ವರ್ಷದ 22.25 ಕೋಟಿ ಮಕ್ಕಳು ಆಧಾರ್ ಕಾರ್ಡ್ ಹೊಂದಿದ್ದಾರೆ.
* 5 ವರ್ಷದೊಳಗಿನ 2.30 ಕೋಟಿ ಮಕ್ಕಳು ಆಧಾರ್ ಕಾರ್ಡ್ ಹೊಂದಿದ್ದಾರೆ.
* ಪ್ರತಿದಿನ 5–7 ಲಕ್ಷ ಜನರು ಆಧಾರ್‌ಗಾಗಿ ನೋಂದಾಯಿಸಿ–ಕೊಳ್ಳುತ್ತಿದ್ದಾರೆ.
* ಆಧಾರ್ ವಿಶ್ವದ ಅತಿ ದೊಡ್ಡ ಆನ್‌ಲೈನ್ ಡಿಜಿಟಲ್ ಗುರುತಿನ ವೇದಿಕೆ ಆಗಿದೆ.

**ಆಧಾರ್ ಪ್ರಯೋಜನಗಳು**

* ಡಿಪಿಟಿಎಲ್ (ಪಹಲ್) – ಅಂದಾಜು ರೂ. 14,672 ಕೋಟಿ ಉಳಿತಾಯ
* ಪಿಡಿಎಸ್ – ಪಡಿತರ ವಿತರಣೆ ಆಂಧ್ರಪ್ರದೇಶ, ತೆಲಂಗಾಣ, ಪುದುಚೆರಿ ಮತ್ತು ದೆಹಲಿಗಳ ನಾಲ್ಕು ರಾಜ್ಯಗಳಲ್ಲಿ ರೂ. 2,346 ಕೋಟಿ ಉಳಿತಾಯ.
* ಶಿಷ್ಯವೇತನ – ಆಂಧ್ರಪ್ರದೇಶ, ತೆಲಂಗಾಣ ಮತ್ತು ಪಂಜಾಬ್ – ಈ ಮೂರು ರಾಜ್ಯಗಳಲ್ಲಿ ಅಂದಾಜು ರೂ. 276 ಕೋಟಿ ಉಳಿತಾಯ.
* ಪಿಂಚಣಿ – ಜಾರ್ಖಂಡ್, ಚಂಡಿಗಢ್ ಮತ್ತು ಪುದುಚೆರಿಗಳಲ್ಲಿ ಅಂದಾಜು ರೂ. 66 ಕೋಟಿ ಉಳಿತಾಯ.


**ಆಧಾರ್ ಬಳಕೆ**

* ವಿಶಿಷ್ಟ ಆಧಾರ್ ಜೊತೆ 25.48 ಕೋಟಿ ಬ್ಯಾಂಕ್ ಖಾತೆ ಸಂಪರ್ಕ.
* ಆಧಾರ್ ಜೊತೆ 12.28 ಕೋಟಿ (71%) ಎಲ್‌ಪಿಜಿ ಸಂಪರ್ಕ.
* ಆಧಾರ್ ಜೊತೆಗೆ 11.39 ಕೋಟಿ (45%) ರೇಷನ್ ಕಾರ್ಡ್ ಸಂಪರ್ಕ.
* ಆಧಾರ್ ಜೊತೆ 5.90 ಕೋಟಿ (60%) ನರೇಗಾ ಕಾರ್ಡ್ ಸಂಪರ್ಕ

**ಆಧಾರ್ ಪ್ರಮಾಣೀಕರಣ**

* ಭಾರತದ ವಿಶಿಷ್ಟ ಗುರುತಿನ ಪ್ರಾಧಿಕಾರವು 150.6 ಕೋಟಿ ಪ್ರಮಾಣೀಕೃತ ವಹಿವಾಟುಗಳನ್ನು ಮಾಡಿದೆ.
* ಪ್ರಾಧಿಕಾರದಿಂದ 8.4 ಕೋಟಿ ಇ–ಕೆವೈಸಿ ವಹಿವಾಟುಗಳಾಗಿವೆ.
* ಪ್ರಾಧಿಕಾರ ಪ್ರತಿದಿನ 40 ಲಕ್ಷಕ್ಕೂ ಹೆಚ್ಚು ಪ್ರಮಾಣೀಕೃತ ವಹಿವಾಟುಗಳನ್ನು ನಡೆಸುತ್ತಿದೆ.

ಆಧಾರ್ ಪಾವತಿ ಸಂಪರ್ಕ (ಎಪಿಬಿ) ವ್ಯವಸ್ಥೆಯು ಫಲಾನುಭವಿಯ ಯಾವುದೇ




ವಿವರಗಳಿಲ್ಲದೆ ಆಧಾರ್ ಸಂಖ್ಯೆಯ ಮೂಲಕ ನೆರವನ್ನು ನೇರವಾಗಿ ಪಾವತಿ ಮಾಡುತ್ತದೆ. ಕಳೆದ ಎರಡು ವರ್ಷಗಳಲ್ಲಿ ಈ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಉಂಟಾಗಿದೆ. 23 ಕೋಟಿಗೂ ಹೆಚ್ಚು ಜನರು ತಮ್ಮ ಬ್ಯಾಂಕ್ ಖಾತೆಗಳನ್ನು ಆಧಾರ್ ಪಾವತಿ ಸಂಪರ್ಕದ ಮೇಲೆ ಆಧಾರ್‌ಗಳ ಮೇಲೆ ಲಿಂಕ್ ಪಡೆದಿದ್ದಾರೆ.

ಮೇ 31, 2014ರ ವೇಳೆಗೆ ಎಪಿಬಿ ಮೂಲಕ 7.13 ಕೋಟಿ ಲಾಗ್‌ನ 4,474 ಕೋಟಿ ರೂ. ವಹಿವಾಟು ನಡೆಸಲಾಗಿತ್ತು. ಈಗ ಈ ಪ್ರಮಾಣ ಕ್ರಮವಾಗಿ ಅಂದರೆ 94.71 ಕೋಟಿ ಲಾಗ್ ಹಾಗೂ 28,363 ಕೋಟಿ ರೂ. ಗಳಿಗೆ ಏರಿದೆ.

ಕಳೆದ ಎರಡು ವರ್ಷಗಳಿಂದ ಮಾಡಲಾದ ಮತ್ತೊಂದು ಸಾಧನೆ ಎಂದರೆ ಆಧಾರ್ ಸಂಪರ್ಕದ ಪಾವತಿ ವ್ಯವಸ್ಥೆ. ಈ ವ್ಯವಸ್ಥೆಯಲ್ಲಿ ಬ್ಯಾಂಕ್ ಖಾತೆ ಲಭ್ಯವಿರದ ವ್ಯಕ್ತಿ ತನ್ನ ಮನೆ ಬಾಗಿಲಲ್ಲಿ ಆಧಾರ್ ಸಂಖ್ಯೆ ಮತ್ತು ಕೈ ಬೆರಳಚ್ಚು (ಮೈಕ್ರೊ ಎಟಿಎಮ್) ಒದಗಿಸುವ ಮೂಲಕ ಹಣ ಪಡೆಯಬಹುದಾಗಿದೆ. ಮೇ 31, 2016ರ ಅಂಕಿ ಅಂಶದ ಪ್ರಕಾರ 46 ಲಕ್ಷ ಲಾಗ್‌ಗಳ ವಹಿವಾಟು ನಡೆದಿತ್ತು. ಅದು ಇದೀಗ 10.76 ಕೋಟಿ ಲಾಗ್‌ಗಳಿಗೆ ಏರಿದೆ.

ಸರ್ಕಾರ ಪ್ರಧಾನ ಮಂತ್ರಿ ಜನ್ ಧನ್ ಯೋಜನಾ, ಮನರೇಗಾ, ಪಿಂಚಣಿ, ಶಿಷ್ಯವೇತನ, ಯುಎಎನ್ (ಇಪಿಎಫ್‌ಓ), ಪಡಿತರ ವಿತರಣೆ ವ್ಯವಸ್ಥೆ, ಪಾಸ್ ಪೋರ್ಟ್, ಸರ್ಕಾರಿ ಕಚೇರಿಗಳಲ್ಲಿ ಹಾಜರಾತಿ ಮೊದಲಾದವುಗಳಿಗೆ ಆಧಾರ್ ಸಂಪರ್ಕ ಕಲ್ಪಿಸಲಾಗಿದೆ. ❑

# ದಿವ್ಯಾಂಗನ ಜೀವನಾನುಭವಗಳು

* ಅನಿಲ್ ಕುಮಾರ್



**ಸರ್ಕಾರವು ವಿಶೇಷ ಚೇತನ ವಿದ್ಯಾರ್ಥಿಗಳಿಗಾಗಿ ಪ್ರಾಥಮಿಕ ಹಂತದಿಂದ ಕಾಲೇಜು ಹಂತದವರೆಗೆ ಉಚಿತ ಶಿಕ್ಷಣ ಒದಗಿಸಲು ಮುಂದಾಗಬೇಕು ಹಾಗೆಯೇ ಸಕಲ ಸೌಲಭ್ಯ ಹೊಂದಿದ ಆಸ್ಪತ್ರೆಗಳಲ್ಲಿ ಅಂಗವಿಕಲತೆಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಿಕೊಳ್ಳಲು ವಿಶೇಷ ಚೇತನರಿಗೆ ಧನ ಸಹಾಯವನ್ನು ನೀಡಬೇಕು.**

ನನ್ನ ಹೆಸರು ಅನಿಲ್ ಕುಮಾರ್. 27ನೇ ಜನವರಿ 1987 ರಂದು ಗದಗಿನ ಒಂದು ನರ್ಸಿಂಗ್ ಹೋಂನಲ್ಲಿ ನಾನು ನನ್ನ ತಂದೆ ತಾಯಿಯವರಿಗೆ ಎರಡನೇ ಮಗನಾಗಿ ಹುಟ್ಟಿದೆನು. ನನ್ನ ತಂದೆಯ ಹೆಸರು ಸಿದ್ದಪ್ಪ ಭಾವಿಕಟ್ಟಿ ಹಾಗೂ ತಾಯಿಯ ಹೆಸರು ಜಯಶ್ರೀ. ನನ್ನ ಹುಟ್ಟು ಸಹಜವಾಗಿರದೆ ಬಹುಮುಖ ಅಂಗವೈಕಲ್ಯದಿಂದ ಕೂಡಿತ್ತು. ನಾನು ಹುಟ್ಟಿದಾಗ ನನ್ನ ದೇಹದ ತೂಕವು ಒಂದು ಕಿಲೋ ಗ್ರಾಂಗಿಂತಲೂ ಕಡಿಮೆ ಇತ್ತು. ನನ್ನ ತಂದೆ ತಾಯಿಯ ವಾಸಸ್ಥಳ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕೂಕನೂರು ಎಂಬ ಗ್ರಾಮ (ಆಗ ರಾಯಚೂರು ಜಿಲ್ಲೆಯಲ್ಲಿತ್ತು). ಅಲ್ಲಿಯ ಜನರು ಜೀವನೋಪಾಯಕ್ಕಾಗಿ ಕೃಷಿಯನ್ನು ಅವಲಂಬಿಸಿದ್ದಾರೆ. ಅದು ನೀರಾವರಿ ಇಲ್ಲದ ಒಂದು ಬಯಲು ಸೀಮೆ ಪ್ರದೇಶ. ಕೂಕನೂರು ಗ್ರಾಮದ ಜನಸಂಖ್ಯೆ 2011ನೇ ಜನಗಣತಿಯ ಪ್ರಕಾರ 18,033 ರಷ್ಟಿದೆ. 2013 ರಲ್ಲಿ ಕೇಂದ್ರ ಸರ್ಕಾರವು ಭಾರತ ಸಂವಿಧಾನದ ಅನುಚ್ಛೇದ 371(ಎ) ತಿದ್ದುಪಡಿಯ ಅನ್ವಯ ಕರ್ನಾಟಕದ 6 ಜಿಲ್ಲೆಗಳನ್ನು ಹೈದರಾಬಾದ್ ಕರ್ನಾಟಕವೆಂದು ಗುರುತಿಸಿ ಹಿಂದುಳಿದ ಪ್ರದೇಶವೆಂದು ಘೋಷಿಸಿದೆ. ಆ ಆರು ಜಿಲ್ಲೆಗಳ ಪೈಕಿ ಕೊಪ್ಪಳ ಜಿಲ್ಲೆಯೂ ಒಂದು.

ನನ್ನ ಕುಟುಂಬವು ಬಟ್ಟೆಯನ್ನು ನೇಯ್ದು (ಕುಲ ಕಸಬು) ಹಾಗೂ ಅದರ ಜೊತೆಗೆ ಕೋಳಿ ಮತ್ತು ಆಡು ಸಾಕಾಣಿಕೆ ಮಾಡಿ ಜೀವನ ಸಾಗಿಸುತ್ತಿದ್ದಿತು. ಆ ಕಡು ಬಡತನದಲ್ಲಿ ನನ್ನ ತಂದೆಯವರು ಕಷ್ಟ ಪಟ್ಟು ಓದಿ ಪದವಿಯನ್ನು ಹೊಂದಿ ಸರ್ಕಾರಿ ಕೆಲಸಕ್ಕೆ ಸೇರಿದರು. ನನ್ನ ತಂದೆ ತಾಯಿಯರು ನಾನು ಹುಟ್ಟಿ ಮೂರು ತಿಂಗಳಾಗಿರುವಾಗಲಿಂದಲೇ ನನ್ನ ಅಂಗವೈಕಲ್ಯ ನಿವಾರಣೆಗಾಗಿ ಹುಬ್ಬಳ್ಳಿ, ಮುಂಬಯಿಯಂತಹ ನಗರಗಳ ವೈದ್ಯರಲ್ಲಿಗೆ ನನ್ನನ್ನು ಕರೆದುಕೊಂಡು ಹೋದರು. ವೈದ್ಯರು ನನ್ನನ್ನು ಪರೀಕ್ಷಿಸಿ ನನ್ನ ಅಂಗ ವೈಕಲ್ಯತೆಯ ಖಾಯಿಲೆಯನ್ನು Arthrogryposis Multiplex Congenita (AMC) ಎಂದು ಗುರುತಿಸಿದರು. ಈ ಖಾಯಿಲೆಯಿಂದಾಗಿ ನನ್ನ ಕೈಕಾಲುಗಳ ಕೀಲುಗಳಲ್ಲಿ ಸರಿಯಾದ ಬೆಳವಣಿಗೆ ಇರಲಿಲ್ಲ. ಇದರಿಂದಾಗಿ ನನಗೆ ಎಲ್ಲರಂತೆ ಕೈಕಾಲುಗಳನ್ನು ಮಡಿಚಲು ಹಾಗೂ ಉಪಯೋಗಿಸಲು ಆಗುವುದಿಲ್ಲ. ಹಾಗೆಯೇ ನನ್ನ ಸೊಂಟದ ಭಾಗದಲ್ಲಿ ಸರಿಯಾದ ಬೆಳವಣಿಗೆಯಾಗದೆ ಇದ್ದುದರಿಂದ ನನಗೆ ಎದ್ದು ನಿಲ್ಲಲು ಹಾಗೂ ನಡೆದಾಡಲು ಆಗುವುದಿಲ್ಲ. ನಾನು ಸದಾ ಗಾಲಿಕುರ್ಚಿಯಲ್ಲೇ ನನ್ನ ಮುಂದಿನ ಜೀವನವನ್ನು ಸಾಗಿಸಬೇಕಾಗಬಹುದೆಂದು ವೈದ್ಯರು ಹೇಳಿದರು. ಆಗ ನಾನು ಎರಡರಿಂದ ಮೂರು ವರ್ಷದವನಾಗಿದ್ದೆನು ಮತ್ತು ಏನೂ ತಿಳಿಯದವನಾಗಿದ್ದೆನು. ನಾನು ಎಲ್ಲ ಹುಡುಗರಂತೆ ಆಟವಾಡಿಕೊಂಡು ಖುಷಿಯಿಂದ ಇರುತ್ತಿದ್ದೆ.

ನನ್ನ ಎರಡೂ ಕೈಗಳಲ್ಲಿ ಬಲಗೈ ಬಲಹೀನವೆಂದೇ ಹೇಳಬೇಕು. ಏಕೆಂದರೆ ಈಗಲೂ ಸಹ ನಾನು ನನ್ನ ಬಲಗೈಯಿಂದ ಯಾವ ವಸ್ತುವನ್ನೂ ಹಿಡಿಯಲಾರೆನು ಹಾಗೂ ಎತ್ತಲಾರೆನು. ನನ್ನ ಎಡಗೈ ಮಾತ್ರ ತಕ್ಕಮಟ್ಟಿಗೆ ಉತ್ತಮವಾಗಿದೆ. ನನ್ನ ಎಡಗೈಯಿಂದ ಬರೆಯಬಲ್ಲೆ ಹಾಗೂ ಚಮಚದಿಂದ ಊಟಮಾಡಬಲ್ಲೆ. ನನ್ನ ಎರಡೂ ಕಾಲುಗಳು ಬಲಹೀನವಾಗಿರುವುದರಿಂದ ನನಗೆ ಎದ್ದು ಓಡಾಡಲು ಆಗುವುದಿಲ್ಲ. ಮೊಣಕಾಲಿನ ಕೀಲುಗಳು ಸರಿಯಾಗಿ

* ದಿವ್ಯಾಂಗರು.

ಬೆಳವಣಿಗೆಯಾಗದೆ ಇರುವುದರಿಂದ ಮಡಿಚಲಾಗದೆ ನನ್ನ ಕಾಲುಗಳು ನೇರವಾಗಿ ಇರುತ್ತವೆ. ಈ ಎಲ್ಲ ಅಂಗವೈಕಲ್ಯತೆಗಳನ್ನು ಸರಿಪಡಿಸಲು ನನ್ನ ತಂದೆಯವರು ನನ್ನನ್ನು ವೈದ್ಯರಲ್ಲಿಗೆ ಕರೆದುಕೊಂಡು ಹೋದರು. ನನಗೆ ಎಂಟು ವರ್ಷವಾಗುವದರೊಳಗಾಗಿ ಸುಮಾರು ಹತ್ತಕ್ಕೂ ಹೆಚ್ಚು ಶಸ್ತ್ರಚಿಕಿತ್ಸೆಗಳಿಗೆ ಒಳಗಾಗಿದ್ದೆನು. ಆ ಸಮಯದಲ್ಲಿ ನಾನು ಮನೆಯಲ್ಲಿರುವುದಕ್ಕಿಂತ ಆಸ್ಪತ್ರೆಯಲ್ಲೇ ಹೆಚ್ಚಿನ ಸಮಯ ಕಳೆದಿರುವೆನು. ಆಗ ನನಗೆ ಆಸ್ಪತ್ರೆಯೇ ಮನೆಯಾಗಿಬಿಟ್ಟಿತ್ತು. ನನ್ನ ದೇಹದ ಮೂಳೆಗಳು ಗಟ್ಟಿಯಾಗಿರದೆ ಬಹಳ ಮೃದುವಾಗಿವೆ. ನಾನು ಆಸ್ಪತ್ರೆಯಲ್ಲಿರುವಾಗ ನನ್ನ ಮುದ್ದಾದ ಮಾತುಗಳಿಂದ ಮಾರುಹೋದ ನರ್ಸ್‌ಗಳು, ನನ್ನನ್ನು ಮುದ್ದಾಡಲು ತೋಳುಗಳನ್ನು ಹಿಡಿದು ಎತ್ತಿಕೊಳ್ಳಲು ಬಂದಾಗ, ನನ್ನ ತಂದೆ ತಾಯಿಗಳಿಬ್ಬರೂ ನನ್ನ ಕೈಗಳು ಎಲ್ಲಿ ಮುರಿದು ಹೋಗುವವು ಎಂಬ ಭಯದಿಂದ ಅವರುಗಳನ್ನು ತಡೆಯಲು ಧಾವಿಸಿ ಬರುತ್ತಿದ್ದರು. ಆದರೂ ಸಹ ಎರಡು ಸಂದರ್ಭಗಳಲ್ಲಿ ನನ್ನ ಬಲಗೈ ಮುರಿದು ಹೋಗಿರುತ್ತದೆ. ಅನಂತರ ಅದನ್ನು ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಕಿ ಸರಿಪಡಿಸಲಾಗಿರುತ್ತದೆ. ಹೀಗೆ ನನ್ನ ತಂದೆ ತಾಯಿಯರು ನನಗಾಗಿ ಪಟ್ಟ ಕಷ್ಟಗಳನ್ನು ಪದಗಳಲ್ಲಿ ಹೇಳಲು ಸಾಧ್ಯವಿಲ್ಲ.

**ಕಳಕಳಿ**

ಮೊದಲೇ ಹೇಳಿದ ಹಾಗೆ ನನ್ನ ತಂದೆಯವರು ಸರ್ಕಾರಿ ಕೆಲಸದಲ್ಲಿದ್ದರು. 1993ನೇ ಇಸವಿಯಲ್ಲಿ ಅವರಿಗೆ ಉತ್ತರ ಕರ್ನಾಟಕ ಭಾಗದಿಂದ ಬೆಂಗಳೂರಿಗೆ ವರ್ಗವಾಯಿತು. ಹುಟ್ಟಿ ಆರು ಏಳು ವರ್ಷದವರೆಗೆ ನಾನು ಶಾಲೆಯ ಮುಖವನ್ನೇ ನೋಡಿರಲಿಲ್ಲ. ಒಂದು ದಿನ ನನ್ನ ತಂದೆಯ ಸ್ನೇಹಿತರಾದ ಡಾ|| ಮಂಜುನಾಥ್‌ರವರು ನಮ್ಮ ಮನೆಗೆ ಬಂದಿದ್ದರು. ಆಗ ನಾನು ಮನೆಯಲ್ಲಿ ಕುಳಿತಲ್ಲಿಯೇ ಆಟವಾಡುತಿದ್ದುದನ್ನು ಕಂಡು ಆಶ್ಚರ್ಯಚಕಿತರಾಗಿ ನನ್ನ ತಂದೆಯ ಬಳಿಯಲ್ಲಿ ನನ್ನನ್ನು ಶಾಲೆಗೆ ಕಳುಹಿಸದಿರುವ ಬಗ್ಗೆ ವಿಚಾರಿಸಿದರು.

ಬಹುಮುಖ ಅಂಗವೈಕಲ್ಯವುಳ್ಳ ನನ್ನನ್ನು ಶಾಲೆಗೆ ಹೇಗೆ ಕಳುಹಿಸುವುದು ಹೇಗೆ ಎಂಬ ಚಿಂತೆಯಿಂದಾಗಿ ನನ್ನ ತಂದೆ ನನ್ನನ್ನು ಶಾಲೆಗೆ ಕಳುಹಿಸಿರಲಿಲ್ಲ. ಶಾಲೆಗೆ ಕಳುಹಿಸಿದರೆ, ಶಾಲೆಯಲ್ಲಿರುವಾಗ ನನಗೆ ಮೂತ್ರ ಬಂದಲ್ಲಿ, ಮೂತ್ರ ವಿಸರ್ಜನೆ ಮಾಡಿಸುವವರಾರು ಹಾಗೂ ಇತರ ಸಣ್ಣ ಪುಟ್ಟ ಅವಶ್ಯಕತೆಗಳನ್ನು ಪೂರೈಸುವವರಾರು ಎಂಬ ಚಿಂತೆಯೇ ನನ್ನ ತಂದೆಯವರು ನನ್ನನ್ನು ಶಾಲೆಗೆ ಕಳುಹಿಸದಿರುವುದಕ್ಕೆ ಮುಖ್ಯ ಕಾರಣವಾಗಿತ್ತು. ಇದಲ್ಲದೆ ದಿನನಿತ್ಯ ನನ್ನನ್ನು ಶಾಲೆಗೆ ಕರೆದುಕೊಂಡು ಹೋಗಿ ಬರುವವರು ಯಾರು ಮತ್ತು ಹೇಗೆ ಕರೆದುಕೊಂಡು ಹೋಗುವುದು ಎಂಬ ಚಿಂತೆಯು ಮತ್ತೊಂದು ಕಾರಣವಾಗಿದ್ದಿತ್ತು. ಆಗ ನನ್ನ ತಂದೆಯ ಸ್ನೇಹಿತರು ಗಾಲಿಕುರ್ಚಿಯ ಸಲಹೆಯನ್ನು ನೀಡಿದರು. "ಶಾಲೆಯಲ್ಲಿರುವಾಗ ಅನಿಲನ ಅವಶ್ಯಕತೆಗಳು ಹೇಗೋ ಪೂರೈಸಲ್ಪಡುತ್ತವೆ. ಅವುಗಳ ಬಗ್ಗೆ ಚಿಂತೆ ಬೇಡ. ಅನಿಲನನ್ನು ಶಾಲೆಗೆ ಕಳುಹಿಸುವ ವ್ಯವಸ್ಥೆ ಮಾಡಿ" ಎಂದು ಅವರು ನನ್ನ ತಂದೆಗೆ ಸಲಹೆ ನೀಡಿದರು. ಅವರ ಸಲಹೆಯಂತೆ ನನ್ನ ತಂದೆಯು ನನಗಾಗಿ ಒಂದು ಗಾಲಿಕುರ್ಚಿಯನ್ನು ತಂದರು ಹಾಗೂ ನನ್ನನ್ನು ಶಾಲೆಗೆ ಸೇರಿಸುವ ಏರ್ಪಾಡು ಮಾಡಿದರು.

ಈಗಿನ ದಿನಗಳಲ್ಲಿ ಎಲ್ಲಾ ತಂದೆ ತಾಯಿಯರು ತಮ್ಮ ಮಕ್ಕಳನ್ನು ಆಂಗ್ಲ ಮಾಧ್ಯಮ ಶಾಲೆಗಳಿಗೆ ಸೇರಿಸಲು ಇಚ್ಛಿಸುತ್ತಾರೆ. ನನ್ನ ತಾಯಿಯೂ ಸಹ ನನ್ನನ್ನು ಆಂಗ್ಲ ಮಾಧ್ಯಮ ಶಾಲೆಗೆ ಸೇರಿಸಲು ಇಚ್ಛಿಸಿದ್ದರು. ಆದರೆ ನನ್ನ ತಂದೆ ಅದಕ್ಕೊಪ್ಪದೆ ನನ್ನನ್ನು ಕನ್ನಡ ಮಾಧ್ಯಮ ಶಾಲೆಗೆ ಸೇರಿಸಿದರು. ಸಾಮಾನ್ಯವಾಗಿ ಆಂಗ್ಲ ಮಾಧ್ಯಮ ಶಾಲೆಗಳು ಖಾಸಗಿ ಒಡೆತನಕ್ಕೆ ಸೇರಿರುತ್ತವೆ ಹಾಗೂ ಬಹುಮಹಡಿ ಕಟ್ಟಡಗಳನ್ನು ಹೊಂದಿರುತ್ತವೆ. ಶಾಲೆಯ ಆಡಳಿತ ವರ್ಗವು ನಾನು ಓದುವ ಎಲ್ಲಾ ತರಗತಿಗಳನ್ನು ನೆಲಮಹಡಿಯಲ್ಲಿಯೇ ನಡೆಸಲು ಒಪ್ಪದಿರಬಹುದು ಎಂಬುದು ಅವರ ಅನಿಸಿಕೆಯಾಗಿತ್ತು, ನಾನು ಒಂದನೇ ತರಗತಿಗಾಗಿ ಬೆಂಗಳೂರಿನಲ್ಲಿ ಮಲ್ಲೇಶ್ವರಂಗೆ ಹತ್ತಿರವಿರುವ ಕೋದಂಡರಾಮಪುರದಲ್ಲಿರುವ ಕನ್ನಡ ಮಾಧ್ಯಮ ಸರ್ಕಾರಿ ಪ್ರಾಥಮಿಕ ಶಾಲೆಗೆ ಸೇರಿದೆನು. ಆಗ ನನ್ನ ತಂದೆ/ತಾಯಿ ನನ್ನನ್ನು ಗಾಲಿ ಕುರ್ಚಿಯಲ್ಲಿ ಕುಳ್ಳಿರಿಸಿ ತಳ್ಳಿಕೊಂಡು ಹೋಗಿ ಶಾಲೆಗೆ ಬಿಡುತ್ತಿದ್ದರು (ಗಾಲಿ ಕುರ್ಚಿಯನ್ನು ತಳ್ಳಿಕೊಂಡು ಹೋಗಲು



ನನಗೆ ಆಗುತ್ತಿರಲಿಲ್ಲ). ಶಾಲೆ ಮುಗಿದ ಮೇಲೆ ನನ್ನ ತಾಯಿಯು ಮನೆಗೆ ಕರೆದುಕೊಂಡು ಬರುತ್ತಿದ್ದರು. ಹೀಗೆ ಒಂದು ವರುಷ ನಾನು ಒಂದನೇ ತರಗತಿಯನ್ನು ಯಶಸ್ವಿಯಾಗಿ ಮುಗಿಸಿದೆನು.

**ಸ್ಪಂದನೆ**

ಇದಾದ ನಂತರ ನನ್ನ ತಂದೆಗೆ ಬೆಂಗಳೂರಿನ ಗಾಂಧಿನಗರದಿಂದ ಜಯನಗರಕ್ಕೆ ವರ್ಗಾವಣೆ ಆಯಿತು. ಆದ್ದರಿಂದ ನಾವು ಕೋದಂಡ ರಾಮಪುರದಿಂದ ಜಯನಗರಕ್ಕೆ ಮನೆಯನ್ನು ಬದಲಾಯಿಸಬೇಕಾಯಿತು. ಆಗ ನನ್ನ ತಂದೆಯು ಜಯನಗರ 9ನೇ ಬಡಾವಣೆಯಲ್ಲಿರುವ ಸಹಕಾರಿ ವಿದ್ಯಾ ಕೇಂದ್ರ ಕನ್ನಡ ಮಾಧ್ಯಮದ ಖಾಸಗಿ ಶಾಲೆಗೆ ಎರಡನೇ ತರಗತಿಗೆ ನನ್ನನ್ನು ಸೇರಿಸಿದರು. ಅಲ್ಲಿ ನನ್ನ ತಂದೆಯವರು ಶಾಲೆಯ ಆಡಳಿತ ಮಂಡಳಿಯವರಿಗೆ ನಾನು ಓದುವ ಎಲ್ಲಾ ತರಗತಿಗಳನ್ನು ನೆಲಮಹಡಿಯಲ್ಲಿಯೇ ನಡೆಯಿಸಿಕೊಡಬೇಕೆಂದು ಮನವಿ ಮಾಡಿಕೊಂಡರು. ಅದಕ್ಕೆ ಶಾಲೆಯ ಆಡಳಿತ ಮಂಡಳಿಯು ಸಮ್ಮತಿಸಿ ನಾನು ಓದುವ ಎಲ್ಲಾ ತರಗತಿಗಳನ್ನು ಪ್ರತಿವರ್ಷ ನೆಲಮಹಡಿಯಲ್ಲಿಯೇ ನಡೆಸಿಕೊಟ್ಟರು. ಹೀಗೆ ನಾನು ಆ ಶಾಲೆಯಲ್ಲಿ ಎರಡನೇ ತರಗತಿಯಿಂದ ಹತ್ತನೆ ತರಗತಿಯವರೆಗೆ ವ್ಯಾಸಂಗ ಮಾಡಿದೆನು. ಮೊದಲೆರೆಡು

ವರ್ಷ ನಮ್ಮ ಮನೆಯು ಜಯನಗರದ 4ನೇ ಟಿ ಬ್ಲಾಕ್‌ನಲ್ಲಿ ಇದ್ದಿತು. ಇದು ನನ್ನ ಶಾಲೆಯಿಂದ ಸುಮಾರು ಒಂದೂವರೆ ಕಿ.ಮಿ. ದೂರವಿದ್ದಿತು. ನನ್ನ ತಂದೆಯು ಬೆಳಿಗ್ಗೆ ಗಾಲಿಕರ್ಚಿ ತಳ್ಳಿಕೊಂಡು ಹೋಗಿ ನನ್ನನ್ನು ಶಾಲೆಗೆ ಬಿಡುತ್ತಿದ್ದರು. ಮಧ್ಯಾಹ್ನ ತಾಯಿಯು ಬಂದು ನನಗೆ ಊಟ ಮಾಡಿಸಿ ಹೋಗುತಿದ್ದರು. ನಂತರ ಶಾಲೆ ಮುಗಿದ ಮೇಲೆ ನನ್ನ ತಾಯಿಯು ಗಾಲಿಕುರ್ಚಿ ತಳ್ಳಿಕೊಂಡು ಮನೆಗೆ ಕರೆದುಕೊಂಡು ಹೋಗುತಿದ್ದರು. ಈ ರೀತಿಯಾಗಿ ನಾನು ಎರಡರಿಂದ ಏಳನೆ ತರಗತಿಯವರೆಗೆ ವ್ಯಾಸಂಗ ಮಾಡಿದೆನು.

**ಸ್ನೇಹಪರತೆ**

ಜಯನಗರದ 4ನೇ ಟಿ ಬ್ಲಾಕ್ ಮನೆಯಿಂದ ಶಾಲೆಗೆ ಪ್ರತಿದಿನ ಮೂರು ಬಾರಿ ಓಡಾಡುವುದು ಕಷ್ಟಕರವಾಗಿದ್ದರಿಂದ ನನ್ನ ತಂದೆಯು ನಮ್ಮ ಶಾಲೆಗೆ ಹತ್ತಿರವೇ ಇರುವ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಂಡರು. ಇದರಿಂದ ನಾನು ಶಾಲೆ ಹೋಗಿ ಬರಲು ಹಾಗೂ ನನ್ನ ಗೆಳೆಯರು ಶಾಲೆ ಮುಗಿದ ಮೇಲೆ ನನ್ನೊಂದಿಗೆ ನಮ್ಮ ಮನೆಗೆ ಬಂದು ಹೋಗಲು ಅನುಕೂಲ ವಾಯಿತು. ಅನೇಕ ವೇಳೆ ಶಾಲೆ ಮುಗಿದ ಮೇಲೆ ನನ್ನ ಗೆಳೆಯರೇ ಗಾಲಿಕುರ್ಚಿ ತಳ್ಳಿಕೊಂಡು ಮನೆಗೆ ಬಂದು ಬಿಟ್ಟು ಹೋಗುತ್ತಿದ್ದರು.

ಶಾಲೆಯಲ್ಲಿ ಗುರುಗಳು ಹಾಗೂ ಗೆಳೆಯರು ನನ್ನನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಂಡರು. ಹೀಗಾಗಿ ನಾನು ಆ ಶಾಲೆಯಿಂದ 2003ನೇ ಇಸವಿಯಲ್ಲಿ ಹತ್ತನೇ ತರಗತಿಯನ್ನು 64.48% ಅಂಕಗಳೊಂದಿಗೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದೆನು.

ಎಸ್‌ಎಸ್‌ಎಲ್‌ಸಿ ಆದ ನಂತರ ನಮ್ಮ ಮನೆಯ ಹತ್ತಿರದಲ್ಲಿದ್ದ ನೆಲ ಮಹಡಿ ಕಟ್ಟಡ ಮಾತ್ರ ಹೊಂದಿದ್ದ MEWA ಪದವಿ ಪೂರ್ವ ಕಾಲೇಜಿಗೆ ವಾಣಿಜ್ಯ ಪದವಿ ಪೂರ್ವ ಶಿಕ್ಷಣಕ್ಕೆ ಸೇರಿಕೊಂಡೆನು. ಅಲ್ಲಿಯೂ ಸಹ ನನ್ನ ಗುರುಗಳು ಹಾಗೂ ಮಿತ್ರರು ನನ್ನನ್ನು ಪ್ರೀತಿ ವಾತ್ಸಲ್ಯದಿಂದ ನೋಡಿಕೊಂಡರು. 2005ನೇ ಇಸ್ವಿಯಲ್ಲಿ ಪದವಿಪೂರ್ವ ಶಿಕ್ಷಣವನ್ನು 77.16% ಅಂಕಗಳೊಂದಿಗೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದೆನು. ಪದವಿ ಪೂರ್ವ ಶಿಕ್ಷಣ ಮುಗಿದ ನಂತರ ಅದೇ ಆವರಣದಲ್ಲಿದ್ದ ಎಂಇಡಬ್ಲ್ಯುಎ ಪದವಿ ಕಾಲೇಜಿಗೆ ಪದವಿ ಶಿಕ್ಷಣ ವ್ಯಾಸಂಗಕ್ಕೆ ಸೇರಿದೆನು.

2008ನೇ ಇಸವಿಯಲ್ಲಿ ನಾನು ವಾಣಿಜ್ಯ ಪದವಿಯನ್ನು 61.24% ಅಂಕಗಳೊಂದಿಗೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದೆನು. ಈ ನನ್ನ ಶಾಲಾ ಕಾಲೇಜು ದಿನಗಳಲ್ಲಿ ನಾನು ಎಲ್ಲಾ ತರಗತಿಗಳನ್ನು ಪ್ರತಿ ದಿನವೂ ಗಾಲಿಕುರ್ಚಿಯ ಮೇಲೆ ಕುಳಿತು ಪಾಠವನ್ನು ಕೇಳಬೇಕಾಗಿದ್ದಿತು. ನನ್ನ ಗುರುಗಳೂ ಹಾಗೂ ಆತ್ಮೀಯ ಗೆಳೆಯರು ನನಗೆ ನೀಡಿದ ಸಹಕಾರ ಮತ್ತು ಮಾಡಿದ ಉಪಕಾರವನ್ನು ನಾನು ನನ್ನ ಜೀವನದಲ್ಲಿ ಎಂದೂ ಮರೆಯಲಾರೆ.

**ಆತ್ಮ ವಿಶ್ವಾಸ**

ನಾನು ಪದವಿ ಶಿಕ್ಷಣವನ್ನು ಪಡೆದ ನಂತರ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಲು ಬಯಸಿದ್ದೆನು. ಆದರೆ ನಮ್ಮ ಮನೆಯ ಹತ್ತಿರ ಸ್ನಾತಕೋತ್ತರ ಪದವಿ ಕಾಲೇಜುಗಳಿರಲಿಲ್ಲ. ಆದ್ದರಿಂದ ಸ್ನಾತಕೋತ್ತರ ಪದವಿಗಾಗಿ ದೂರದ ಕಾಲೇಜಿಗೆ ಹೋಗಬೇಕಾಗಿದ್ದಿತು. ಆಗ ಗಾಲಿ ಕುರ್ಚಿಯ ಮೇಲಿಂದ ದೂರದ ಸ್ನಾತಕೋತ್ತರ ಪದವಿ ಕಾಲೇಜಿಗೆ ಹೋಗಿ ಬರುವುದು ಅಸಾಧ್ಯವಾಗಿತ್ತು. ಇದರಿಂದ ನಾನು ಸುಮಾರು ಒಂದು ವರ್ಷದವರೆಗೆ ಮನೆಯಲ್ಲಿಯೇ ಕುಳಿತುಕೊಳ್ಳಬೇಕಾಯಿತು.

ಈ ಸಮಯದಲ್ಲಿ ನನ್ನ ತಂದೆಯವರು ನನಗಾಗಿ ಬ್ಯಾಟರಿ ಮೂಲಕ ಚಲಿಸುವ ಒಂದು ಸ್ವಯಂ ಚಾಲಿತ ಗಾಲಿಕುರ್ಚಿಯೊಂದನ್ನು ಕೊಡಿಸಿದರು. ಇದರ ಸಹಾಯದಿಂದ ನಾನು ಗಾಲಿಕುರ್ಚಿಯ ಮೇಲೆ ಕುಳಿತುಕೊಂಡು ಪ್ರಪ್ರಥಮ ಬಾರಿಗೆ ಯಾರ ಸಹಾಯವಿಲ್ಲದೆ ಸ್ವತಂತ್ರವಾಗಿ ತಿರುಗಾಡಲು ಸಾಧ್ಯವಾಯಿತು. ಇದರಿಂದ ನನ್ನ ಆತ್ಮವಿಶ್ವಾಸ ಹೆಚ್ಚಾಯಿತು.

2009ನೇ ಇಸವಿಯಲ್ಲಿ ನನ್ನ ತಂದೆಯು ನನಗಾಗಿ ಶೆವರ್ಲೆಟ್ ಕಂಪನಿಯ ಟವೇರಾ ಕಾರನ್ನು ಕೊಡಿಸಿ ನನ್ನ ಅವಶ್ಯಕತೆಗಳಿಗೆ ತಕ್ಕಂತೆ ಕಾರಿನ ಹಿಂಬದಿಯ ಮೇಲ್ಛಾವಣಿಯನ್ನು ಎತ್ತರಿಸಿ, ಕಾರಿನ ಹಿಂಬದಿಗೆ ಮಡಿಚಲ್ಪಡುವ ರ್‍ಯಾಂಪನ್ನು ಅಳವಡಿಸಲಾಯಿತು (ಸಾರಿಗೆ ಇಲಾಖೆಯ ಲಿಖಿತ ಅನುಮತಿ ಮೇರೆಗೆ). ಕಾರಿನ ಚಾಲಕನ ಸಹಾಯದಿಂದ ರ್‍ಯಾಂಪಿನ



ಮೂಲಕ ಗಾಲಿಕುರ್ಚಿಯ ಸಮೇತ ಕಾರಿನಲ್ಲಿ ಕುಳಿತುಕೊಂಡು ಕಾಲೇಜಿಗೆ ಹಾಗೂ ದೂರ ದೂರದ ಸ್ಥಳಗಳಿಗೆ ಹೋಗಿ ಬರಲು ಸಾಧ್ಯವಾಯಿತು. ಹೀಗೆ 2010ನೇ ಇಸವಿಯಲ್ಲಿ ನಾನು ಸ್ನಾತಕೋತ್ತರ ಎಂ.ಕಾಂ. ಪದವಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ಸೆಂಟ್ರಲ್ ಕಾಲೇಜಿಗೆ ಪ್ರವೇಶ ಪಡೆದೆನು. ಆ ಕಾಲೇಜಿನಲ್ಲಿ ತರಗತಿಗಳು ನೆಲ ಮಹಡಿಯಲ್ಲಿ ನಡೆಸಲ್ಪಡುತ್ತಿದ್ದರೂ ತರಗತಿಗೆ ಹೋಗಲು ಮೆಟ್ಟಿಲುಗಳು ಇದ್ದುದರಿಂದ ಗಾಲಿಕುರ್ಚಿಯನ್ನು ಎತ್ತಿಕೊಂಡು ಹೋಗಬೇಕಾಗುತಿತ್ತು.

ನನ್ನ ತಂದೆಯವರು ಸೆಂಟ್ರಲ್ ಕಾಲೇಜಿನ ಕುಲ ಸಚಿವರು ಹಾಗೂ ಉಪಕುಲಪತಿಯವರನ್ನು ಭೆಟ್ಟಿಯಾಗಿ ನನ್ನ ತರಗತಿಯ ಕೊಠಡಿಗೆ ಒಂದು ರ್‍ಯಾಂಪ್ ನಿರ್ಮಿಸಿಕೊಡಲು ಲಿಖಿತ ಮನವಿ ಸಲ್ಲಿಸಿದರು.

ನನ್ನ ತಂದೆಯವರ ಮನವಿ ಹಾಗೂ ಹಲವಾರು ಬಾರಿ ಅಲೆದಾಡಿದ ಮೇಲೆ ರ್‍ಯಾಂಪ್ (ಸಮರ್ಪಕ ಇಳಿಜಾರು) ನಿರ್ಮಿಸಲು ಬೆಂಗಳೂರು ವಿಶ್ವವಿದ್ಯಾಲಯದ ಆಡಳಿತ ಮಂಡಳಿಯು ಒಪ್ಪಿಗೆ ನೀಡಿತು. ರ್‍ಯಾಂಪ್ ನಿರ್ಮಿಸಲು ಸುಮಾರು ಆರು ತಿಂಗಳು ಸಮಯ ಬೇಕಾಯಿತು. ಅಲ್ಲಿಯವರೆಗೆ ನನ್ನ ಗೆಳೆಯರು ಗಾಲಿಕುರ್ಚಿ ಸಮೇತ ನನ್ನನ್ನು ಮೆಟ್ಟಿಲುಗಳ ಮೇಲಿಂದ ಎತ್ತಿಕೊಂಡು ತರಗತಿಯಲ್ಲಿ ಕೂಡಿಸುತ್ತಿದ್ದರು. ಹೀಗೆ ಎಂ. ಕಾಂ. ಪದವಿಯನ್ನು 2012ರಲ್ಲಿ 65.15% ಅಂಕಗಳೊಂದಿಗೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದೆನು. ನಾನು ಎಸ್‌ಎಸ್‌ಎಲ್‌ಸಿವರೆಗಿನ ವ್ಯಾಸಂಗವನ್ನು ಕನ್ನಡ ಮಾಧ್ಯಮದಲ್ಲಿ ಹಾಗೂ ಪದವಿ ಪೂರ್ವ ತರಗತಿಯಿಂದ ಸ್ನಾತಕೋತ್ತರ ಪದವಿವರೆಗಿನ ವ್ಯಾಸಂಗವನ್ನು ಆಂಗ್ಲ ಮಾಧ್ಯಮದಲ್ಲಿ ಪೂರೈಸಿರುತ್ತೇನೆ. ಹೀಗೆ ನಾನು ನನ್ನ ಶಾಲಾ ಕಾಲೇಜು ಜೀವನವನ್ನು

ಅತ್ಮವಿಶ್ವಾಸದಿಂದ ಯಶಸ್ವಿಯಾಗಿ ಪೂರ್ಣಗೊಳಿಸಿದೆನು.

**ಛಲವೇ ಬಲ**

ಅಂಗವಿಕಲತೆಯನ್ನು ಸವಾಲಾಗಿ ತೆಗೆದುಕೊಂಡು ನಾವು ನಮ್ಮ ಜೀವನದ ಗುರಿಯನ್ನು ತಲುಪಬೇಕು. ಇದಕ್ಕೆ ನಮ್ಮ ಸುತ್ತಮುತ್ತಲಿನ ಸಮಾಜದ ಸಹಕಾರ ಅಗತ್ಯವಿದೆ. ಮುಂದುವರಿದ ದೇಶಗಳಿಗೆ ಹೋಲಿಸಿದರೆ, ಭಾರತದಲ್ಲಿ ಅಂಗವಿಕಲರಿಗೆ ಇರುವ ಸೌಲಭ್ಯಗಳು ಅತ್ಯಂತ ಕಡಿಮೆ ಎಂದೇ ಹೇಳಬೇಕು.

ವಿಶೇಷ ಚೇತನರಿಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಈ ಮುಂದಿನ ಸೌಲಭ್ಯಗಳು ಲಭ್ಯವಿರುತ್ತವೆ.

1. ಆದಾಯ ತೆರಿಗೆ ಕಾಯ್ದೆ ಕಲಂ 80ಗ ಅನ್ವಯ ಪ್ರತಿಶತ 40 ರಿಂದ 80 ರವರೆಗೆ ಅಂಗವೈಕಲ್ಯವುಳ್ಳವರಿಗೆ ಆದಾಯ ತೆರಿಗೆಯಲ್ಲಿ ರೂ 50,000/– ಹಾಗೂ ಪ್ರತಿಶತ 80ಕ್ಕಿಂತ ಹೆಚ್ಚು ಅಂಗವೈಕಲ್ಯವುಳ್ಳವರಿಗೆ ಆದಾಯ ತೆರಿಗೆಯಲ್ಲಿ ರೂ 1, 00,000/– ವಿನಾಯಿತಿ ದೊರೆಯುತ್ತದೆ.

2. ಆದಾಯ ತೆರಿಗೆ ಕಾಯ್ದೆ ಕಲಂ 80ಆಆ ರನ್ವಯ ಪ್ರತಿಶತ 40 ರಿಂದ 80 ರವರೆಗೆ ಅಂಗವೈಕಲ್ಯವುಳ್ಳ ವಿಶೇಷ ಚೇತನರ ಕಾನೂನು ಪೋಷಕರಿಗೆ ಆದಾಯ ತೆರಿಗೆಯಲ್ಲಿ ರೂ 50,000/– ವರೆಗೆ ಹಾಗೂ ಪ್ರತಿಶತ 80ಕ್ಕಿಂತ ಹೆಚ್ಚು ಅಂಗವೈಕಲ್ಯವುಳ್ಳ ವಿಶೇಷ ಚೇತನರ ಕಾನೂನು ಪೋಷಕರಿಗೆ ಆದಾಯ ತೆರಿಗೆಯಲ್ಲಿ ರೂ. 1, 00,000/– ವಿನಾಯಿತಿ ದೊರೆಯುತ್ತದೆ.

3. ವಿಶೇಷ ಚೇತನರಿಗೆ ವೃತ್ತಿ ತೆರಿಗೆಯಿಂದ ಸಂಪೂರ್ಣ ವಿನಾಯತಿ ಇರುತ್ತದೆ.

4. ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರಕಾರಿ ಹಾಗೂ ಸರ್ಕಾರದ ಅನುದಾನಿತ ಶಾಲಾ ಕಾಲೇಜುಗಳಲ್ಲಿ ಶೇಕಡಾ 3ರಷ್ಟು ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ ಶೇಕಡಾ 5ರಷ್ಟು ಮೀಸಲು ಇರುತ್ತದೆ.

5. ವಿಶೇಷ ಚೇತನರ ಕಾಯ್ದೆ, 1995ರನ್ವಯ ಶೇಕಡಾ 3ರಷ್ಟು ನೌಕರಿಗಳನ್ನು ವಿಶೇಷ ಚೇತನರಿಗೆ ಮೀಸಲಿರಿಸುವುದು ಕಡ್ಡಾಯವಿರುತ್ತದೆ. ವಿಶೇಷ ಚೇತನರ (ಸಮಾನ ಅವಕಾಶ, ಹಕ್ಕು ರಕ್ಷಣೆ ಮತ್ತು ಸಂಪೂರ್ಣ ಪಾಲ್ಗೊಳ್ಳುವಿಕೆ) (ಕರ್ನಾಟಕ ತಿದ್ದುಪಡಿ) ನಿಯಮಗಳು 2006 ರನ್ವಯ ರಾಜ್ಯ ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ, ನಗರ ಸಭೆ, ಸ್ಥಳಿಯ ಸಂಸ್ಥೆಗಳು, ನಗರಾಭಿವೃದ್ಧಿ ಸಂಸ್ಥೆಗಳು, ಸರ್ಕಾರದ ಅನುದಾನಿತ ಸಂಸ್ಥೆಗಳಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿ ಉದ್ಯೋಗ ಮೀಸಲಾತಿಗಳನ್ನು ಕಾಯ್ದಿರಿಸಬೇಕಾಗಿರುತ್ತದೆ.

6. ರಾಜ್ಯ ಸರ್ಕಾರವು ವಿಶೇಷ ಚೇತನರಿಗಾಗಿ ಗುರುತಿನ ಚೀಟಿಯನ್ನು ನೀಡುತ್ತದೆ. ಇದಕ್ಕಾಗಿ ವೈದ್ಯಕೀಯ ಮಂಡಳಿ ಒಂದನ್ನು ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸ್ಥಾಪಿಸಿದ್ದು, ಇದರ ಸಹಾಯದಿಂದ ಉಚಿತ ಬಸ್ ಪಾಸ್, ರಿಯಾಯಿತಿದರದಲ್ಲಿ ರೈಲ್ವೆ ಪ್ರಯಾಣ ಹಾಗೂ ವಿಮಾನ ಪ್ರಯಾಣ ಚೀಟಿಗಳನ್ನು ಪಡೆಯಬಹುದಾಗಿರುತ್ತದೆ.

7. ವಿಶೇಷ ಚೇತನರ ಕಾಯ್ದೆ, 1995ರನ್ವಯ ವಿಶೇಷ ಚೇತನ ಅಭ್ಯರ್ಥಿಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ನೌಕರಿಗಳಲ್ಲಿ ಪ್ರತಿಶತ 3ರಷ್ಟು ಮೀಸಲು ಇರುತ್ತದೆ.

8. ಕೇಂದ್ರ ಸರ್ಕಾರವು ಎಲ್ಲಾ ರಾಜ್ಯಗಳ ರಾಜಧಾನಿಗಳಲ್ಲಿ ವಿಶೇಷ ಉದ್ಯೋಗ ವಿನಿಮಯ ಕೇಂದ್ರಗಳನ್ನು ಹಾಗೂ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ವಿಶೇಷ ಉದ್ಯೋಗ ವಿನಿಮಯ ಕೋಶಗಳನ್ನು ತೆರೆದಿದ್ದು ಇವುಗಳ ಮುಖಾಂತರ ವಿಶೇಷ ಚೇತನ ಅಭ್ಯರ್ಥಿಗಳಿಗಾಗಿ ಮೀಸಲಿರಿಸಿದ ಸರ್ಕಾರಿ ಉದ್ಯೋಗಳನ್ನು ಭರ್ತಿಮಾಡಲಾಗುತ್ತದೆ.

9. ಕೇಂದ್ರ ಸರ್ಕಾರದ ದೀನ್‌ದಯಾಳ್ ವಿಶೇಷ ಚೇತನರ ಪುನರ್ವಸತಿ ಯೋಜನೆ ಅಡಿಯಲ್ಲಿ ವಿಶೇಷ ಚೇತನರಿಗಾಗಿ ಶಿಕ್ಷಣ, ಉದ್ಯೋಗ ತರಬೇತಿ ಮತ್ತು ವಿಕಲ ಚೇತನರ ಪುನಶ್ಚೇತನ ಉದ್ದೇಶಗಳಿಗಾಗಿ ಆರ್ಥಿಕ ಧನಸಹಾಯವನ್ನು ಸರ್ಕಾರೇತರ ಸಂಸ್ಥೆಗಳ ಮುಖಾಂತರ ಅರ್ಹ ವಿಶೇಷ ಚೇತನರಿಗೆ ನೀಡಲಾಗುತ್ತದೆ.

10. ಬಡತನ ರೇಖೆಗಿಂತ ಕೆಳಗಿರುವ ಬಡ ವ್ಯಕ್ತಿಗಳಿಗೆ ರೂ. 20,000/– ಮೊತ್ತದಲ್ಲಿ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ರೂ. 22,000/– ಮೊತ್ತದಲ್ಲಿ ಮನೆಗಳನ್ನು ನಿರ್ಮಿಸಿ ಉಚಿತವಾಗಿ ವಿತರಿಸಲಾಗುತ್ತದೆ. ಈ ಯೋಜನೆ ಅಡಿಯಲ್ಲಿ ಬಡತನ ರೇಖೆಗಿಂತ ಕೆಳಗಿರುವ ವಿಶೇಷ ಚೇತನರಿಗೆ ಶೇಕಡಾ 3ರಷ್ಟು ಅನುದಾನವನ್ನು ಕಾಯ್ದಿರಿಸಲಾಗುತ್ತದೆ.

11.ಕರ್ನಾಟಕ ರಾಜ್ಯ ಸರ್ಕಾರೇತರ ಪುನಶ್ಚೇತನ ಯೋಜನೆಗಳ ಮುಖಾಂತರ ವಾರ್ಷಿಕ ರೂ. 12,000/– ಆದಾಯಕ್ಕಿಂತ ಕಡಿಮೆ ಆದಾಯ ಹೊಂದಿದ ವಿಶೇಷ ಚೇತನರಿಗೆ ಮೂರು ಗಾಲಿಯ ಕುರ್ಚಿ,





ಗಾಲಿಕುರ್ಚಿ, ಕೃತಕ ಕಾಲು, ಶ್ರವಣ ಸಾಧನ ಇತ್ಯಾದಿ ಉಪಕರಣಗಳನ್ನು ಉಚಿತವಾಗಿ ವಿತರಿಸಲಾಗುತ್ತದೆ.

**ಮನವಿ**

ಸರ್ಕಾರವು ವಿಶೇಷ ಚೇತನ ವಿದ್ಯಾರ್ಥಿಗಳಿಗಾಗಿ ಪ್ರಾಥಮಿಕ ಹಂತದಿಂದ ಕಾಲೇಜು ಹಂತದವರೆಗೆ ಉಚಿತ ಶಿಕ್ಷಣ ಒದಗಿಸಲು ಮುಂದಾಗಬೇಕು ಹಾಗೆಯೇ ಸಕಲ ಸೌಲಭ್ಯ ಹೊಂದಿದ ಆಸ್ಪತ್ರೆಗಳಲ್ಲಿ ಅಂಗವಿಕಲತೆಗಳನ್ನು ಶಸ್ತ್ರಚಿಕಿತ್ಸೆ ಮೂಲಕ ಸರಿಪಡಿಸಿಕೊಳ್ಳಲು ವಿಶೇಷ ಚೇತನರಿಗೆ ಧನ ಸಹಾಯವನ್ನು ನೀಡಬೇಕು. ಇದರಿಂದಾಗಿ ವಿಶೇಷ ಚೇತನರೂ ಸಹ ದೇಶದ ಶಕ್ತಿಯಾಗಿ ಹೊರಹೊಮ್ಮಲು ಸಾಧ್ಯವಾಗುವುದು.

ಎಲ್ಲಾ ಸಾರ್ವಜನಿಕ ಕಟ್ಟಡಗಳಿಗೆ (ಸರ್ಕಾರಿ ಕಚೇರಿ, ಬ್ಯಾಂಕು, ಶಾಲಾ ಕಾಲೇಜು, ಗ್ರಂಥಾಲಯ, ಹೋಟೆಲು, ಚಲನಚಿತ್ರ ಮಂದಿರ ಇತ್ಯಾದಿ) ರ್‍ಯಾಂಪ್ ನಿರ್ಮಿಸುವುದು ಕಡ್ಡಾಯವಿದ್ದರೂ ಸಹ ಅದನ್ನು ಯಾರೂ ಪಾಲಿಸುತ್ತಿಲ್ಲ. ಅಂತಹ ಕಟ್ಟಡಗಳಿಗೆ ರ್‍ಯಾಂಪ್ ನಿರ್ಮಿಸುವುದನ್ನು ಖಾತರಿ ಪಡಿಸಬೇಕು. ಇದರಿಂದ ವಿಶೇಷ ಚೇತನರು ಆತ್ಮ ವಿಶ್ವಾಸದಿಂದ ಎಲ್ಲರಂತೆ ಓಡಾಡಲು ಸಾಧ್ಯವಾಗುವುದು. ಇಲ್ಲದಿದ್ದಲ್ಲಿ ಅವಕಾಶವಂಚಿತರಾಗಿ ಅಸ್ಪೃಶ್ಯರಂತೆ ಇತರರ ಸಹಾಯ ಬೇಡಿ ಹೊರಗಡೆಯೇ ಕಾಯ್ದುಕೊಂಡು ನಿಲ್ಲಬೇಕಾಗುತ್ತದೆ.

ಅಂಗವೈಕಲ್ಯತೆಯೇ ಮೈವೆತ್ತಂತಿರುವ ನಾನು ಅನೇಕ ದೈಹಿಕ ನ್ಯೂನ್ಯತೆ, ಬಲಹೀನತೆ, ಆಗಾಗಿನ ಅನಾರೋಗ್ಯದಿಂದ ಬಳಲುತ್ತಿದ್ದರೂ ಸಹ ಓದಬೇಕೆಂಬ ಹಾಗೂ ಎಲ್ಲರಂತೆ ಜೀವನದಲ್ಲಿ ಏನಾದರೂ ಸಾಧಿಸಬೇಕೆಂಬ ಮಹದಾಸೆ ಹೊಂದಿದ್ದೆನು.

ಛಲದಿಂದ ಓದಿ ಎಲ್ಲಾ ಸಾಮಾನ್ಯ ವಿದ್ಯಾರ್ಥಿಗಳು ಓದುವ ಶಾಲಾ ಕಾಲೇಜುಗಳಿಗೆ ಪ್ರವೇಶ ಪಡೆದು ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ ಮತ್ತು ಸ್ನಾತಕೋತ್ತರ ಪದವಿಗಳನ್ನು ಪ್ರಥಮ ಶ್ರೇಣಿಯಲ್ಲಿ ಪಾಸಾಗಿರುತ್ತೇನೆ.

ನನ್ನ ಜೀವನದಲ್ಲಿ ನಾನು ಅನುಭವಿಸಿದ ಕಷ್ಟ, ನಷ್ಟ, ನೋವು, ಅವಮಾನಗಳೇ ನಾನು ಛಲದಿಂದ ಓದಲು ಪ್ರೇರಣೆ ಹಾಗೂ ಈ ಲೇಖನ ಬರೆಯಲು ಸ್ಫೂರ್ತಿಯಾಗಿರುತ್ತವೆ. ನನ್ನಂತಿರುವ ವಿಶೇಷ ಚೇತನರು ಈ ಲೇಖನ ಓದಿ ಸ್ಫೂರ್ತಿಗೊಂಡು ತಮ್ಮ ಜೀವನದಲ್ಲಿ ಮುಂದೆ ಬರುವಂತಾದರೆ ಅದೇ ನನಗೆ ಸಮಾಧಾನ. ❑

## ಅಭಿವೃದ್ಧಿ ಪಥ

**ಸ್ಟ್ಯಾಂಡ್ ಅಪ್ ಇಂಡಿಯಾ**

ಪರಿಶಿಷ್ಟರು, ಮೂಲವಾಸಿಗಳು ಮತ್ತು ಮಹಿಳೆಯರಲ್ಲಿ ಉದ್ಯಮಶೀಲತೆಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಸ್ಟ್ಯಾಂಡ್ ಅಪ್ ಇಂಡಿಯಾ ಉಪಕ್ರಮವನ್ನು ಪ್ರಾರಂಭಿಸಲಾಗಿದೆ. ಪ್ರಧಾನ ಮಂತ್ರಿಯವರು ನೋಯಿಡಾದಲ್ಲಿ ಏಪ್ರಿಲ್ 5 ರಂದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಪರಿಶಿಷ್ಟ ಜಾತಿ, ಬುಡಕಟ್ಟು ಜನಾಂಗ ಹಾಗೂ ಮಹಿಳೆಯರಿಗೆ ಉದ್ಯಮಶೀಲತೆಯಲ್ಲಿ ಹೆಚ್ಚಿನ ಅವಕಾಶ ನೀಡುವುದು ಕಾರ್ಯಕ್ರಮದ ಗುರಿಯಾಗಿದೆ. ಈ ವರ್ಗಗಳಲ್ಲಿನ ಉತ್ಸಾಹಿ ಉದ್ಯಮ ಶೀಲರಿಗೆ ಸಾಲ ಒದಗಿಸಲಾಗುತ್ತದೆ. ರೂ. ಹತ್ತು ಲಕ್ಷದಿಂದ ರೂ ಒಂದು ಕೋಟಿವರೆಗೆ ಸಾಲಸೌಲಭ್ಯ ಒದಗಿಸಲಾಗುತ್ತದೆ. ಸಮಾರಂಭದಲ್ಲಿ 5100 ಇ–ರಿಕ್ಷಾಗಳನ್ನು ವಿತರಿಸಲಾಯಿತು.

**ಜಾಗತಿಕ ಕೌಶಲ್ಯ ಅಭಿವೃದ್ಧಿ :** ಭಾರತದ ಕೌಶಲ್ಯ ಗುಣಮಟ್ಟವನ್ನು ಜಾಗತಿಕ ಗುಣಮಟ್ಟಕ್ಕೇರಿಸುವ ಉದ್ದೇಶದಿಂದ ಪರಿವರ್ತನಾ ಕೌಶಲ್ಯ ಗುಣಮಟ್ಟ ಕಾರ್ಯಕ್ರಮವನ್ನು ಆರಂಭಿಸಲಾಗಿದೆ. ಈ ಕಾರ್ಯಕ್ರಮ ದೇಶದ ಮೇಕ್ ಇನ್ ಇಂಡಿಯಾ ಹಾಗೂ ಸ್ಕಿಲ್ ಇಂಡಿಯಾ ಕಾರ್ಯಕ್ರಮಗಳಿಗೆ ಪೂರಕವಾಗಿದೆ. ಭಾರತದ ಹದಿನೈದು ಕೌಶಲ್ಯ ಮಂಡಳಿಗಳಲ್ಲೆಲ್ಲಾ 85 ಕಾರ್ಯಪಾತ್ರವನ್ನು ಬ್ರಿಟನ್‌ನಿನ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಕ್ಕೆ ಸರಿಹೊಂದಿಸುವ ಮಟ್ಟಕ್ಕೆ ಈ ಕಾರ್ಯಕ್ರಮ ನಿರೂಪಣೆಗೊಂಡಿದೆ.

ಗಲ್ಫ್ ಸಹಕಾರ ಮಂಡಳಿ (ಜಿಸಿಸಿ) ಯುಕೆಯ ಕೌಶಲ್ಯ ಪ್ರಮಾಣ ಪತ್ರವನ್ನು ಗುಣಮಟ್ಟದ ಪ್ರಮಾಣ ಪತ್ರ ಎಂದು ಪರಿಗಣಿಸಿದೆ. ಈ ಹಿನ್ನೆಲೆಯಲ್ಲಿ ಭಾರತದ ಕೌಶಲ್ಯ ಗುಣಮಟ್ಟವನ್ನು ಯುಕೆ ಗುಣಮಟ್ಟಕ್ಕೇರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಭಾರತ ಹಾಗೂ ಯುಕೆ ಗುಣಮಟ್ಟಗಳ ನಡುವಿರುವ ವ್ಯತ್ಯಾಸಗಳನ್ನು ನಿವಾರಿಸಲು ಕ್ರಮಕೈಗೊಳ್ಳಲಾಗುತ್ತಿದೆ. ಯುಕೆಯ ಮುಂದುವರೆದ ಶಿಕ್ಷಣ ಕಾಲೇಜು (ಎಫ್‌ಇ) ಸಂಸ್ಥೆಗಳು ಭಾರತದ ತರಬೇತಿ ಸಂಸ್ಥೆಗಳೊಂದಿಗೆ ಸಹಭಾಗಿತ್ವ ರೂಪಿಸಿಕೊಂಡು ಬ್ರಿಡ್ಜ್ ಕೋರ್ಸ್‌ಗಳನ್ನು ನಡೆಸುತ್ತವೆ.

ಕೆಲವು ನಿರ್ದಿಷ್ಟ ರಂಗಗಳಲ್ಲಿ ಈ ಕೋರ್ಸ್‌ಗಳನ್ನು ನಡೆಸಲಾಗುತ್ತದೆ. ಯುಕೆಯ ಸಿಟಿ ಅಂಡ್ ಗಿಲ್ಡ್ಸ್, ಪಿಯರ್‌ಸನ್ಸ್ ನಂತಹ ಸಂಸ್ಥೆಗಳು ಭಾರತದ ಎಸ್‌ಎಸ್‌ಸಿ ಜೊತೆಗೂಡಿ ಅಂತರ ಭರ್ತಿ ತರಬೇತಿದಾರರಿಗೆ ಪ್ರಮಾಣೀಕೃತ ಪ್ರಮಾಣ ಪತ್ರಗಳನ್ನು ನೀಡುತ್ತವೆ.

ಆಟೋಮೋಟಿವ್, ಕೃಷಿ, ಜೀವನ ನಿರ್ವಹಣೆ ವಿಜ್ಞಾನ, ಆರೋಗ್ಯ ಪಾಲನೆ, ಕ್ಯಾಪಿಟಲ್ ಗೂಡ್ಸ್ ಸಿದ್ಧ ಉಡುಪು, ಜವಳಿ, ಸೌಂದರ್ಯ ಮತ್ತು ಆರೋಗ್ಯ ಸುಧಾರಣೆ, ದೂರ ಸಂಪರ್ಕ, ಆತಿಥ್ಯ, ಮಾಹಿತಿ ತಂತ್ರಜ್ಞಾನ ಹಾಗೂ ಸಂಬಂಧಿತ ವಿಷಯಗಳು, ನಿರ್ಮಾಣ, ಚಿಲ್ಲರೆ ಕ್ಷೇತ್ರ ವಿದ್ಯುನ್ಮಾನ ಮತ್ತು ಭದ್ರತೆ ಮೊದಲಾದ ಕ್ಷೇತ್ರಗಳಲ್ಲಿ ಈ ಸೌಲಭ್ಯ ದೊರಕಲಿದೆ. ❑

# ನಿಮಗಿದು ತಿಳಿದಿದೆಯೇ?

**ಇಂಚಿಯಾನ್ ಕ್ರಿಯಾಯೋಜನೆ**

ಇಂಚಿಯಾನ್ ಕ್ರಿಯಾಯೋಜನೆ, ವಿಶೇಷ ಚೇತನರ ಹಕ್ಕುಗಳನ್ನು ಏಶಿಯಾ ಮತ್ತು ಪ್ಯಾಸಿಫಿಕ್ ವಲಯಗಳಿಗಾಗಿ ರೂಪಿಸಲಾಗಿರುವ ಕಾರ್ಯತಂತ್ರವಾಗಿದೆ. 2012ರ ಅಕ್ಟೋಬರ್ 29 ರಿಂದ ನವೆಂಬರ್ 2ರ ವರೆಗೆ ಕೊರಿಯಾ ಗಣರಾಜ್ಯದ ಇಂಚಿಯಾನ್‌ದಲ್ಲಿ ನಡೆದ ವಿಶ್ವಸಂಸ್ಥೆಯ, ಏಶಿಯಾ ಮತ್ತು ಪ್ಯಾಸಿಫಿಕ್ ವಲಯದ ಆರ್ಥಿಕ ಮತ್ತು ಸಾಮಾಜಿಕ ಆಯೋಗದ ಸದಸ್ಯ ರಾಷ್ಟ್ರಗಳ ಸಭೆಯಲ್ಲಿ ಈ ಕಾರ್ಯತಂತ್ರವನ್ನು ಅಂಗೀಕರಿಸಲಾಗಿದೆ. ಏಶಿಯಾ ಮತ್ತು ಪೆಸಿಫಿಕ್ ವಲಯದಲ್ಲಿ ಸುಮಾರು 650 ಮಿಲಿಯನ್ ವಿಶೇಷ ಚೇತನರಿದ್ದು, ಬಹುತೇಕರು ಬಡತನ ರೇಖೆಯ ಕೆಳಗಿದ್ದಾರೆ. ಇವರ, ಹಕ್ಕುಗಳನ್ನು ಖಾತರಿಗೊಳಿಸುವ ಜತೆಗೆ ಜೀವನ ಗುಣಮಟ್ಟ ಸುಧಾರಿಸುವ ಕ್ರಮ ಕೈಗೊಳ್ಳುವಂತೆ ಮಾಡುವುದು ಕಾರ್ಯತಂತ್ರದ ಗುರಿ.

ಹತ್ತು ವರ್ಷಗಳಿಗಾಗಿ (2013 ರಿಂದ 2022) ರೂಪಿಸಲಾಗಿರುವ ಈ ಕಾರ್ಯತಂತ್ರ 10 ಗುರಿಗಳನ್ನು ಹೊಂದಿದೆ. ಪ್ರಗತಿಯನ್ನು ಪರಾಮರ್ಶಿಸಲು 27 ನಿರ್ದಿಷ್ಟ ಉದ್ದೇಶ ಮತ್ತು 62 ಸೂಚ್ಯಾಂಕಗಳನ್ನು ಗುರುತಿಸಿ ಮಾಹಿತಿ ಕಲೆ ಹಾಕಬೇಕು.

ವಿಶೇಷ ಚೇತನರಿಗೆ ಗೌರವ ದೊರಕಬೇಕು; ಅವರಿಗೆ ತಮ್ಮ ಆಯ್ಕೆಗಳನ್ನು ಮಾಡಿಕೊಳ್ಳುವ ಅವಕಾಶ ಇರಬೇಕು; ತಾರತಮ್ಯವಿರಬಾರದು; ಇತರರಂತೆ ಸಮಾಜದಲ್ಲಿ ಪಾಲ್ಗೊಳ್ಳುವ ಅವಕಾಶವಿರಬೇಕು ಎನ್ನುವುದು ಇಂಚಿಯಾನ್ ಕಾರ್ಯತಂತ್ರದ ತಾತ್ಪರ್ಯವಾಗಿದೆ.

**ಕಾರ್ಯತಂತ್ರದ 10 ಗುರಿಗಳೆಂದರೆ :**

ಗುರಿ 1. ಬಡತನ ನಿವಾರಣೆ, ಕೆಲಸ ಉದ್ಯೋಗಾವಕಾಶ ಹೆಚ್ಚಿಸುವುದು.

ಗುರಿ 2. ರಾಜಕೀಯ ನೀತಿ ನಿರ್ಧಾರ ಪ್ರಕ್ರಿಯೆಗಳಲ್ಲಿ ಪಾಲುದಾರಿಕೆ.

ಗುರಿ 3. ಭೌತಿಕ ಪರಿಸರ – ಸಾರ್ವಜನಿಕ ಸಾರಿಗೆ, ಜ್ಞಾನ, ಮಾಹಿತಿ ಮತ್ತು ಸಂವಹನ ಲಭ್ಯತೆ

ಗುರಿ 4. ಸಾಮಾಜಿಕ ರಕ್ಷಣೆ ಬಲಪಡಿಸುವುದು.

ಗುರಿ 5. ವೈಕಲ್ಯವನ್ನು ಬೇಗ ಗುರುತಿಸಿ ಶಿಕ್ಷಣ ಒದಗಿಸುವುದು.

ಗುರಿ 6. ಲಿಂಗ ಸಮಾನತೆ, ಮಹಿಳಾ ಸಶಕ್ತೀಕರಣ

ಗುರಿ 7. ವಿಶೇಷ ಚೇತನರನ್ನು ಒಳಗೊಂಡಂತೆ ಆಪತ್ಕಾಲದ ಸವಾಲು ನಿರ್ವಹಣೆ.

ಗುರಿ 8. ವಿಶೇಷ ಚೇತನರ ಕುರಿತಾದ ಮಾಹಿತಿಗಳ ವಿಶ್ವಾಸಾರ್ಹತೆ.

ಗುರಿ 9. ವಿಶೇಷ ಚೇತನರ ಹಕ್ಕು ಸ್ಥಿರೀಕರಣ ಮತ್ತು ಅನುಷ್ಠಾನ, ರಾಷ್ಟ್ರೀಯ ಕಾನೂನುಗಳ ಅಳವಡಿಕೆ.

ಗುರಿ 10. ಉಪವಲಯ, ವಲಯವಾರು ಅಂತರ ವಲಯವಾರು ಸಹಕಾರ. ❑

# ಈಶಾನ್ಯ ರಾಜ್ಯಗಳಲ್ಲಿ ಅಭಿವೃದ್ಧಿ ಕಾರ್ಯಕ್ರಮ

**ಅಂತಾರಾಷ್ಟ್ರೀಯ ಅಂತರ್ಜಾಲ ದ್ವಾರ**

ದೇಶದ ಅದರಲ್ಲೂ ವಿಶೇಷವಾಗಿ ಈಶಾನ್ಯ ಭಾಗಗಳ ದೂರ ಸಂಪರ್ಕ ಸಾಮರ್ಥ್ಯವನ್ನು ಹೆಚ್ಚಿಸಲು ಸರ್ಕಾರ ಅಂತಾರಾಷ್ಟ್ರೀಯ ಅಂತರ್ಜಾಲ ದ್ವಾರ – ಐಐಜಿಯನ್ನು ಅಗರ್ತಲಾದಲ್ಲಿ ಸ್ಥಾಪಿಸಿದೆ. ಬಾಂಗ್ಲಾದೇಶ್ ಸಬ್ಮರಿನ್ ಕಂಪನಿ ಸೇವೆಯ ನೆರವಿನೊಂದಿಗೆ ಈ ಗೇಟ್ ವೇ ಸ್ಥಾಪಿಸಲಾಗಿದೆ. ಮುಂಬೈ–ಚೆನ್ನೈನಂತರ ಈ ಸೌಲಭ್ಯವನ್ನು ಪಡೆಯುತ್ತಿರುವ ಮೂರನೇ ರಾಜ್ಯ ತ್ರಿಪುರಾ ಆಗಿರುತ್ತದೆ.

ಈಶಾನ್ಯದ ಎಲ್ಲಾ ರಾಜ್ಯಗಳು ಈ ಅಂತರ್ಜಾಲ ದ್ವಾರದಿಂದ ಪ್ರಯೋಜನ ಪಡೆಯಲಿದೆ. ಈಶಾನ್ಯ ರಾಜ್ಯಗಳ ದೂರ ಸಂಪರ್ಕ ಅಭಿವೃದ್ಧಿ ಪಡಿಸಲು 5336.18 ಕೋಟಿ ರೂಪಾಯಿ ವೆಚ್ಚದಲ್ಲಿ ಯೋಜನೆಯೊಂದನ್ನು ಜಾರಿಗೊಳಿಸಲಾಗುತ್ತಿದೆ. ಇದರನ್ವಯ ಅರುಣಾಚಲ ಪ್ರದೇಶ ಮತ್ತು ಅಸ್ಸಾಂ ಹಾಗೂ ಇತರ ರಾಜ್ಯಗಳ ಎರಡು ಜಿಲ್ಲೆಗಳು ಅಡೆತಡೆ ಇಲ್ಲದ ಮೊಬೈಲ್ ಸಂಪರ್ಕವನ್ನು ಪಡೆಯಲಿವೆ. ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳ ಸಂಪರ್ಕದಿಂದ ಜಿಲ್ಲಾ ಆಪ್ಟಿಕಲ್ ಫೈಬರ್ ಸಂಪರ್ಕವನ್ನು 2018ರ ಮಾರ್ಚ್ ವೇಳೆಗೆ ಪೂರ್ತಿಗೊಳಿಸುವ ಗುರಿ ಹೊಂದಲಾಗಿದೆ.

* * *

**ಸಿದ್ಧ ಉಡುಪು ಕೇಂದ್ರ**

ನಾಗಾಲ್ಯಾಂಡ್‌ನ ಧೀಮಾಪುರದಲ್ಲಿ ಸಿದ್ಧ ಉಡುಪು ಬಟ್ಟೆ ತಯಾರಿಕೆ ಕೇಂದ್ರವನ್ನು ತೆರೆಯಲಾಗಿದೆ. ಸ್ಥಳೀಯ ಯುವ ಜನತೆಗೆ ಈ ಕೇಂದ್ರಗಳಲ್ಲಿ ತರಬೇತಿ ನೀಡಿ ಅವರನ್ನು ಉದ್ಯಮ ಶೀಲರನ್ನಾಗಿ ಮಾಡುವುದು ಈ ಯೋಜನೆಯ ಗುರಿಯಾಗಿದೆ. ಧೀಮಾಪುರದಲ್ಲಿ ಅಸ್ತಿತ್ವಕ್ಕೆ ಬಂದಿರುವ ಈ ಕೇಂದ್ರ, ಇಡೀ ಈಶಾನ್ಯ ಪ್ರದೇಶದ ಮೊಟ್ಟ ಮೊದಲ ಸಿದ್ಧ ಉಡುಪು ಕೇಂದ್ರವೆನಿಸಿದೆ. ಕೇವಲ ಒಂದು ವರ್ಷದ ಅವಧಿಯಲ್ಲಿ ಈ ಕೇಂದ್ರವನ್ನು ರೂಪಿಸಿರುವುದು ಒಂದು ಹೆಮ್ಮೆಯ ಸಾಧನೆಯಾಗಿದೆ. ನಾಗಾಲ್ಯಾಂಡ್ ರಾಜ್ಯ ಸರ್ಕಾರ ಹಾಗೂ ಇತರ ವ್ಯಾಪಾರೋದ್ಯಮಿಗಳ ನೆರವಿನಿಂದ ಈ ಕೇಂದ್ರವನ್ನು ತೆರೆಯಲಾಗಿದೆ. ಈಶಾನ್ಯದ ರಾಜ್ಯಗಳಲ್ಲಿ ಜವಳಿ ಉದ್ಯಮಕ್ಕೆ ವಿಪುಲ ಅವಕಾಶವಿದ್ದು ಇಲ್ಲಿ ಜನತೆಗೆ ಉದ್ಯಮಶೀಲತೆಯಲ್ಲಿ ಪ್ರೋತ್ಸಾಹ ನೀಡಲು ಕೇಂದ್ರ ಜವಳಿ ಖಾತೆ ವ್ಯಾಪಕ ಕಾರ್ಯಕ್ರಮ ಹಮ್ಮಿಕೊಂಡಿದೆ. ಮೊಕೋಕ್‌ಚುಂಗ್‌ನಲ್ಲಿ ಮುಗಾ ಮೂಲ ಬೀಜಕೇಂದ್ರ ಸ್ಥಾಪನೆಗೆ ಕ್ರಮ ಕೈಗೊಳ್ಳಲಾಗಿದ್ದು. ಸಮಗ್ರ ಎರಿ ರೇಷ್ಮೆ ಅಭಿವೃದ್ಧಿ ಕಾರ್ಯಕ್ರಮಕ್ಕೂ ಚಾಲನೆ ನೀಡಲಾಗಿದೆ.

ನಾಗಾಲ್ಯಾಂಡ್ ಗುಣಮಟ್ಟದ ರೇಷ್ಮೆ ತಯಾರಿಕೆಯಲ್ಲಿ ಅಧಿಕ ಸಾಮರ್ಥ್ಯ ಹೊಂದಿದ್ದು ಈ ಪ್ರದೇಶಗಳಲ್ಲಿ ಎರ್ರಿ, ಮುಗಾ ಮತ್ತು ಹಿಪ್ಪುನೇರಳೆಯ ರೇಷ್ಮೆ ಉತ್ಪಾದಿಸಲು 101.25 ಕೋಟಿ ರೂ. ಬೆಂಬಲದ ಮೂರು ಯೋಜನೆಗಳನ್ನು ಜಾರಿಗೊಳಿಸಲಾಗುತ್ತಿದೆ. ಸುಮಾರು 5000 ರೈತರು ಹೊಸ ಆವಿಷ್ಕಾರಗಳ ಮೂಲಕ ಗುಣಮಟ್ಟದ ಹಾಗೂ ಹೆಚ್ಚಿನ ಇಳುವರಿಯ ರೇಷ್ಮೆ ಉತ್ಪಾದಿಸುತ್ತಿದ್ದಾರೆ. ❑

# ವಾರ್ತಾ ವಿಶೇಷ

ರಿಯಲ್ ಎಸ್ಟೇಟ್ ನಿಯಂತ್ರಣ ಮತ್ತು ಅಭಿವೃದ್ಧಿ ಕಾಯ್ದೆ ದೇಶಾದ್ಯಂತ ಜಾರಿಗೆ ಬಂದಿದೆ. ಈ ಕಾಯ್ದೆಯು ರಿಯಲ್ ಎಸ್ಟೇಟ್ ವಲಯದ ಅಗತ್ಯ ಕಾರ್ಯಾಚರಣೆ ಮತ್ತು ಸಾಂಸ್ಥಿಕ ಮೂಲಸೌಕರ್ಯ ನಿಯಮಗಳನ್ನು ರೂಪಿಸಲಿದೆ. ಕೇಂದ್ರ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಸಚಿವಾಲಯ ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗರಿಷ್ಠ 6 ತಿಂಗಳ ಅವಧಿಯೊಳಗೆ ರಿಯಲ್ ಎಸ್ಟೇಟ್ ವಲಯದ ಕಾಯ್ದೆಯ ಅನ್ವಯ ನಿಯಮಾವಳಿಗಳನ್ನು ರೂಪಿಸಲಿವೆ. ಈ ನೂತನ ಕಾಯ್ದೆಯ ಪ್ರಕಾರ ಒಂದು ವರ್ಷದೊಳಗೆ ರಿಯಲ್ ಎಸ್ಟೇಲ್ ನಿಯಂತ್ರಣ ಪ್ರಾಧಿಕಾರ ರಚನೆಯಾಗಲಿದೆ. ಇದು ಸಾರ್ವಜನಿಕರ ದೂರುಗಳನ್ನು 60 ದಿನಗಳಲ್ಲಿ ಇತ್ಯರ್ಥಪಡಿಸ ಬೇಕಾಗುತ್ತದೆ ಮತ್ತು ರಿಯಲ್ ಎಸ್ಟೇಟ್ ಮೇಲ್ಮನವಿ ನ್ಯಾಯಧೀಕರಣವು ಸಾರ್ವಜನಿಕ ವ್ಯಾಜ್ಯಗಳನ್ನು 60 ದಿನಗಳಲ್ಲಿ ಬಗೆಹರಿಸ ಬೇಕಾಗುತ್ತದೆ

* * *

ಉತ್ತರ ಪ್ರದೇಶದ ಬಲಿಯಾದಲ್ಲಿ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ, ಅವರು 'ಪ್ರಧಾನಮಂತ್ರಿ ಉಜ್ವಲ ಯೋಜನೆ'ಗೆ ಇತ್ತೀಚೆಗೆ ಚಾಲನೆ ನೀಡಿದರು. ಈ ಯೋಜನೆಯಡಿ, ಮುಂದಿನ ಮೂರು ವರ್ಷದಲ್ಲಿ, ಯಾವುದೇ ಭದ್ರತಾ ಠೇವಣಿ ಇಲ್ಲದೇ, ಬಿ.ಪಿ.ಎಲ್. ಕುಟುಂಬದ 5 ಕೋಟಿ ಮಹಿಳೆಯರಿಗೆ ಎಲ್.ಪಿ.ಜಿ. ಗ್ಯಾಸ್ ಸಂಪರ್ಕ ಕಲ್ಪಿಸಲಾಗುತ್ತಿದೆ.

ದೇಶದಲ್ಲಿ ಸುಮಾರು 1 ಕೋಟಿ 13 ಲಕ್ಷ ಎಲ್.ಪಿ.ಜಿ. ಗ್ಯಾಸ್ ಬಳಕೆದಾರರು, ಸರ್ಕಾರ ನೀಡುವ ವಿನಾಯ್ತಿಯನ್ನು ಬಿಟ್ಟುಕೊಟ್ಟಿದ್ದು, ಸರ್ಕಾರ ಹೀಗೆ ಉಳಿಸಿದ ಹಣದಿಂದ ಬಡವರಿಗೆ ಉಚಿತ ಎಲ್.ಪಿ.ಜಿ. ಸಂಪರ್ಕ ಕಲ್ಪಿಸಿ, ಬಡ ಹೆಣ್ಣು ಮಕ್ಕಳನ್ನು ಸೌದೆ ಬಳಕೆ ಹಾಗೂ ಹೊಗೆಯಿಂದ ಮುಕ್ತಗೊಳಿಸಲು ಮುಂದಾಗಿದೆ.

* * *

ಕರ್ನಾಟಕದ ಬರ ಪೀಡಿತ ಪ್ರದೇಶಗಳ ಕುರಿತು ಅಧ್ಯಯನ ನಡೆಸಲು ಬಂದಿದ್ದ ಕೇಂದ್ರ ತಂಡ ನೀಡಿದ ವರದಿ ಆಧರಿತ ಪ್ರಸ್ತಾವನೆ ಪರಿಶೀಲನೆ ಬಳಿಕ ಕೇಂದ್ರ ಗೃಹ ಸಚಿವ, ಶ್ರೀ ರಾಜ್‌ನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಮಿತಿ ಕರ್ನಾಟಕಕ್ಕೆ ಬರ ಪರಿಹಾರವಾಗಿ ರೂ. 723.23 ಕೋಟಿ ಮೊತ್ತದಷ್ಟು ಕೇಂದ್ರ ಆರ್ಥಿಕ ನೆರವು ನೀಡಲು ಅನುಮೋದನೆ ನೀಡಿದೆ. ನೆರೆ ಪೀಡಿತ ಪುದುಚೇರಿ ಮತ್ತು ಅರುಣಾಚಲ ಪ್ರದೇಶಗಳಿಗೆ ಕ್ರಮವಾಗಿ ರೂ. 35.14 ಕೋಟಿ ಮತ್ತು ರೂ. 84.33 ಕೋಟಿ ಕೇಂದ್ರ ನೆರವನ್ನು ನೀಡಲು ಸಮಿತಿ ಅನುಮೋದನೆ ನೀಡಿದೆ. ❑

## ಪ್ರಕಟಣಾ ವಿಭಾಗದ ವಿವಿಧ ನಿಯತಕಾಲಿಕೆಗಳ ಪರಿಷ್ಕೃತ ಚಂದಾದರಗಳು

## New Rates for Subscription of Journals

| S.No | Name of the Journal | Subscription Price Per Copy Rs | Subscription Price for 1 Year Rs | Subscription Price for 2 Years Rs | Subscription Price for 3 Years Rs | Subscription Price for Special Issue Rs |
|---|---|---|---|---|---|---|
| 1 | Yojana * | 22 | 230 | 430 | 610 | 30 |
| 2 | Kurukshetra * | 22 | 230 | 430 | 610 | 30 |
| 3 | Ajkal * | 22 | 230 | 430 | 610 | 30 |
| 4 | Bal Bharti * | 15 | 160 | 300 | 420 | 20 |
| 5 | Employment News # | 12 | 530 | 1000 | 1400 | NA |

*** The prices of Journals are revised from April 2016 issue onwards**

**# The Price of Employment News is revised from 6th February 2016 issue onwards.**